ಲಂಕೇಶ್

ಸೆಪ್ಟೆಂಬರ್ 9, 2009 ರೂ. 12/-



ಸ್ಕಾರ್ಫ್ ವಿವಾದ










ಶ್ರೀಲಂಕಾ ತಮಿಳರಿಗೆ ಕಂಡಲ್ಲಿ ಗುಂಡು!



ಮುರಿದ ಮನೆಗೆ ಅನಂತು ಅಧ್ಯಕ್ಷ?

ಾಘು ವಿರುದ್ಧ ಹವ್ಯಕರ ಬಂಡಾಯ






ಚಿನ್ನಮಂಗಲ ಕೃಷ್ಣಪ್ಪ ಹತ್ಯೆ ಸ್ಕೆಚ್ ಯಾರದ್ದು?



ವಿತರಕ ಕಿರಣ್‌ಗೆ ಪ್ರೇಮ್ ಬೆದರಿಕೆ!



ಪೊಲೀಸ್ ಜಗಳ



ಲಂಕೇಶ್

ಆಹಾರ ಭದ್ರತಾ ಕಾಯಿದೆ

ಬಡತನ ರೇಖೆಯಿಂದ ಕೆಳಗಿರುವವರನ್ನು ಪಾತಾಳಕ್ಕೆ ದೂಡುವ ಸನ್ನಾಹ!

ಎಲ್ಲ ಬಡವರಿಗೂ ಆಹಾರ ಭದ್ರತೆಯನ್ನು ನೀಡುವ ಹೆಸರಲ್ಲಿ ಸರ್ಕಾರ ಇದ್ದಬದ್ದ ಭದ್ರತೆಯನ್ನು ಕಿತ್ತುಕೊಳ್ಳುತ್ತಿದೆ. ಸರ್ಕಾರ ಹೀಗೇಕೆ ಮಾಡುತ್ತಿದೆ? ಸರ್ಕಾರದ ಪ್ರಕಾರ ಈ ರೀತಿ ಕಡುಬಡವರಿಗೆ ಟಾರ್ಗೆಟ್ ಮಾಡಿ ಆಹಾರ ನೀಡುವುದರಿಂದ ನಿಜವಾದ ಫಲಾನುಭವಿಗಳಿಗೆ ಯೋಜನೆಯ ಲಾಭ ದಕ್ಕುತ್ತದೆ. ಸರ್ಕಾರದ ಈ ತರ್ಕದ ಹಿಂದೆ ದಿನೇದಿನೇ ಬಡವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಕುತಂತ್ರ ಪೂರಿತವಾದ ವಾದವಿದೆ. ಸರ್ಕಾರಗಳ ಪ್ರಕಾರ 1991ರಿಂದ ಆರ್ಥಿಕ ಸುಧಾರಣೆ ಯೋಜನೆ ಜಾರಿಗೆ ಬಂದ ಬಳಿಕ ದೇಶದಲ್ಲಿ ಸಮೃದ್ಧಿ ಹೆಚ್ಚಿ ಅದರ ಫಲದಿಂದಾಗಿ ಬಡವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ರಾಜ್ಯ ಮಟ್ಟದಲ್ಲಿ ಭ್ರಷ್ಟಾಚಾರ ಹಾಗೂ ಇನ್ನಿತರ ಕಾರಣದಿಂದಾಗಿ ಸುಳ್ಳುಸುಳ್ಳೇ ಬಡವರ ಸಂಖ್ಯೆಯನ್ನು ಹೆಚ್ಚಾಗಿ ತೋರಿಸಲಾಗುತ್ತಿದೆ.

ದೇಶದ 600ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ 246 ಜಿಲ್ಲೆಗಳು ಬರದ ದವಡೆಗೆ ಸಿಕ್ಕಿದೆ ಎಂದು ಕೇಂದ್ರ ಸರ್ಕಾರವೇ ಘೋಷಿಸಿದೆ. ಅದರಲ್ಲೂ ಈ ಬಾರಿ ಖಾರಿಫ್ ಬೆಳೆ ಶೇ.50ರಷ್ಟು ಕೈಕೊಡುವ ಸಾಧ್ಯತೆ ಇದೆಯೆಂದು ಕೇಂದ್ರ ಕೃಷಿ ಇಲಾಖೆಯ ಅಂದಾಜುಗಳು ಹೇಳುತ್ತಿವೆ. ಕೇಂದ್ರ ಕಾರ್ಮಿಕ ಇಲಾಖೆಯ ಪ್ರಕಾರ 2002ರ ನಂತರ ದೇಶ ಕಾಣುತ್ತಿರುವ ಈ ಭೀಕರ ಬರಗಾಲದಿಂದ ಅತಿಹೆಚ್ಚು ಬಾಧೆಗೊಳಗಾಗುವವರು ಸಣ್ಣ ಮತ್ತು ಅತಿಸಣ್ಣ ರೈತರು ಮತ್ತು ಕೂಲಿ ಕಾರ್ಮಿಕರು. ಏಕೆಂದರೆ ಗ್ರಾಮಗಳಲ್ಲಿ ಕೃಷಿ ಚಟುವಟಿಕೆಯೇ ಪ್ರಾರಂಭವಾಗದೆ ನೆಲ ಹದಗೊಳಿಸುವ, ಬಿತ್ತನೆ, ಕಳೆ ಕೀಳುವಂತ ಕೆಲಸಗಳೇ ಪ್ರಾರಂಭವಾಗುವುದಿಲ್ಲ, ಇದರಿಂದಾಗಿಯೇ ಲಕ್ಷಾಂತರ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶದ ಕೂಲಿಗಳು ನಗರದತ್ತ ಗುಳೆ ಹೊರಡುತ್ತಿದ್ದಾರೆ.

ದೇಶದ ಬಡಜನತೆ ಇಂಥ ಹತಾಶ ಪರಿಸ್ಥಿತಿ ಎದುರಿಸುತ್ತಿರುವಾಗ ಬಡಜನರ ಹೆಸರಲ್ಲಿ ಅಧಿಕಾರಕ್ಕೆ ಬಂದಿರುವ ಸರ್ಕಾರವೊಂದು ಏನು ಮಾಡಬೇಕು? ಭೀಕರ ಬರಗಾಲ ಮೊದಲು ಕೊಲ್ಲುವುದು ಆಹಾರಕ್ಕೆ ಇತರ ಆದಾಯ ಮೂಲಗಳಿಲ್ಲದ ಕಡುಬಡವರನ್ನು, ಅಲ್ಲದೆ ಕೃಷಿಯೇತರ ಆದಾಯ ಮೂಲಗಳಿಲ್ಲದ ಸಣ್ಣ ರೈತರನ್ನು. ಹೀಗಾಗಿ ಸರ್ಕಾರ ಮೊದಲು ಅವರಿಗೆ ಆಹಾರ ಮೂಲಗಳನ್ನು ಒದಗಿಸಿ ಸಾವಿನಿಂದ ಪಾರು ಮಾಡಬೇಕು. ಇತರ ಉದ್ಯೋಗದ ದಾರಿಗಳನ್ನು ಒದಗಿಸಬೇಕು. ಇವೆರಡು ತತ್‌ಕ್ಷಣ ಮಾಡಬೇಕಾದ ಕೆಲಸ.


ಎರಡನೇ ಬಾರಿ ಅಧಿಕಾರ ಹಿಡಿದಿರುವ ಯು.ಪಿ.ಎ. ಸರ್ಕಾರ ಈ ನಿಟ್ಟಿನಲ್ಲಿ ಆಹಾರ ಭದ್ರತಾ ಕಾಯಿದೆಯನ್ನು ಸಹ ಸಂಸತ್ತಿನಲ್ಲಿ ಜಾರಿ ಮಾಡಿದೆ. ಪ್ರಧಾನ ಮಂತ್ರಿಯ ಪ್ರಕಾರ "ಈ ಕಾಯಿದೆಯ ಮೂಲಕ ಇನ್ನು ಮುಂದೆ ನಮ್ಮ ದೇಶದಲ್ಲಿ ಯಾರೊಬ್ಬರೂ ಹಸಿವಿನಿಂದ ಮಲಗಲು ಸರ್ಕಾರ ಬಿಡುವುದಿಲ್ಲ" ಏಕೆಂದರೆ ಈ ಕಾಯಿದೆಯು ಬಡತನ ರೇಖೆಯಿಂದ ಕೆಳಗಿರುವ ಎಲ್ಲಾ ಕಡುಬಡವರಿಗೂ ತಿಂಗಳಿಗೆ ಕೆಜಿಗೆ 3 ರೂ. ಲೆಕ್ಕದಲ್ಲಿ ಕನಿಷ್ಠ 25 ಕೆಜಿ ಆಹಾರ ಧಾನ್ಯಗಳನ್ನು ಒದಗಿಸಲಿದೆ. ಅಲ್ಲದೆ ಈಗ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ದೇಶದೆಲ್ಲೆಡೆಗೆ ವಿಸ್ತರಿಸಿರುವುದರಿಂದ ವರ್ಷದಲ್ಲಿ ಕನಿಷ್ಠ 100 ದಿನ, ದಿನಕ್ಕೆ 100 ರೂ. ಕೂಲಿಯಂತೆ ಖಾತರಿಯಾಗಿದೆ. ಹೀಗಾಗಿ ಯುಪಿಎ ಸರ್ಕಾರ ತನ್ನ ಚುನಾವಣಾ ಭರವಸೆಗಳನ್ನು ಈಡೇರಿಸಿದ ಸಾರ್ಥಕ್ಯವನ್ನು ಅನುಭವಿಸುತ್ತಿದೆ ಎಂದು ಪ್ರಧಾನ ಮಂತ್ರಿಯವರು ತಮ್ಮ ಸ್ವಾತಂತ್ರ್ಯ ದಿನೋತ್ಸವದ ಭಾಷಣದಲ್ಲಿ ಹೇಳಿಕೊಂಡಿದ್ದಾರೆ.

ಆದರೆ ಬರಗಾಲವು ದೇಶಾದ್ಯಂತ ಹಬ್ಬುತ್ತಾ ಸರ್ಕಾರದ ಭರವಸೆಯನ್ನು ಆಚರಣೆಯಲ್ಲಿ ಒರೆಗಲ್ಲಿಗೆ ಹಚ್ಚುವ ಸಂದರ್ಭ ಬರುತ್ತಿದ್ದಂತೆ ಯುಪಿಎ ಸರ್ಕಾರ ತನ್ನ ನಿಜಬಣ್ಣವನ್ನು ಬಯಲುಗೊಳಿಸಿದೆ.

ಒಂದೆಡೆ ಬರಗಾಲದ ತೀವ್ರತೆಯನ್ನು ಒಪ್ಪಿಕೊಳ್ಳುತ್ತಲೇ ಸರ್ಕಾರ ಸದ್ದುಗದ್ದಲವಿಲ್ಲದೆ ತಾನು ಮೊದಲು ನೀಡಿದ ಭರವಸೆಗಳಿಗೆ ಹಲವು ಪ್ರಮುಖ ತಿದ್ದುಪಡಿಗಳನ್ನು ತಂದಿದೆ.

-ಮೊದಲನೆಯದಾಗಿ ಈ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ಜನರಿಗೆ ಅತ್ಯಂತ ಸಹಾಯ ಮಾಡುತ್ತಿದ್ದದ್ದು ಆಹಾರ ಭದ್ರತಾ ಕಾಯಿದೆ. ಏಕೆಂದರೆ ಈ ಕಾಯಿದೆಯು ಬಡಜನರಿಗೆ ಆಹಾರ ನೀಡುವುದನ್ನು ಸರ್ಕಾರಕ್ಕೆ ಕಡ್ಡಾಯ ಮಾಡಿದ್ದಲ್ಲದೆ ಒಂದು ವೇಳೆ ಸರ್ಕಾರ ಆ ಕರ್ತವ್ಯವನ್ನು ಪೂರೈಸದಿದ್ದರೆ ಆ ಸರ್ಕಾರವನ್ನು ಕಾನೂನುಪ್ರಕಾರ ಅಪರಾಧಿ ಮಾಡುತ್ತಿತ್ತು, ಎಲ್ಲಾ ರಾಜ್ಯ ಸರ್ಕಾರಗಳು ತಮ್ಮ ತಮ್ಮ ರಾಜ್ಯದಲ್ಲಿರುವ ಅರ್ಹ ಕಡುಬಡವರ ಪಟ್ಟಿಯನ್ನು ಈಗಾಗಲೇ ಕೇಂದ್ರಕ್ಕೆ ಸಲ್ಲಿಸಿವೆ. ಅದರ ಪ್ರಕಾರ 108 ಕೋಟಿ ಜನಸಂಖ್ಯೆ ಇರುವ ನಮ್ಮ ದೇಶದಲ್ಲಿ ಕಡುಬಡವರ ಸಂಖ್ಯೆ ಕೇವಲ 11.03 ಕೋಟಿಯಂತೆ! ಅಂದರೆ ಶೇ.10ಕ್ಕಿಂತ ಕಡಿಮೆ. ಆದರೆ ಇದೇ ಸರ್ಕಾರದ ಅರ್ಜುನ್ ಗುಪ್ತಾ ಆಯೋಗ ಗ್ರಾಮೀಣ ಪ್ರದೇಶದ 35 ಕೋಟಿ ಜನ ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ಅಂದಾಜಿಸಿದೆ. ಅಂದರೆ ರಾಜ್ಯಗಳ ಅಂದಾಜಿಗಿಂತ ವಾಸ್ತವ ಬಡತನ ಶೇ.200ರಷ್ಟು ಹೆಚ್ಚಿದೆ. ಆದರೆ ಆಹಾರ ಭದ್ರತಾ ಕಾಯಿದೆಯ ಪ್ರಕಾರ ಅರ್ಹರಾದ ಎಲ್ಲರಿಗೂ ಆಹಾರ ಧಾನ್ಯ ಒದಗಿಸಲು ಯೋಜನೆ ಮಾಡಬೇಕಿರುವ ಕೇಂದ್ರ ಯೋಜನಾ ಆಯೋಗ ವಾಸ್ತವನ್ನಿರಲಿ ರಾಜ್ಯಗಳ ಅಂದಾಜನ್ನೂ ಒಪ್ಪುತ್ತಿಲ್ಲ. ರಾಜ್ಯಗಳು ಒಟ್ಟಾರೆ 11 ಕೋಟಿಗೂ ಹೆಚ್ಚು ಕಡುಬಡವರಿದ್ದಾರೆ ಎಂದು ಅಂದಾಜಿಸಿದ್ದರೂ ಆಹಾರ ಭದ್ರತಾ ಕಾಯಿದೆಯ ಪ್ರಕಾರ ತಿಂಗಳಿಗೆ 25 ಕೆಜಿ ಅಕ್ಕಿಯನ್ನು ಪಡೆಯಲು ಅರ್ಹರಾದ ಫಲಾನುಭವಿಗಳನ್ನು ಕೇವಲ 6.5 ಕೋಟಿಗೆ ಇಳಿಸಿ ಪ್ರಸ್ತಾಪ ಸಲ್ಲಿಸಿದ್ದವು. ಆದರೆ ಕೇಂದ್ರ ಹಣಕಾಸು ಆಯೋಗ ಅದನ್ನೂ ಒಪ್ಪಿಕೊಳ್ಳುತ್ತಿಲ್ಲ, ತೀವ್ರ ಬರಗಾಲ, ಬೆಳೆ ವೈಫಲ್ಯ ಮತ್ತು ನಿರುದ್ಯೋಗಗಳಿಂದ ಬಡತನ ಮತ್ತು ಕಡುಬಡತನದ ನಡುವಿನ ರೇಖೆಯೇ ಅಳಿಸಿಹೋಗುತ್ತಾ ಕೋಟ್ಯಾಂತರ ಹೊಸಬರು ಕಡುಬಡವರ ಸಾಲಿಗೆ ಸೇರ್ಪಡೆಯಾಗುತ್ತಿರುವ ಈ ಹೊತ್ತಿನಲ್ಲಿ ಕೇಂದ್ರ ಹಣಕಾಸು ಆಯೋಗ ಆಗಸ್ಟ್ 20 ರಂದು ಎಲ್ಲಾ ರಾಜ್ಯಗಳಿಗೂ ಸುತ್ತೋಲೆಯೊಂದನ್ನು ಕಳಿಸಿ "ಎಲ್ಲಾ ರಾಜ್ಯಗಳೂ ತಮ್ಮ ಕಡುಬಡವರ ಪಟ್ಟಿಯನ್ನು ಪುನರ್ ಪರಿಶೀಲಿಸಿ ಕಡುಬಡವರ ಸಂಖ್ಯೆಯನ್ನು ಕೇವಲ 5.9ಕೋಟಿಗೆ ಇಳಿಸತಕ್ಕದ್ದೆಂದು" ಸೂಚನೆ ನೀಡಿದೆ! ಹಾಗಿದ್ದಲ್ಲಿ ಉಳಿದವರ ಕಥೆ? ಕಾರ್ಪೊರೇಟ್ ಧಣಿಗಳು ಅಹವಾಲು ಸಲ್ಲಿಸಿದೊಡನೆ ವಿವಿಧ ಕ್ಷೇತ್ರಗಳ ಉದ್ಯಮಿಗಳಿಗೆ ರಿಯಾಯತಿಗಳನ್ನು ಮತ್ತು ಸಬ್ಸಿಡಿಗಳನ್ನು ಘೋಷಿಸುವ ಈ ಸರ್ಕಾರ ಬರಗಾಲದಿಂದ ದಿನೇದಿನೇ ಕಡುಬಡತನಕ್ಕೆ ದೂಡಲ್ಪಡುತ್ತಿರುವವರ ಸಂಖ್ಯೆ ಹೆಚ್ಚುತ್ತಿದ್ದರೂ ಅವರಿಗೆ ಕೊಡಬೇಕಿದ್ದ ರಿಯಾಯತಿಯನ್ನೂ ಕಡಿತಗೊಳಿಸುತ್ತಿರುವುದೇಕೆ?

- ಎರಡನೆಯದಾಗಿ "ಆಹಾರ ಭದ್ರತಾ ಕಾಯಿದೆಯ" ಅನುಷ್ಠಾನದ ಹೆಸರಲ್ಲಿ ಹೊರಡಿಸಲಾಗಿರುವ ಈ ಸುತ್ತೋಲೆ ಎಲ್ಲಾ ಬಡವರಿಗೂ ಆಹಾರ ಭದ್ರತೆಯನ್ನು ನೀಡುವ ಬದಲು ಇದ್ದ ಭದ್ರತೆಯನ್ನೂ ಕಿತ್ತುಕೊಳ್ಳುತ್ತಿದೆ. ಕೇಂದ್ರ ಸರ್ಕಾರದ ಈ ಹೊಸ ಆದೇಶ "For the proposed law, of crucial importance is the issue of numerical ceiling for BPL families who would be entitled to receive a certain minimum quantity of subsidised foodgrains per mont?" - ಎಂದು ಈ ಕಾಯಿದೆ ಜಾರಿಗೆ ತರಲು ಫಲಾನುಭವಿಗಳ ಸಂಖ್ಯೆ ಆದಷ್ಟೂ ಕಡಿಮೆ ಮಾಡುತ್ತಲೇ ಹೋಗುವುದು ಅತ್ಯಗತ್ಯವೆಂದು ಯಾವುದೇ ಮುಚ್ಚುಮರೆಯಿಲ್ಲದೆ ಹೇಳುತ್ತದೆ. ಹೀಗೆ ಬಡವರ ಸಂಖ್ಯೆಯನ್ನು ಕಡಿಮೆ ಮಾಡುವ



ಚಾರ್ವಾಕ

▸ ಶಿವಸುಂದರ್

ಸಲುವಾಗಿ ಇನ್ನೂ ಎರಡು ಮೂರು ಕ್ರಮಗಳನ್ನು ಹಾಕಿಕೊಳ್ಳಲಿದೆ. ಮೊದಲನೆಯದಾಗಿ ಕೇಂದ್ರ ಯೋಜನಾ ಆಯೋಗ ಇದೇ ಉದ್ದೇಶಕ್ಕಾಗಿ ಬಡತನವನ್ನು ಅಳೆಯುವ ಹೊಸ ಮಾನದಂಡಗಳನ್ನು ರೂಪಿಸಲಿದೆ. ಎರಡನೆಯದಾಗಿ ಪ್ರತಿ ಐದು ವರ್ಷಗಳಿಗೊಮ್ಮೆ ಈ ಹೊಸ ಮಾನದಂಡದ ಆಧಾರದಲ್ಲಿ ಬಡವರ ಸಂಖ್ಯೆಯ ಪುನರ್ ವಿಮರ್ಶೆ ನಡೆಯಲಿದೆ. ಈ ಹೊಸ ಮಾನದಂಡಗಳು ನಿಜಕ್ಕೂ ಕಡುಬಡತನವನ್ನು ಗುರುತಿಸುವ ಉದ್ದೇಶ ಹೊಂದಿಲ್ಲವೆಂಬುದಕ್ಕೆ ಯಾವುದೇ ಹೊಸ ನಿದರ್ಶನಗಳ ಅಗತ್ಯವಿಲ್ಲ, ಯಾವುದೇ ಹೊಸ ಮಾನದಂಡಗಳನ್ನು ರೂಪಿಸುವ ಮೊದಲೇ ಮತ್ತು ಅದನ್ನು ಆಧರಿಸಿ ಯಾವುದೇ ಕ್ಷೇತ್ರ ಅಧ್ಯಯನ ಮಾಡದೇ ಯೋಜನಾ ಆಯೋಗ ಈ ದೇಶದಲ್ಲಿರುವ ಕಡು ಬಡವರ ಸಂಖ್ಯೆ 6.5ಕೋಟಿಯಲ್ಲ ಬದಲಿಗೆ 5.9 ಕೋಟಿ ಎಂಬ ತೀರ್ಮಾನಕ್ಕೆ ಹೇಗೆ ಬಂದಿತು? ಅದರ ಹಿಂದೆ ಇರುವುದು ಅರ್ಹ ಫಲಾನುಭವಿಗಳನ್ನು ಗುರುತಿಸುವ ಉದ್ದೇಶವಲ್ಲ, ತಮ್ಮಲ್ಲಿರುವ ಹಣಕಾಸಿಗೆ ತಕ್ಕಂತೆ ಫಲಾನುಭವಿಗಳನ್ನು ಕಡಿತಗೊಳಿಸುವ ಹುನ್ನಾರ!

- ಮೂರನೆಯದಾಗಿ ಕೇಂದ್ರ ಸರ್ಕಾರದ ಈ ಹೊಸ ಆಹಾಳ ಭದ್ರತಾ ಕಾಯಿದೆ ಈವರೆಗೆ ಬಡತನ ರೇಖೆಯಿಂದ ಮೇಲಿರುವ ಬಡವರಿಗೂ ನೀಡುತ್ತಿದ್ದ ರಿಯಾಯತಿ ದರದ ಆಹಾರ ಸಬ್ಸಿಡಿಯನ್ನೂ ಹಿಂತೆಗೆದುಕೊಳ್ಳಬೇಕೆಂಬ ಪ್ರಸ್ತಾಪವನ್ನು ಮುಂದಿಟ್ಟಿದೆ! ಅಂದರೆ ಇನ್ನುಮುಂದೆ 5.9 ಕೋಟಿ ಕಡುಬಡವರನ್ನು ಹೊರತುಪಡಿಸಿ ಉಳಿದ 40 ಕೋಟಿಗೂ ಹೆಚ್ಚು ಬಡವರಿಗೆ ಯಾವುದೇ ಬಗೆಯ ರಿಯಾಯತಿ ದೊರೆಯುವುದಿಲ್ಲ, ಆ ಮೂಲಕ ಅವರನ್ನು ಬಡತನ ರೇಖೆಯಿಂದ ಕೆಳಗಲ್ಲ, ಪಾತಾಳಕ್ಕೆ ತಳ್ಳುವ ಹುನ್ನಾರವನ್ನು ಕೇಂದ್ರ ಸರ್ಕಾರ ನಡೆಸುತ್ತಿದೆ.

- ನಾಲ್ಕನೆಯದಾಗಿ ಬೆಂದ ಮನೆಯಲ್ಲಿ ಜಂತಿ ಎಣಿಸುವಂತೆ ಸರ್ಕಾರ ಈ ಪರಿಸ್ಥಿತಿಯನ್ನು ಬಳಸಿಕೊಂಡು ಆಹಾರವನ್ನು ಆಮದು ಮಾಡಿಕೊಳ್ಳುವ ನಿರ್ಧಾರ ಘೋಷಿಸಿದೆ.



- ಐದನೆಯದಾಗಿ ಬರಗಾಲವನ್ನು ಎದುರಿಸುವ ಕ್ರಮಗಳನ್ನು ರೂಪಿಸುವ ಸಲುವಾಗಿ ಕೇಂದ್ರ ಸರ್ಕಾರ ರಚಿಸುವ ಕ್ಯಾಬಿನೆಟ್ ಉಪಸಮಿತಿ ಬರಗಾಲವಿದ್ದರೂ ಸರಿ ಯಾವ ಕಾರಣಕ್ಕೂ ಈ ಬಾರಿ ರೈತರ ಸಾಲವನ್ನು ಮನ್ನಾ ಮಾಡುವುದಿಲ್ಲ ಎಂದು ತೀರ್ಮಾನಿಸಿದೆ.

ಹೀಗಾಗಿ ಸಾರಾಂಶದಲ್ಲಿ ನೋಡುವುದಾದರೆ ಎಲ್ಲ ಬಡವರಿಗೂ ಆಹಾರ ಭದ್ರತೆಯನ್ನು ನೀಡುವ ಹೆಸರಲ್ಲಿ ಸರ್ಕಾರ ಇದ್ದಬದ್ದ ಭದ್ರತೆಯನ್ನು ಕಿತ್ತುಕೊಳ್ಳುತ್ತಿದೆ. ಸರ್ಕಾರ ಹೀಗೇಕೆ ಮಾಡುತ್ತಿದೆ? ಸರ್ಕಾರದ ಪ್ರಕಾರ ಈ ರೀತಿ ಕಡುಬಡವರಿಗೆ ಟಾರ್ಗೆಟ್ ಮಾಡಿ ಆಹಾರ ನೀಡುವುದರಿಂದ ನಿಜವಾದ ಫಲಾನುಭವಿಗಳಿಗೆ ಯೋಜನೆಯ ಲಾಭ ದಕ್ಕುತ್ತದೆ. ಸರ್ಕಾರದ ಈ ತರ್ಕದ ಹಿಂದೆ ದಿನೇದಿನೇ ಬಡವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಕುತಂತ್ರ ಪೂರಿತವಾದ ವಾದವಿದೆ. ಸರ್ಕಾರಗಳ ಪ್ರಕಾರ 1991ರಿಂದ ಆರ್ಥಿಕ ಸುಧಾರಣೆ ಯೋಜನೆ ಜಾರಿಗೆ ಬಂದ ಬಳಿಕ ದೇಶದಲ್ಲಿ ಸಮೃದ್ಧಿ ಹೆಚ್ಚಿ ಅದರ ಫಲದಿಂದಾಗಿ ಬಡವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ರಾಜ್ಯ ಮಟ್ಟದಲ್ಲಿ ಭ್ರಷ್ಟಾಚಾರ ಹಾಗೂ ಇನ್ನಿತರ ಕಾರಣದಿಂದಾಗಿ ಸುಳ್ಳುಸುಳ್ಳೇ ಬಡವರ ಸಂಖ್ಯೆಯನ್ನು ಹೆಚ್ಚಾಗಿ ತೋರಿಸಲಾಗುತ್ತಿದೆ.

ಆದರೆ ಈ ವಾದದ ಸತ್ಯಾಂಶವೆಷ್ಟು? ಬಡವರು ಯಾರು ಎಂಬುದನ್ನು ನಿಷ್ಕರ್ಷೆ ಮಾಡಲು ಹಲವು ಮಾನದಂಡಗಳು ಇದ್ದರೂ 1970ರಿಂದ ಸರ್ಕಾರ ನಿರ್ದಿಷ್ಟ ಪ್ರಮಾಣದ ಪೌಷ್ಟಿಕಾಂಶ ಪಡೆದುಕೊಳ್ಳಲು ಎಷ್ಟು ಆದಾಯ ಬೇಕಾಗುತ್ತದೆ ಎಂಬ ಆಧಾರದ ಮೇಲೆ ಬಡತನ ರೇಖೆಯನ್ನು ನಿಗದಿಗೊಳಿಸುತ್ತದೆ. ಭಾರತದಲ್ಲಿ ಒಬ್ಬ ಆರೋಗ್ಯವಂತ ಮನುಷ್ಯನಿಗೆ ಪ್ರತಿನಿತ್ಯ 2400 ಕ್ಯಾಲೋರಿಯಷ್ಟು ಶಕ್ತಿ ಬೇಕು. ಇಷ್ಟನ್ನು ಪಡೆದುಕೊಳ್ಳಲು ಜನರು ಎಷ್ಟು ಹಣ ವ್ಯಯಿಸಬೇಕಾಗುತ್ತದೆ ಎಂಬುದು ಕಾಲಕಾಲಕ್ಕೆ ಬದಲಾಗುತ್ತಲೇ ಇರುತ್ತದೆ. ಉದಾಹರಣೆಗೆ ಇದರ ಬಗ್ಗೆ ದೇಶದ ಪೌಷ್ಟಿಕಾಂಶ ಪರಿಣಿತರ ತಂಡ 1969ರಲ್ಲಿ ವರದಿ ನೀಡಿದ ನಂತರ ಇಷ್ಟು ಪ್ರಮಾಣದ ಆಹಾರ ಪಡೆದುಕೊಳ್ಳಲು 1970ರಲ್ಲಿ ತಿಂಗಳಿಗೆ 35-40

ರೂ. ಖರ್ಚಾಗುತ್ತದೆ ಎಂದು ಅಂದಾಜು ಮಾ
ಯಿತು. ಅದೇ ಮಾನದಂಡಗಳನ್ನೇ ಈಗ
ಇಟ್ಟುಕೊಂಡು ತಿಂಗಳಿಗೆ ಗ್ರಾಮೀಣ ಪ್ರದೇಶದಲ್ಲಿ
ರೂ. ಗಳಷ್ಟು ಆದಾಯವಿದ್ದರೆ ಮತ್ತು ನಗರ ಪ್ರದೇ
400 ರೂ.ಗಳಷ್ಟು ಆದಾಯವಿದ್ದರೆ ಅವರನ್ನು ಬ
ರೇಖೆಗಿಂತ ಮೇಲಿರುವವರೆಂದೂ, ಅದಕ್ಕಿಂತ ಕ
ಆದಾಯವಿರುವವರನ್ನು ಬಡತನ ರೇಖೆಗಿಂತ ಕೆಳಗಿ
ವರೆಂದು ವರ್ಗೀಕರಿಸಲಾಗುತ್ತಿದೆ. ಆದರೆ ಅವ
ಇವತ್ತಿಗೂ ಸಾಕಷ್ಟು ವ್ಯತ್ಯಾಸವಿದೆ. ಈ ಮಾನದಂಡ
ಆಹಾರೇತರ ವೆಚ್ಚಗಳನ್ನು ಗಣನೆಗೇ ತೆಗೆದುಕೊಳ್ಳುವು
ಉದಾಹರಣೆಗೆ ಅಂದಿಗೂ, ಇಂದಿಗೂ ಕುಡಿ
ನೀರು, ಉರುವಲು, ವಿದ್ಯುತ್, ಆರೋಗ್ಯ
ಇನ್ನಿತರ ವೆಚ್ಚಗಳು ಗಗನ ಮುಟ್ಟಿವೆ. ಹೀಗಾಗಿ ಅವು
ಗಣನೆಗೆ ತೆಗೆದುಕೊಳ್ಳದೆ ಜನರು ಆಹಾರದ
ಎಷ್ಟು ವೆಚ್ಚ ಮಾಡಬಲ್ಲರೆಂಬುದನ್ನು ಅಂದಾಜು ಮ
ವುದೇ ಸಾಧ್ಯವಿಲ್ಲ, ಏಕೆಂದರೆ ಈ ಅತ್ಯಗತ್ಯ ವೆಚ್ಚ
ಮಾಡಿದ ನಂತರ ಆಹಾರದ ವೇಲೆ ಮಾಡುವ
ಗಣನೀಯವಾಗಿ ಕಡಿಮೆಯಾಗುತ್ತದೆ. ಒ
ಅಂದಾಜಿನ ಪ್ರಕಾರ ಭಾರತಕ್ಕೆ ಸ್ವಾತಂತ್ರ್ಯ ಬಂ
ಭಾರತೀಯರ ತಲಾವಾರು ಆಹಾರ
ತಿಂಗಳಿಗೆ ಕೇವಲ 155 ಕೆಜಿ.ಗಳಷ್ಟು ಮಾತ್ರ
ಇದು ಕ್ರಮೇಣ ಸ್ವಲ್ಪಸ್ವಲ್ಪವೇ ಜಾಸ್ತಿ ಯಾ
ಬಂದು 1991ರಲ್ಲಿ ಉದಾರೀಕರಣ ಪ್ರ
ಪ್ರಾರಂಭವಾಗುವ ಮುನ್ನ 175 ಕೆಜಿಗೆ ಏ
1991ರ ನಂತರ ಈ ಆಹಾರ ಬಳಕೆ ಪ್ರಮ
ಕಡಿಮೆಯಾಗುತ್ತಾ ಬಂದು ಈಗ ತಲಾ
ಬಳಕೆ ಪ್ರಮಾಣ 155 ಕೆಜಿಗೆ ಕುಸಿದಿದೆ. ಅ
ನಮ್ಮ ದೇಶದ ಬಡವರ ಕೊಳ್ಳುವ ಶಕ್ತಿ ದಿನೇ
ಕುಗ್ಗುತ್ತಿದೆ. ಹೀಗಾ ಗಿಯೇ ಇನ್ನೂ ಹೆಚ್ಚು
ಬಡವರನ್ನು ರಿಯಾಯತಿ ಆಹಾರ ಸರಬರ
ಕಾರ್ಯಕ್ರಮದಡಿ ತರುವ ಅಗತ್ಯವಿದೆ. ಕಡುಬಡ
ಮಾತ್ರ ಟಾರ್ಗೆಟೆಡ್ ಪಡಿತರ ಪದ್ಧತಿ ಎಂಬುದರ ಬ
ಎಲ್ಲಾ ಬಡವರಿಗೂ ರಿಯಾಯತಿ ದರದ ಆ
ಧಾನ್ಯ ಸರಬರಾಜು ಮಾಡುವ ಸಾರ್ವತ್ರಿಕ ಪ
ಪದ್ಧತಿ ಜಾರಿಗೆ ಬರಬೇಕಿದೆ.

ಹಾಗಿದ್ದಲ್ಲಿ ದೇಶದಲ್ಲಿರುವ ಎಲ್ಲಾ ಬಡವ
ಅಂದರೆ ಅಂದಾಜು 40 ಕೋಟಿ ಬಡವರಿಗೆ ಕೆಜಿ
ರೂ. ಲೆಕ್ಕದಲ್ಲಿ 25 ಕೆಜಿ ಆಹಾರ ಧಾನ್ಯ ಕೊ
ಎಷ್ಟು ಖರ್ಚಾಗಬಹುದು? ಒಂದು ಕೆಜಿ ಧಾನ್ಯಕ್
ರೂ. ರಿಯಾಯತಿ ಕೊಟ್ಟರೂ ತಿಂಗಳಿಗೆ ಒಬ್ಬ ಬಡ
ಸರ್ಕಾರ ಕೊಡುವ ರಿಯಾಯತಿ ಕೇವಲ 250
ಮಾತ್ರ. ಅಂದರೆ ವರ್ಷಕ್ಕೆ 3000 ರೂ. ಮಾತ್ರ
ಲೆಕ್ಕದಲ್ಲಿ ಈ ದೇಶದ ಎಲ್ಲಾ 40 ಕೋಟಿ ಬಡ
ಹಸಿವಿನಿಂದ ಸಾಯದಂತೆ ಮತ್ತು ಆತ್ಮಹತ್ಯೆ ಮಾಡ
ದಂತೆ ಮಾಡಲು ವರ್ಷಕ್ಕೆ ಬೇಕಿರುವುದು
1,20,000 ಕೋಟಿ ರೂ.ಗಳು ಮಾತ್ರ! ಇದರ ಜ
ಈ ಧಾನ್ಯವನ್ನು ಗ್ರಾಮಗಳಿಗೆ ತಲುಪಿಸಲು
ಸಂಗ್ರಹಿಸಿಡಲು 50,000 ಕೋಟಿ ರೂ. ವೆಚ್ಚ
ತ್ತದೆಂದು ಹಿಡಿದರೂ ಸರ್ಕಾರಕ್ಕೆ ಈ ದೇಶದ ಬ
ಪ್ರಾಣವನ್ನು ಉಳಿಸಲು ಆಗುವ ವೆಚ್ಚ ಕೇವಲ 1,75
ಕೋಟಿ ರೂ.ಗಳು ಮಾತ್ರವೇ!

ಇಷ್ಟು ಹಣ ಸರ್ಕಾರದ ಬಳಿ ಇಲ್ಲವೇ?
ಕೆಳಗಿನ ಅಂಕಿಅಂಶಗಳನ್ನು ಗಮನಿಸಿ. ಎಸ್.ಇ.ಜೆ
ಹೆಸರಲ್ಲಿ ಈ ದೇಶದ ಕೋಟ್ಯಾಧಿಪತಿ ಉದ್ಯಮಿ
ಪ್ರತಿವರ್ಷ ಸರ್ಕಾರ 1,75,000 ಕೋಟಿ
ರಿಯಾಯತಿ ನೀಡುತ್ತಿದೆ. ಕಳೆದ ಸಾಲಿನ ಬಜೆ
ಸರ್ಕಾರ ಉದ್ಯಮಿಗಳಿಗೆ ನೀಡಿರುವ ಪ್ರತ್ಯಕ್ಷ
ಪರೋಕ್ಷ ರಿಯಾಯತಿಯ ಮೊತ್ತ 3,45
ಕೋಟಿಗಳು ಮಾತ್ರ!!

ಹೀಗಾಗಿ ಪ್ರಶ್ನೆ ಇರುವುದು ಸರ್ಕಾರ
ದುಡ್ಡಿದೆಯೋ ಇಲ್ಲವೋ ಎಂಬುದಲ್ಲ! ಸರ್ಕಾರ ಯ
ಎಂಬುದು! ಅಲ್ಲವೇ?

...ಮದುವೆಗೆ 'ರಸ್ತೆ' ಯಾವುದಯ್ಯಾ?



ಕಂಡಹಾಗೆ

■ ಗೌರಿ ಲಂಕೇಶ್




...ದ ವರ್ಷ ಬಿಹಾರ ರಾಜ್ಯದ ಗ್ರಾಮವೊಂದರಲ್ಲಿ ... ಎಂಬ ದಿಟ್ಟ ಮನುಷ್ಯ ತನ್ನ ಹಳ್ಳಿಗರ ನೆರವಿಗೆಂದು ... ವರ್ಷಗಳ ಕಾಲ ಶ್ರಮಿಸಿ ಒಂದು ಬೆಟ್ಟವನ್ನೇ ... ಕಚ್ಚಾರಸ್ತೆಯನ್ನು ನಿರ್ಮಿಸಿದ್ದರ ಬಗ್ಗೆ ಬರೆದಿದ್ದೆ. ...ರ ಅಂತಹದ್ದೇ ಇನ್ನೊಂದು ಪ್ರಕರಣದ ಬಗ್ಗೆ ...ತ್ತಿದ್ದೇನೆ. ಇದು ಕೂಡ ಅದೇ ಬಿಹಾರ ರಾಜ್ಯದಲ್ಲಿ ...ವಂತಹದ್ದು.

... ಈ ವಾರ ಗೋವಿಂದರಾಜನಗರದಲ್ಲಿ ಸೋಮಣ್ಣ ...ಷ್ಟು ದೆಹಲಿಯಲ್ಲಿ ಬಿಜೆಪಿ ನಾಯಕರು ಕಿತ್ತಾಡಿ ...ರುವುದು ಇತ್ಯಾದಿಗಳ ಬಗ್ಗೆ ಬರೆಯಬಹುದಿತ್ತು. ಅವುಗಳ ಬಗ್ಗೆ ನನ್ನ ಸಹೋದ್ಯೋಗಿಗಳು ಈ ...ಮಲ್ಲಿ ಬರೆದಿರುವುದರಿಂದ ಇಲ್ಲಿ ನಾನು ಈ ...ಲಕರ ಹಳ್ಳಿ ಮತ್ತು ಅದರ ಅವಿವಾಹಿತ ಪುರುಷರ ... ಮತ್ತು ಸಾಹಸದ ಬಗ್ಗೆ ಬರೆಯುತ್ತಿದ್ದೇನೆ. ...ರೆ ಈ ಕತೆ ಒಂದು ರೀತಿಯಲ್ಲಿ human ...st ಕತೆಯೂ ಹೌದು, ಇನ್ನೊಂದು ರೀತಿಯಲ್ಲಿ ...ಭುತ್ವ ಜನರ ಆಶೋತ್ತರಗಳಿಗೆ ಹೇಗೆ ಪ್ರತಿಕ್ರಿಯಿ... ಎಂದು ಮತ್ತೊಮ್ಮೆ ಸಾಬೀತುಪಡಿಸುವ ಉದಾ...ಯೂ ಹೌದು.

... ಕತೆ ನಡೆಯುತ್ತಿರುವುದು ಬಿಹಾರದ ಪಶ್ಚಿಮ ... ಕೈಮೂರ್ ಪರ್ವತ ಶ್ರೇಣಿಯಲ್ಲಿರುವ ಬರ್ವಾನ್ ... ಎಂಬ ಗ್ರಾಮದಲ್ಲಿ. ಈ ಹಳ್ಳಿ ಬೆಟ್ಟವೊಂದರ ...ಮಲ್ಲದೆ, ಅದರ ಸುತ್ತ ರಕ್ಷಿತ ಅರಣ್ಯ ಪ್ರದೇಶವಿದೆ. ... ಎರಡು ಸಾವಿರ ಜನ ವಾಸಿಸುತ್ತಿರುವ ಬರ್ವಾನ್ ...ಗ್ರಾಮವನ್ನು ಯಾರೇ ಆಗಲಿ ತಲುಪಬೇಕೆಂದರೆ ... ಮೂರು ಗಂಟೆಗಳ ಕಾಲ ಕಾಲ್ನಡಿಗೆಯಲ್ಲಿ ...ಬೇಕು ಮತ್ತು ಆನಂತರ ಎರಡು ಗಂಟೆಗಳ ...ಟ್ಟವನ್ನು ಹತ್ತಬೇಕು. ರಸ್ತೆ ಸಂಪರ್ಕವಿಲ್ಲದಿರುವ ...ಮ ಈ ಕಾರಣಕ್ಕಾಗಿಯೇ ಇವತ್ತು ಕೆಲ ಮೂಲ ...ವಲತ್ತುಗಳಿಂದ ವಂಚಿತವಾಗಿದೆ. ಇಲ್ಲಿಗೆ ವಿದ್ಯುಚ್ಛಕ್ತಿ ...ಜು ಇಲ್ಲವೇ ಇಲ್ಲ, ಇಡೀ ಹಳ್ಳಿಯಲ್ಲಿರುವ ನಾಲ್ಕು ಕೊಳವೆ ಬಾವಿಗಳು ಬತ್ತಿವೆಯಲ್ಲದೆ, ಅವುಗಳ ಪಂಪ್‌ಗಳು ಕೂಡ ಕೈಕೊಟ್ಟಿದ್ದು ಗ್ರಾಮಸ್ಥರಿಗೆ ಕುಡಿಯುವ ನೀರೂ ಇಲ್ಲ. ಸರ್ಕಾರಿ ಶಾಲೆ ಇದ್ದರೂ ಅದಕ್ಕೆ ಅಧ್ಯಾಪಕರಿಲ್ಲ. ಪೋಸ್ಟ್ ಆಫೀಸ್, ಪೊಲೀಸ್ ಠಾಣೆ ಮತ್ತು ಆಸ್ಪತ್ರೆಯಂತೂ ಇಲ್ಲವೇ ಇಲ್ಲ. ಅವೆಲ್ಲ 45 ಕಿ.ಮೀ. ದೂರದಲ್ಲಿದ್ದು ಅವುಗಳನ್ನು ತಲುಪುವುದು ಸುಲಭವಲ್ಲ.

ಈ ಎಲ್ಲ ಕಾರಣಗಳಿಂದಾಗಿ ಈ ಹಳ್ಳಿಯಲ್ಲಿ ಒಂದು ವಿಚಿತ್ರ ಬೆಳವಣಿಗೆಯಾಗಿದೆ. ಅದೇನೆಂದರೆ ಈ ಹಳ್ಳಿಯ ಪುರುಷರಿಗೆ ಯಾರೂ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡಲು ಇಚ್ಛಿಸದಿರುವುದು. ಪರಿಣಾಮವಾಗಿ ಇವತ್ತು ಬರ್ವಾನ್ ಕಾಲಾ ಗ್ರಾಮದಲ್ಲಿ 18 ರಿಂದ 80 ವಯಸ್ಸಿನ ತನಕ ಸುಮಾರು 121 ಅವಿವಾಹಿತ ಪುರುಷರಿದ್ದಾರೆ! ಬರ್ವಾನ್ ಕಾಲಾ ಗ್ರಾಮಸ್ಥರೇ ಹೇಳುವಂತೆ ಆ ಹಳ್ಳಿಯಲ್ಲಿ ಒಂದು ವಿವಾಹ ಸಂಭ್ರಮ ನಡೆದು ಐವತ್ತು ವರ್ಷಗಳೇ ಸಂದಿವೆ!



ಶಾಸಕ ಯಾದವ್

ಈ ಗ್ರಾಮದ ಹೆಣ್ಣು ಮಕ್ಕಳ ತಂದೆ ತಾಯಂದಿರು ತಮ್ಮ ಹುಡುಗಿಯ ರಾದರೂ ಈ ನತದೃಷ್ಟ ಹಳ್ಳಿಯ ಬದಲಾಗಿ ಬೇರೆ ಯಾವುದಾದರೂ ಹಳ್ಳಿಯಲ್ಲಿ ವಾಸಿಸಲಿ ಎಂದು ಅವರನ್ನು ತಮ್ಮ ಗ್ರಾಮದ ಪುರುಷರಿಗೆ ಮದುವೆ ಮಾಡಿಕೊಡುವುದಿಲ್ಲ. ಇನ್ನು ಪುರುಷರ ಪಾಡು ಇದಕ್ಕಿಂತ ಭಿನ್ನವಾಗಿಲ್ಲ. ಕಳೆದ ಐದು ದಶಕಗಳಲ್ಲಿ ಬರ್ವಾನ್ ಕಾಲಾ ಗ್ರಾಮದ ಕೆಲ ಪುರುಷರು ಮದುವೆ ಆಗಿರುವುದು ಹುಡುಗಿಯ ಕಡೆಯವರನ್ನು ವಂಚಿಸುವ ಮೂಲಕ. ಅದು ಹೇಗೆಂದರೆ ಇವರು ಕೆಲಕಾಲ ಈ ಗ್ರಾಮದಿಂದ ಹೊರಗೆ ಹೋಗಿ ಜೀವಿಸುವುದು; ತಾವು ಅದೇ ಗ್ರಾಮದವರೆಂದು ನಂಬಿಸಿ ಹುಡುಗಿಯನ್ನು ಮದುವೆ ಆಗುವುದು; ಕೊನೆಗೆ ಮದುವೆ 'ಗಟ್ಟಿ' ಆದನಂತರ ನಿಜವನ್ನು ಹೇಳಿ ತಮ್ಮ ಹೆಂಡತಿಯನ್ನು ಬಲವಂತವಾಗಿ ಬರ್ವಾನ್ ಕಾಲಾ ಗ್ರಾಮಕ್ಕೆ ಕರೆದುಕೊಂಡು ಬರುವುದು. ಆದರೆ ಇಂತಹ ತಂತ್ರದಲ್ಲಿ ಬಹಳಷ್ಟು ಜನ ಯಶಸ್ವಿ ಆಗಿಲ್ಲದಿರುವುದರಿಂದಲೇ ಇವತ್ತು ಅಲ್ಲಿ ಅಷ್ಟೊಂದು ಸಂಖ್ಯೆಯಲ್ಲಿ ಅವಿವಾಹಿತ ಪುರುಷರಿದ್ದಾರೆ.

ಸುತ್ತಮುತ್ತಲ ಹಳ್ಳಿಗರಲ್ಲಿ 'ಅವಿವಾಹಿತರ ಗ್ರಾಮ' ಎಂಬ ಅಡ್ಡ ಹೆಸರು ಪಡೆದಿರುವ ಬರ್ವಾನ್ ಕಾಲಾದ ಜನ ತಮ್ಮ ದುರಾದೃಷ್ಟಕ್ಕೆ ರಸ್ತೆ ಸಂಪರ್ಕ ಇಲ್ಲದಿರುವುದೇ ಕಾರಣ ಎಂದು ನಿರ್ಧರಿಸಿದರು; ಹೇಗಾದರೂ ಮಾಡಿ ಒಂದು ರಸ್ತೆ ಸವಲತ್ತನ್ನು ಪಡೆಯಬೇಕೆಂದು ಯೋಚಿಸಿದರು. 2005 ರಲ್ಲಿ ಬಿಹಾರದ ವಿಧಾನಸಭೆಗೆ ಚುನಾವಣೆಗಳು ನಡೆದಾಗ ಬಿಎಸ್‌ಪಿ ಪಕ್ಷದಿಂದ ಸ್ಥಳೀಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ರಾಮ್‌ಚರಣ್ ಸಿಂಗ್ ಯಾದವ್ ಎಂಬಾತ ಆಕಸ್ಮಿಕವಾಗಿ ಬರ್ವಾನ್ ಕಾಲಾ ಗ್ರಾಮಕ್ಕೆ ಭೇಟಿ ನೀಡಿದ. ಭಾರತಕ್ಕೆ ಸ್ವಾತಂತ್ರ ಬಂದಾಗಿನಿಂದ ಯಾವುದೇ ರಾಜಕಾರಣಿ ಬರ್ವಾನ್ ಕಾಲಾಗೆ ಭೇಟಿ ನೀಡಿದ್ದು ಅದೇ ಮೊದಲ ಬಾರಿ.

ರಸ್ತೆ ಇಲ್ಲದ ಕಾರಣ ತಮ್ಮ ಗ್ರಾಮ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವುದನ್ನೂ, ಆ ಕಾರಣಕ್ಕಾಗಿಯೇ ತಮ್ಮ ಹಳ್ಳಿಯಲ್ಲಿ ಹಲವಾರು ಪುರುಷರು ವಿವಾಹವಾಗದೇ ಇರುವುದನ್ನೂ ಯಾದವ್‌ಗೆ ಜನ ಮನದಟ್ಟು ಮಾಡಿದರು. ಆಗ ಯಾದವ್ ಸ್ಥಳದಲ್ಲೇ ಒಂದು ಸಂಕಲ್ಪ ಮಾಡಿದ. ಅದೇನೆಂದರೆ ಆತ ಚುನಾವಣೆಯಲ್ಲಿ ಗೆದ್ದರೆ, ಬರ್ವಾನ್ ಕಾಲಾಗೆ ರಸ್ತೆ ನಿರ್ಮಾಣವಾಗುವ ತನಕ ತಾನೂ ಅವಿವಾಹಿತನಾಗಿಯೇ ಇರುವುದು. ಆತನ ಸಂಕಲ್ಪದಿಂದ ಉತ್ತೇಜಿತಗೊಂಡ ಗ್ರಾಮಸ್ಥರು ಯಾದವ್‌ನ ಗೆಲುವಿಗೆ ಹಗಲಿರುಳೂ ಶ್ರಮಿಸಿದರು. ಅಂದಿನ ಚುನಾವಣೆಯಲ್ಲಿ ಯಾದವ್ ಗೆದ್ದ. ಗೆದ್ದು ಶಾಸಕನಾದ ಮೂರು ತಿಂಗಳಲ್ಲೇ ತನ್ನ ಸಂಕಲ್ಪವನ್ನು ಮುರಿದು ಮದುವೆಯಾದ. ಅದೂ ಅದ್ದೂರಿಯಾಗಿ. ಇವತ್ತು ಯಾದವ್ ಗೃಹಸ್ಥನಲ್ಲದೆ, ಎರಡು ವರ್ಷದ ಮುದ್ದು ಹೆಣ್ಣುಮಗಳ ತಂದೆ ಕೂಡ ಆಗಿದ್ದಾನೆ. ಆದರೆ ಬರ್ವಾನ್ ಕಾಲಾಗೆ ರಸ್ತೆಯೂ ಇಲ್ಲ, ಅಲ್ಲಿನ ಅವಿವಾಹಿತ ಪುರುಷರಿಗೆ ಕಂಕಣ ಭಾಗ್ಯವೂ ಇಲ್ಲ.

ಇದರಿಂದ ರೋಸತ್ತ ಬರ್ವಾನ್ ಕಾಲಾದವರು ಒಮ್ಮೆ ಯಾದವ್‌ನನ್ನು ಭೇಟಿಯಾಗಿ "ನಮ್ಮ ಊರಿಗೆ ರಸ್ತೆ ಸಂಪರ್ಕ ಕಲ್ಪಿಸುವ ತನಕ ನೀನು ಮದುವೆ ಆಗುವುದಿಲ್ಲ ಎಂದಿದ್ದೆ" ಎಂದು ನೆನಪಿಸಿದರಂತೆ. ಆದರೆ ಇದೇ ಗ್ರಾಮದ ಜನರ ಬೆಂಬಲದೊಂದಿಗೆ ಗೆದ್ದಿದ್ದ ಯಾದವ್ "ಅಲ್ಲ, ನಾನೂ ನಿಮ್ಮಂತೆಯೇ ಜೀವನದುದ್ದಕ್ಕೂ ಮದುವೆ ಆಗದೆ ಇರಬೇಕಾ?" ಎಂದು ಉತ್ತರಿಸಿದ್ದಾನೆ. ಇನ್ನು ಮುಂದೆ ಯಾವ ಸರ್ಕಾರಿ ಇಲಾಖೆಯನ್ನಾಗಲಿ, ರಾಜಕಾರಣಿಯನ್ನಾಗಲಿ ನಂಬಿ ಕೂತರೆ ತಮ್ಮ ಗ್ರಾಮಕ್ಕೆ ರಸ್ತೆ ಬರುವುದಿಲ್ಲ ಎಂದು ಜನರಿಗೆ ಮನವರಿಕೆಯಾಗಿದೆ. ಆಗ ಅವರೆಲ್ಲರೂ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ತಮ್ಮ ಹಳ್ಳಿಯ ಹಣೆಬರಹವನ್ನು ಬದಲಾಯಿಸುವ ಶಕ್ತಿ ತಮ್ಮ ತೋಳ್ಬಲಕ್ಕೆ ಇದೆ, ಆದ್ದರಿಂದ ತಾವೇ ರಸ್ತೆಯನ್ನು ನಿರ್ಮಿಸೋಣ ಎಂಬ ತೀರ್ಮಾನ ತೆಗೆದು ಕೊಂಡಿದ್ದಾರೆ.



ಅದರಂತೆ ಈ ವರ್ಷದ ಆರಂಭದಲ್ಲಿ ಬರ್ವಾನ್ ಕಾಲಾದ ಗ್ರಾಮಸ್ಥರು ಕಾರ್ಯೋನ್ಮುಖರಾದರು. ತಮ್ಮಲ್ಲಿದ್ದ ಪಿಕಾಸಿ, ಉಳಿ, ಸುತ್ತಿಗೆ, ಗುದ್ದಲಿ ಮತ್ತು ಇತರೆ ಸಲಕರಣೆಗಳನ್ನು ಹೊತ್ತು ರಸ್ತೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದರು. ಗುಡ್ಡ ಗಾಡನ್ನು ಕೆತ್ತಿ ಅವರು ನಿರ್ಮಿಸಲು ಹೊರಟಿದ್ದ ಏಳು ಕಿ.ಮೀ. ರಸ್ತೆ ಈಗ ಸುತ್ತು ಬಳಸಿ ಸಂಚರಿಸಬೇಕಾದ 40 ಕಿ.ಮೀ.ಗಳನ್ನು ಕಡಿತಗೊಳಿಸುತ್ತಿತ್ತಲ್ಲದೆ ಸುತ್ತಮುತ್ತಲಿನ ಹತ್ತಾರು ಗ್ರಾಮಗಳೊಂದಿಗೂ ಸಂಪರ್ಕ ಒದಗಿಸುತ್ತದೆ. ಆ ಮೂಲಕ ಬರ್ವಾನ್ ಕಾಲಾಗೆ ಮೂಲಭೂತ ಸೌಕರ್ಯಗಳು ಲಭಿಸಿ ಅಲ್ಲಿನ ಅವಿವಾಹಿತ ಪುರುಷರ ಬದುಕೂ ಆಶಾದಾಯಕವಾಗುತ್ತದೆ ಎಂದು ಜನ ಆಶಿಸಿದ್ದರು.

ಬರ್ವಾನ್ ಕಾಲಾದ ಪುರುಷರು ಹೀಗೆ ತಮ್ಮ ಪಿಕಾಸಿ, ಉಳಿ ಮತ್ತು ಸುತ್ತಿಗೆಗಳನ್ನು ಕೈಗೆತ್ತಿಕೊಂಡು ಮೂರು ಕಿ.ಮಿ. ರಸ್ತೆಯನ್ನು ಕಷ್ಟಪಟ್ಟು ನಿರ್ಮಿಸಿದರು. ಒಂದು ತಂಡ ಕಲ್ಲುಬಂಡೆಗಳನ್ನು ಪಕ್ಕಕ್ಕೆ ಸರಿಸಿದರೆ ಇನ್ನೊಂದು ತಂಡ ಆ ಬಂಡೆಯನ್ನು ಜಲ್ಲಿ ಕಲ್ಲುಗಳಾಗಿ ಒಡೆಯುತ್ತಿತ್ತು. ಹೀಗೆ ಮೂರು ತಿಂಗಳ ಕಾಲ ಹಗಲುರಾತ್ರಿ ಶ್ರಮಿಸಿದ ಗ್ರಾಮಸ್ಥರು ಅರ್ಧ ರಸ್ತೆಯನ್ನು ಸಂಪೂರ್ಣಗೊಳಿಸಿದರು. ಆಗ ಸರ್ಕಾರ ಅಡ್ಡಬಂತು. ಅವರು ನಿರ್ಮಿಸುತ್ತಿದ್ದ ರಸ್ತೆ ರಕ್ಷಿತ ಅರಣ್ಯಪ್ರದೇಶವನ್ನು ಹಾದುಹೋಗುತ್ತಿದ್ದರಿಂದ ಆ ರಸ್ತೆ ಕಾಮಗಾರಿಯೇ ಅಕ್ರಮವೆಂದು ಸರ್ಕಾರ ಘೋಷಿಸಿತು. ರಸ್ತೆ ನಿರ್ಮಿಸುತ್ತಿದ್ದ ಗ್ರಾಮಸ್ಥರ ವಿರುದ್ಧ ಪೊಲೀಸರನ್ನು ಛೂ ಬಿಟ್ಟಿತು. ಅರಣ್ಯ ಇಲಾಖೆ ಕೂಡ ಅವರನ್ನೆಲ್ಲ ಬೆದರಿಸಿತು; ಬರ್ವಾನ್ ಕಾಲಾದ 12 ಮಂದಿಯ ವಿರುದ್ಧ ಕೇಸುಗಳನ್ನು ದಾಖಲಿಸಿತು.

ಸ್ಥಳೀಯ ಅರಣ್ಯ ಅಧಿಕಾರಿ ಆರ್.ಕೆ. ರಾಮ್ "ಆ ಹಳ್ಳಿಯ ಜನರ ಪರಿಸ್ಥಿತಿ ಬಗ್ಗೆ ನನಗೆ ಅನುಕಂಪವಿದೆ. ಆದರೆ ಅವರು ನಿರ್ಮಿಸಲು ಹೊರಟಿರುವ ರಸ್ತೆ, ಸುಪ್ರೀಂಕೋರ್ಟ್‌ನ ಆದೇಶವನ್ನು ಉಲ್ಲಂಘಿಸುವಂತಹದ್ದು. ಆದ್ದರಿಂದ ಅವರ ವಿರುದ್ಧ ಕಾನೂನಿನಡಿ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ" ಎಂದಿದ್ದಾರೆ. ಆದರೆ ಗ್ರಾಮಸ್ಥರು ಅರಣ್ಯ ಪ್ರದೇಶದ ಪ್ರಾಣಿಗಳನ್ನು ಮಾತ್ರವಲ್ಲ, ಸರ್ಕಾರ, ಪೊಲೀಸರು, ಅರಣ್ಯ ಅಧಿಕಾರಿಗಳು ಎಲ್ಲರನ್ನು ಎದುರಿಸಿ ರಸ್ತೆಯನ್ನು ಸಂಪೂರ್ಣಗೊಳಿಸುತ್ತೇವೆ ಎಂದಿದ್ದಾರೆ. ವಾಸ್ತವವಾಗಿ ಕಳೆದ ಎರಡು ತಿಂಗಳುಗಳಿಂದ ರಸ್ತೆ ಕೆಲಸ ಸ್ಥಗಿತಗೊಂಡಿದೆ.

ಬರ್ವಾನ್ ಕಾಲಾದ ಜನ "ಸ್ವರ್ಗಕ್ಕೆ ಮೂರೇ ಮೈಲಿ" ಎಂದು ಸಂಭ್ರಮಿಸುತ್ತಿದ್ದಾಗಲೇ ಆಡಳಿತ ವ್ಯವಸ್ಥೆ ಅವರನ್ನು ಅಂತರ ಪಿಶಾಚಿಗಳನ್ನಾಗಿಸಿದೆ. ಸರ್ಕಾರ ಎಂದಿಗೂ ಆ ರಸ್ತೆಯನ್ನು ನಿರ್ಮಿಸುವುದಿಲ್ಲ, ಜನ ಅದನ್ನು ನಿರ್ಮಿಸಲು ಬಿಡುವುದೂ ಇಲ್ಲ, ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಇದೆ ಎಂದು ನಂಬುವುದಾದರೂ ಹೇಗೆ? ●

ಪೊಲೀಸ್ ಜಗಳ

ಕೆಂಪಾದವೋ ಮುಖಗಳು ಕೆಂಪಾದವೋ.....

...ದೊಂದು ego clash. ಇಬ್ಬರೂ ಹಿರಿಯ ...ಸ್ ಅಧಿಕಾರಿಗಳು. ಇಬ್ಬರೂ ...ಮರು. ಅದೇ ಈ ವಾಕ್... ...ಕ್ಕೆ ಕಾರಣವಾಗಿದೆ.



...ಜ್ಯ ಪೊಲೀಸ್ ಮಹಾ...ಕ್ಷಕ ಡಾ. ಅಜಯ್ ...ರ್ ಸಿಂಗ್ ಸೃಜನಶೀಲ, ... ಚಿಂತನೆಯ ವ್ಯಕ್ತಿ. ಅವರು ...ಪ್ರಾಮಾಣಿಕರು ಎಂಬುದನ್ನು ...ಕ ಭದ್ರತಾ ವಿಭಾಗದ ...ಕ್ಕೆ ಐಜಿಪಿ ಕೆಂಪಯ್ಯನವ... ...ಒಪ್ಪಿಕೊಂಡಂತೆ ಎಲ್ಲ... ...ಗಳು ಒಪ್ಪಿಕೊಳ್ಳುತ್ತಾರೆ. ತಮ್ಮ ಕರ್ತವ್ಯನಿಷ್ಠೆಗಾಗಿ ... ಪರಿಚಿತರಾಗಿರುವ ಕೆಂಪಯ್ಯರಿಗೆ ಒಂದಿಷ್ಟು ...ವ ಹೆಸರು ಇರುವುದೂ ಅಷ್ಟೇ ಸತ್ಯ. ಕೆಲವೊಮ್ಮೆ ... ತಮ್ಮ 'ಸಾಮರ್ಥ್ಯ' ಸಾಬೀತು ಮಾಡಲು ...ಅಪವಾದ ಹಾಳಿದ್ದೂ ಉಂಟು. ಆ ಮೂಲಕ ...ಹುದ್ದೆಗಳ ದಮನ ಮಾಡಿದ ಆರೋಪಗಳನ್ನು ...ಹೊತ್ತಿದ್ದಾರೆ.

ಈಗ ಇವರಿಬ್ಬರ ಮಧ್ಯೆ ಮಾತಿನ ವಾಗ್ಯುದ್ಧ ನಡೆದು, ಅದೀಗ ಅಂತಿಮ ಹಂತ ತಲುಪಿದಂತಿದೆ. ತಾನೇನು ಕಡಿಮೆ ಎಂಬ ಭಾವದಲ್ಲಿ ಈ ಇಬ್ಬರೂ ಅಧಿಕಾರಿಗಳು ಆಗಸ್ಟ್ 13 ರಂದು ಮಾತಿನ ಸಮರ ನಡೆಸಿದ್ದಾರೆ. ರಾಜ್ಯದ ಆಂತರಿಕ ಭದ್ರತೆಯ ಕುರಿತು ಚರ್ಚಿಸಲು ಕರೆದಿದ್ದ ಸಭೆಯಲ್ಲಿ ಈ 'ಜಗಳ' ನಡೆದಿದೆ. ಆಂತರಿಕ ಭದ್ರತೆಯ ಮುಖ್ಯಸ್ಥ ಕೆಂಪಯ್ಯನವರು ಸಭೆಗೆ ವಿವರ ನೀಡಬೇಕಿತ್ತು. ಕೆಂಪಯ್ಯ ಸ್ವಲ್ಪ ಹೊತ್ತು ಮಾತನಾಡಿದ ಮೇಲೆ, ಬೇಗ ಮುಗಿಸುವಂತೆ ಅಜಯ್‌ಕುಮಾರ್ ಸಿಂಗ್ ಕೋರಿದರು. ಆಗಲೇ ಕೆಂಪಯ್ಯ ಬಳ್ಳದ ಕೆಂಪಾದರು. 'ನೀವು ಸುಮ್ಮನೇನು ಮೂರ್ಖರು ಅಂತಾ ತಿಳಿದಿದ್ದೀರಾ. ಕಡತಗಳನ್ನು ಕಳಿಸಿದಾಗ ಮಾತನಾಡಲು ಕರೆಯುತ್ತೀರಿ. ಆದರೆ ಅವಸರದಲ್ಲಿ ಮಾತಾಡಿ ಕಳಿಸ್ತೀರಿ' ಎಂದು ಮೇಜು ಗುದ್ದಿದರು ಕೆಂಪಯ್ಯ. ಈ ಅನಿರೀಕ್ಷಿತ ವರ್ತನೆಯಿಂದ ಮುಜುಗರಕ್ಕೊಳಗಾದ ಸಿಂಗ್ 'ಗೆಟ್ ಔಟ್' ಎಂದರು. ಕೆಂಪಯ್ಯ ಮಿಸುಗಲಿಲ್ಲ. ಮುಂದುವರೆದ ಕೆಂಪಯ್ಯ 'ರಾಜ್‌ಕುಮಾರ್ ಗಲಾಟೆ ಆದಾಗ, ನೀವು ಬೆಂಗಳೂರು ಕಮಿಷನರ್ ಆಗಿ ಫೇಲ್ ಆದಿ' ಎಂದು ಸಿಂಗ್‌ರ ಕಾರ್ಯಕ್ಷಮತೆಯನ್ನು ಪ್ರಶ್ನಿಸುವ ಉಡಾಫೆಯ ಮಾತುಗಳನ್ನಾಡಿದರು. ಮತ್ತೆ ಮತ್ತೆ ಇದನ್ನೇ ಹೇಳಿದ ಕೆಂಪಯ್ಯ ತಾವೇ ಎದ್ದು ಹೊರಬಂದರು.

ಮುಂದೆ ಸಿಂಗ್ ಕೆಂಪಯ್ಯರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಇತ್ತ ಕೆಂಪಯ್ಯ ವಿ.ಆರ್.ಎಸ್.ಗೆ ಅರ್ಜಿ ಹಾಕಿ, ದೀರ್ಘ ರಜೆ ಮೇಲೆ ಹೋಗಿದ್ದಾರೆ.



ಅಬ್ಬೇಪಾರಿಯಂತಿರುವ ಗೃಹ ಸಚಿವ ವಿ.ಎಸ್. ಆಚಾರ್ಯ ಇದಕ್ಕೂ ತನಗೂ ಸಂಬಂಧವಿಲ್ಲದಂತೆ ಗುಡಿ ಗುಂಡಾರ ಸುತ್ತುತ್ತಿದ್ದಾರೆ. ಸಿ.ಎಂ. ಸಾಹೇಬರಿಗೆ ಸೋಮಣ್ಣ, ಸುಧಾಕರ್‌ಗಳೆಂಬ ಡಾರ್ಲಿಂಗ್‌ಗಳನ್ನು ಕಾಪಾಡುವ ಕೆಲಸವೇ ದೊಡ್ಡದಾಗಿದೆ.

ಕೆಂಪಯ್ಯ ಆಂತರಿಕ ಭದ್ರತೆಗೆ ಬಂದ ಫಂಡ್‌ಗಳ ಕಡತಗಳನ್ನು ಕಳಿಸಿದಾಗ, ಯಾವುದಕ್ಕೆ ಎಷ್ಟು ಖರ್ಚಾಯಿತು, ಹೇಗಾಯ್ತು ಎಂದು ಸಿಂಗ್ ಪ್ರಶ್ನಿಸುತ್ತ ಬಂದಿದ್ದಾರೆ. ಅದು ಅವರ ಕರ್ತವ್ಯ. ಇಷ್ಟಕ್ಕೂ ಅವರು ಕೆಂಪಯ್ಯರಿಗಿಂತ ಹಿರಿಯ ಅಧಿಕಾರಿ. ಕೇಳುವ ಹಕ್ಕು ಅವರಿಗಿದೆ. ಆದರೆ ತಮಗೆ ತಾವೇ ಒಂದು 'ಘನತೆಯ' ಸೃಷ್ಟಿಸಿಕೊಂಡಿರುವ ಕೆಂಪಯ್ಯರಿಗೆ ಇದನ್ನು ಸಹಿಸಲಾಗಿಲ್ಲ...

ಆಂತರಿಕ ಭದ್ರತೆ ಬಗ್ಗೆ ಚರ್ಚಿಸಬೇಕಾದ ಸಭೆಯಲ್ಲೇ ಆಂತರಿಕ ಭಿನ್ನಾಭಿಪ್ರಾಯಗಳು ಹೊರಬಂದಿವೆ.


ಯಥಾ ಸರ್ಕಾರ, ತಥಾ ಅಧಿಕಾರಿ ಎನ್ನೋಣವೇ?


● ಮಲ್ಲಿ

ಬಲಿಷ್ಠರು ಬಲಹೀನರಾಗಿದ್ದು ಹೀಗೆ...




ಕಳೆದ ಹದಿನೈದು ವರ್ಷಗಳ ಕಾಲ ಅಂತರರಾಷ್ಟ್ರೀಯ ಕ್ರಿಕೆಟ್ ಸಾಮ್ರಾಜ್ಯವನ್ನು ವಿರಾಜಮಾನರಾಗಿ ಆಳಿದ್ದ ಆಸ್ಟ್ರೇಲಿಯನ್ನರು ಕೊನೆಗೂ ಅಧಃಪತನ ಹೊಂದಿದ್ದಾರೆ. ಮೊನ್ನೆ ಆಸ್ಟ್ರೇಲಿಯದಲ್ಲಿ ನಡೆದ ಆಷಸ್ ಸರಣಿಯನ್ನು ಇಂಗ್ಲೆಂಡ್‌ಗೆ ಒಪ್ಪಿಸುವ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್ ಜಗತ್ತಿನ ಮೇಲಿದ್ದ ಅವರ ಆಧಿಪತ್ಯ ಅಧಿಕೃತವಾಗಿ ಕೊನೆಗೊಂಡಂತಾಗಿದೆ. ಕಾಲು ಶತಮಾನದ ಹಿಂದೆ ಡೆನ್ನಿಸ್ ಲಿಲ್ಲೆ, ಗ್ರೇಗ್ ಚಾಪೆಲ್ ಮತ್ತು ರಾಡ್ ಮಾರ್ಷ್‌ರಂಥ ಅಗ್ರಮಾನ್ಯ ಆಟಗಾರರು ಏಕಕಾಲದಲ್ಲಿ ನಿವೃತ್ತಿ ಹೊಂದುವುದರೊಂದಿಗೆ ಅಲ್ಲಿಯತನಕ ಅಂತರರಾಷ್ಟ್ರೀಯ ಕ್ರಿಕೆಟ್ ಲೋಕದ ಮೇಲೆ ಆಧಿಪತ್ಯ ಸಾಧಿಸಿದ್ದ ಆಸ್ಟ್ರೇಲಿಯನ್ನರು ದಿಢೀರನೇ ಕುಸಿದುಬಿದ್ದಿದ್ದರು. ಈಗ ಇಪ್ಪತ್ತೈದು ವರ್ಷಗಳ ನಂತರ ಆಸ್ಟ್ರೇಲಿಯ ಮತ್ತೆ ಅದೇ ತಪ್ಪನ್ನು ಪುನರಾವರ್ತಿಸಿ ನೆಲಕಚ್ಚಿದೆ.





2003ರಲ್ಲಿ ಅಂತರರಾಷ್ಟ್ರೀಯ ಟೆಸ್ಟ್ ರ‍್ಯಾಂಕಿಂಗ್ ನೀಡುವುದನ್ನು ಪ್ರಾರಂಭಿಸಿದಾಗಿನಿಂದಲೂ ನಂಬರ್ – 1 ಸ್ಥಾನದಲ್ಲೇ ಮೆರೆದಿದ್ದ ಆಸ್ಟ್ರೇಲಿಯನ್ ತಂಡ ಈಗ ನಾಲ್ಕನೇ ಸ್ಥಾನಕ್ಕೆ ಬಿದ್ದಿದೆ. ಆ ತಂಡ ಆಡಿದ ಕೊನೆಯ ಐದು ಟೆಸ್ಟ್‌ಗಳಲ್ಲಿ ಕೇವಲ ಎರಡನ್ನು ಮಾತ್ರವೇ ಗೆಲ್ಲುವುದಕ್ಕೂ ಹರಸಾಹಸ ಪಟ್ಟಿದೆ. ಅಷ್ಟೇ ಅಲ್ಲ, ಕಳೆದ 17 ವರ್ಷಗಳಲ್ಲಿ ತಮ್ಮದೇ ನೆಲದಲ್ಲಿ ಒಂದೂ ಟೆಸ್ಟ್ ಸೋಲದೇ ದಾಖಲೆ ನಿರ್ಮಿಸಿದ್ದ ಆ ತಂಡ ಕಳೆದ ಡಿಸೆಂಬರ್‌ನಲ್ಲಿ ದಕ್ಷಿಣ ಆಫ್ರಿಕದೊಂದಿಗಿನ ಪಂದ್ಯದಲ್ಲಿ ಹೀನಾಯ ಸೋಲುಂಡಿದೆ. ಅವರು ಆಡಿದ ಕೊನೆಯ ನಾಲ್ಕು ಏಕದಿನ ಅಂತರರಾಷ್ಟ್ರೀಯ ಸರಣಿಗಳಲ್ಲಿ ಕೇವಲ ಒಂದನ್ನು ಮಾತ್ರವೇ ಗೆಲ್ಲುವುದಕ್ಕೆ ಸಾಧ್ಯವಾಗಿದೆ. ಕಳೆದ ವರ್ಷದ ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿ ಕ್ರಿಕೆಟ್ ಜಗತ್ತಿನಲ್ಲಿ ತಲೆತಗ್ಗಿಸಿ ನಿಂತಿದೆ.




ಆಸ್ಟ್ರೇಲಿಯ ಹಲವು ವರ್ಷಗಳ ಅಂಧಕಾರದಿಂದ ಪುಟಿದೆದ್ದು ಕ್ರಿಕೆಟ್ ಜಗತ್ತಿನ ಮೇಲೆ ಆಧಿಪತ್ಯ ಸಾಧಿಸಲಾರಂಭಿಸಿದ್ದು 1995ರಲ್ಲಿ. 1980 ಮತ್ತು 1990ರ ದಶಕಗಳಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಲೋಕವನ್ನು ಆಳಿದ ಹಾಗೂ ಎಂದೂ ಸೋಲುಣ್ಣದ ಸರದಾರರು ಎಂದೇ ವಿಶ್ವವಿಖ್ಯಾತಿಯಾಗಿದ್ದ ಬಲಿಷ್ಠ ವೆಸ್ಟ್‌ಇಂಡಿಯನ್ನರನ್ನು ಮಾರ್ಕ್ ಟೇಲರ್ ಸಾರಥ್ಯದ ಆಸ್ಟ್ರೇಲಿಯನ್ ತಂಡ ಸೋಲಿಸಿ ವಿಶ್ವದ ನಂಬರ್-1 ಪಟ್ಟಕ್ಕೇರುವುದರೊಂದಿಗೆ ಈ ದಿಗ್ವಿಜಯ ಯಾತ್ರೆ ಪ್ರಾರಂಭಿಸಿತು. ತಂಡದ ನಾಯಕ ಟೇಲರ್ ಜೊತೆ ಹೆಗಲಿಗೆ ಹೆಗಲು ಕೊಟ್ಟು ಹೋರಾಡಲು ಸ್ಟೀವ್ ವಾ ಮತ್ತು ರಿಕಿ ಪಾಂಟಿಂಗ್ ಥರದ ಅಗ್ರಮಾನ್ಯ ಆಟಗಾರರಿದ್ದರು.


ಅಲ್ಲಿಂದಾಚೆಗೆ ಆನೆ ನಡೆದದ್ದೇ ದಾರಿಯೆಂಬಂತಾಯಿತು ಆಸ್ಟ್ರೇಲಿಯದ ನಡಿಗೆ. ವಿರೋಧಿ ತಂಡಗಳೆಲ್ಲಾ ಥರಗುಟ್ಟಲಾರಂಭಿಸಿದವು. ಅಂತರರಾಷ್ಟ್ರೀಯ ಕ್ರಿಕೆಟ್ ಲೋಕದ ವಿಶ್ವ ದಾಖಲೆಗಳೆಲ್ಲಾ ಒಂದೊಂದಾಗಿ ನುಚ್ಚುನೂರಾದವು. ವಿಜಯಗಳ ಮೇಲೆ ವಿಜಯಗಳನ್ನು ಸಾಧಿಸುತ್ತಾ ಉತ್ಸಾಹದ ಚಿಲುಮೆಯಂಥಾಗಿದ್ದ ತಂಡ ಹದಿನೈದು ವರ್ಷಗಳ ಕಾಲ ಅಂತರರಾಷ್ಟ್ರೀಯ ಕ್ರಿಕೆಟ್ ಲೋಕವನ್ನು ವಿರಾಜಮಾನವಾಗಿ ಆಳಿ ಹೊಸ ದಾಖಲೆಯ ಪುಸ್ತಕಗಳನ್ನು ಬರೆದಿಟ್ಟಿತು. 1999ರಲ್ಲಿ ತಂಡದ ನಾಯಕ ಮಾರ್ಕ್ ಟೇಲರ್ ನಿವೃತ್ತಿ ಹೊಂದಿದರೂ ಅವರ ನಂತರ ತಂಡದ ಸಾರಥ್ಯ ವಹಿಸಿಕೊಂಡ ಸ್ಟೀವ್ ವಾ ವಿಜಯ ಯಾತ್ರೆಯನ್ನು ಮುಂದುವರೆಸಿದರು. ನಂತರ 2004ರಲ್ಲಿ ಸ್ಟೀವ್ ವಾ ಕೂಡ ನಿವೃತ್ತಿಯಾದ ಮೇಲೆ ರಿಕಿ ಪಾಂಟಿಂಗ್ ಆ ಸ್ಥಾನವನ್ನು ಯಶಸ್ವಿಯಾಗಿ ತುಂಬಿ ಗೆಲುವಿನ ಯಾತ್ರೆಯನ್ನು ಮುಂದುವರೆಸಿದರು.

ಆದರೆ 2006ರಿಂದಾಚೆಗೆ ತಂಡದ ಆಟಗಾರರು ಮೊದಲ ಬಾರಿಗೆ ವೈಫಲ್ಯ ಕಾಣಲಾರಂಭಿಸಿದರು. 2006ರ ಏಪ್ರಿಲ್‌ನಲ್ಲಿ ಬಾಂಗ್ಲಾದೇಶದ ವಿರುದ್ಧ ಅಜೇಯ ದ್ವಿಶತಕ ಬಾರಿಸಿ ಸರಣಿಶ್ರೇಷ್ಠನೆನಿಸಿದ ಆಸ್ಟ್ರೇಲಿಯದ ವೇಗದ ಬೌಲರ್ ಜಾಸನ್ ಗಿಲ್ಲೆಸ್ಪಿ ಅಲ್ಲಿಂದಾಚೆಗೆ ಸಂಪೂರ್ಣವಾಗಿ ವಿಫಲಗೊಂಡರು. ತಂಡದಲ್ಲಿದ್ದ ವಿಶ್ವದ ಇನ್ನೊಬ್ಬ ಅಮೋಘ ಬೌಲರ್ ಲೆಗ್ ಸ್ಪಿನ್ನರ್ ಶೇನ್ ವಾರ್ನ್ ಹಾಗೂ ತಂಡದ ಬೌಲಿಂಗ್ ದಾಳಿಯ ಪ್ರಧಾನ ಸ್ತಂಭವಾಗಿದ್ದ ಗ್ಲೇನ್ ಮ್ಯಾಗ್ರಾತ್, ಸ್ಫೋಟಕ ಬ್ಯಾಟಿಂಗ್‌ನಿಂದ ಪಂದ್ಯ ಆರಂಭಿಸುತ್ತಿದ್ದ ಡೇಮಿನ್ ಮಾರ್ಟಿನ್ ಎಲ್ಲರೂ 2006-2007ರ ಆಷಸ್ ಸರಣಿಯ ದಿಗ್ವಿಜಯದೊಂದಿಗೆ ನಿವೃತ್ತಿ ಘೋಷಿಸಿದರು. ಒಂದು ವರ್ಷದ ನಂತರ ವಿಕೆಟ್ ಕೀಪರ್ ಮತ್ತು ಯಶಸ್ವೀ ಬ್ಯಾಟ್ಸಮನ್ ಆಡಮ್ ಗಿಲ್‌ಕ್ರಿಸ್ಟ್ ನಿವೃತ್ತಿ ಘೋಷಿಸಿ ಹೊರನಡೆದರು. ನಂತರ ಕೆಲವೇ ತಿಂಗಳುಗಳಲ್ಲಿ ರಿಸ್ಟ್ ಸ್ಪಿನ್ನರ್ ಸ್ಟುವರ್ಟ್ ಮ್ಯಾಕ್‌ಗಿಲ್ ಕೂಡ ನಿವೃತ್ತರಾದರು.

ಕಳೆದ ಡಿಸೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾದಿಂದ ಹೀನಾಯ ಸೋಲುಂಡ ಮೇಲೆ ತಂಡದ ದೈತ್ಯ ಬ್ಯಾಟ್ಸ್‌ಮನ್ ಮ್ಯಾಥ್ಯೂ ಹೇಡನ್ ನಿವೃತ್ತರಾದರು. ಪದೇ ಪದೇ ಅಶಿಸ್ತು ಪ್ರದರ್ಶಿಸುತ್ತಿದ್ದ ಇನ್ನೊಬ್ಬ ಪ್ರಮುಖ ಆಲ್‌ರೌಂಡರ್ ಆಂಡ್ರೂ ಸೈಮಂಡ್ಸ್ ಅವರನ್ನು ಕೆಲವೇ ತಿಂಗಳುಗಳ ಹಿಂದೆ ತಂಡದಿಂದ ಹೊರದಬ್ಬಲಾಯಿತು. ತನ್ನ 'ಸುವರ್ಣ ಯುಗ'ದ ಆರಂಭದಲ್ಲಿ ವಿರಾಜಮಾನವಾಗಿ ದರ್ಬಾರ್ ಮಾಡಿದ ಪ್ರಮುಖ ಬ್ಯಾಟ್ಸ್‌ಮನ್‌ಗಳಲ್ಲಿ ಈಗ ಉಳಿದಿರುವವರು ಕೇವಲ ರಿಕಿ ಪಾಂಟಿಂಗ್ ಮಾತ್ರ. ಅವರಿಗೆ ಈಗ 34 ವರ್ಷ. ತಂಡದ ಬೌಲಿಂಗ್ ದಾಳಿಯ ಬೆನ್ನೆಲುಬಾಗಿರುವ ವೇಗಿ ಬ್ರೆಟ್ ಲಿ ಹಾಗೂ ಇನ್ನೊಬ್ಬ ಪ್ರಮುಖ ಆಟಗಾರ ಸ್ಟುವರ್ಟ್ ಕ್ಲಾರ್ಕ್ 35 ವರ್ಷದ ಆಸುಪಾಸಿನಲ್ಲಿದ್ದು ತಂಡಕ್ಕೆ ಖಚಿತವಾಗಿ ಆಯ್ಕೆಯಾಗುವುದು ಗ್ಯಾರಂಟಿಯಿಲ್ಲ. ಆರಂಭಿಕ ಆಟಗಾರ ಸಿಮನ್ ಕಾಟಿಚ್, ಮಧ್ಯಮ ಕ್ರಮಾಂಕದ ಆಟಗಾರ ಮೈಕ್ ಹಸ್ಸಿ, ವಿಕೆಟ್ ಕೀಪರ್ ಬ್ರಾಡ್ ಹಡ್ಡಿನ್ – ಎಲ್ಲರೂ ಮೂವತ್ತೈದರ ಆಸುಪಾಸಿನಲ್ಲಿದ್ದು ಯಾವಾಗ ಬೇಕಾದರೂ ನಿವೃತ್ತಿ ಘೋಷಿಸುವ ಹಂತದಲ್ಲಿದ್ದಾರೆ. ಶೇನ್ ವಾರ್ನ್ ನಂತರ ತಂಡಕ್ಕೆ ಅತ್ಯುತ್ತಮ ಸ್ಪಿನ್ ಬೌಲರ್ ಸಿಕ್ಕಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ವಿಶ್ವದ ಬಲಿಷ್ಠ ತಂಡವಾಗಿದ್ದ ಆಸ್ಟ್ರೇಲಿಯ ಇಂದು ಬಲಹೀನಗೊಂಡುಬಿಟ್ಟಿದೆ. ಅದು ಮತ್ತೆ ಪುಟಿದೇಳುವುದಕ್ಕೆ ಹಲವು ವರ್ಷಗಳೇ ಬೇಕಾಗುತ್ತವೆ. ■

ಹಿಡಿದಿಟ್ಟಷ್ಟೂ ಹರಡುತ್ತದೆಯಲ್ಲವೆ ?





▶ ಕುಮಾರ್ ಬುರಡಿಕಟ್ಟಿ

ಮೊಹಮ್ಮದ್ ಆಲಿ ಜಿನ್ನಾ ಅವರನ್ನು ಧರ್ಮನಿರಪೇಕ್ಷಕ ಹಾಗೂ ಜಾತ್ಯತೀತವಾ ಎಂದು ಬಣ್ಣಿಸಿದ ಜಸ್ವಂತ್ ಸಿಂಗ್ ಅವರ ಪುಸ್ತಕ **Jinnha: India-Partition Independence** ಬಿಜೆಪಿಯೊಳಗೆ ಬಿರುಗಾಳಿಯೆಬ್ಬಿಸಿದ್ದು, ಕೊನೆಗೆ ಜಸ್ವಂತ್ ಅವ ತಲೆದಂಡಕ್ಕೆ ಕಾರಣವಾಗಿದ್ದು ಎಲ್ಲರಿಗೂ ಗೊತ್ತೇ ಇದೆ. ಮೂರೂವರೆ ದಶಕಗಳ ಕಾ ಬಿಜೆಪಿಯಲ್ಲಿ ದುಡಿದ ಜಸ್ವಂತ್ ಸಿಂಗ್ ಅವರನ್ನು ಪಕ್ಷದಿಂದ ಏಕಾಏಕಿ ಹೊರದಬ್ಬ ದಿನದಂದೇ ಅವರ ಪುಸ್ತಕವನ್ನು ನರೇಂದ್ರ ಮೋದಿ ನೇತೃತ್ವದ ಗುಜರಾತ್ ಸರ್ಕಾರ ನಿಷೇ ಮಾಡಿಬಿಟ್ಟಿತು. ಮೋದಿಯಾಗಲಿ, ಆತನ ಅಧಿಕಾರಿಗಳಾಗಲಿ ಎಷ್ಟೊಂದು ಪ್ರಬುದ್ಧ ನಿರ್ಣಯ ತೆಗೆದುಕೊಂಡಿದ್ದಾರೆಂದರೆ ನಿಷೇಧಕ್ಕೆ ಮೊದಲು ಕನಿಷ್ಠ ಪುಸ್ತಕವನ್ನೂ ಅವರ‍್ಯಾರೂ ಓದಿಲ್ಲ ಸಂವಿಧಾನ ತಜ್ಞ ಎ.ಜಿ.ನೂರಾನಿ ಪ್ರಕಾರ ಯಾವುದೇ ಪುಸ್ತಕವನ್ನು ನಿಷೇಧ ಮಾಡುವುದ ರಾಜ್ಯ ಸರ್ಕಾರಗಳು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ 95ನೇ ಸೆಕ್ಷನ್ ಪ್ರಕಾರ ನಿಷೇಧ ಸ್ಪಷ್ಟ ಕಾರಣಗಳನ್ನು ಕೊಡಬೇಕು. ಆದರೆ ಗುಜರಾತ್ ಸರ್ಕಾರದ ಅಧಿಕಾರಿಗಳು ಜಸ್ವಂತ್ ಅವರ 674 ಪುಟಗಳ ಈ ಬೃಹತ್ ಪುಸ್ತಕವನ್ನೇ ಓದೇ ಇಲ್ಲವಾದ್ದರಿಂದ ಅದರ ಜಸ್ವಂತ್ ಏನು ಬರೆದಿದ್ದಾರೆ, ಅದರಿಂದ ಸಮಾಜಕ್ಕೆ ಯಾ ರೀತಿಯಲ್ಲಿ ತೊಂದರೆಯಾಗುತ್ತದೆ ಎಂಬಿತ್ಯಾದಿ ವಿಚಾರಗಳ ಅವರಿಗೆ ಗೊತ್ತೇ ಇಲ್ಲ. ಹೀಗಾಗಿ, ಯಾವುದೇ ಸ್ಪ ಕಾರಣಗಳನ್ನು ಕೊಡದೆ ಆತುರಾತುರವಾಗಿ ಪುಸ್ತಕವನ್ನು ನಿಷೇಧ ಮಾಡಿದ್ದಾರೆ.

ಈ ನಿಷೇಧದಿಂದ ಯಾರಿಗೆ ಎಷ್ಟು ಉಪಯೋ ವಾಯಿತೋ ಗೊತ್ತಿಲ್ಲ. ಆದರೆ ಅದನ್ನು ಪ್ರಕಟಿಸಿದ ರೂಪಾ ಅಂಡ್ ಕೋ ಕಂಪೆನಿಗೆ ಮಾತ್ರ ಅಗಾಧವಾಗಿ ಲಾಭವಾಗಿದ ಕಂಪೆನಿಯ ಮುಖ್ಯಸ್ಥ ಆರ್.ಕೆ.ಮೆಹ್ರಾ ಅವರೇ ಹೇಳುವಂತೆ ಗುಜರಾತ್ ಸರ್ಕಾರ ನಿಷೇಧದಿಂದಾಗಿ ಪುಸ್ತಕಕ್ಕೆ ಭಾರೀ ಪ್ರಚಾರ ಸಿಕ್ಕಿದ್ದು ಭಾರೀ ಪ್ರಮಾಣದಲ್ಲಿ ಅದರ ಪ್ರತಿಗಳ ಖರ್ಚಾಗುತ್ತಿವೆಯಂತೆ. ಈಗಾಗಲೇ ಪ್ರತಿಗಳು ಖಾಲಿಯಾಗಿದ್ದು ಮತ್ತೆ ದೊಡ್ಡ ಸಂಖ್ಯೆಯ ಪ್ರಿಂಟ್ ಮಾಡುತ್ತಿದ್ದಾರಂತೆ. ಜಸ್ವಂತ್ ಅವರ ಈ ಪುಸ್ತಕವನ್ನು ಪ್ರಕಟಿಸುವ ಮೊದಲ ಆರ್.ಕೆ.ಮೆಹ್ರಾಗೆ ಇದೊಂದು ವಿವಾದಾಸ್ಪದ ಪುಸ್ತಕವಾಗುತ್ತೆ ಹಾಗೂ ಇದರಿಂದ ಪ್ರತಿಗಳ ಬಹಳ ಸಂಖ್ಯೆಯಲ್ಲಿ ಖರ್ಚಾಗುತ್ತವೆ ಎಂಬ ನಿರೀಕ್ಷೆಯಿತ್ತಂತೆ. ಹಾಗಾಗಿಯೇ ಬಹಳ ದೊ ಸಂಖ್ಯೆಯಲ್ಲಿ ಪುಸ್ತಕದ ಪ್ರತಿಗಳನ್ನು ಪ್ರಿಂಟ್ ಮಾಡಿದ್ದರಂತೆ.

ಆದರೆ ಇಷ್ಟೊಂದು ದೊಡ್ಡ ವಿವಾದವಾಗುತ್ತದೆಂಬುದನ್ನಾಗಲಿ, ಅದು ಜಸ್ವಂತ್ ಅವ ತಲೆದಂಡಕ್ಕೆ ಕಾರಣವಾಗುತ್ತದೆಂಬುದನ್ನಾಗಲಿ, ಅದನ್ನು ನಿಷೇಧಿಸಲಾಗುತ್ತದೆಂಬುದನ್ನಾಗಲಿ ಇವೇ ಕಾರಣಗಳಿಗಾಗಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಪ್ರತಿಗಳು ಖರ್ಚಾಗುತ್ತದೆಂಬುದನ್ನಾಗ ಅವರು ನಿರೀಕ್ಷಿಸಿರಲಿಲ್ಲವಂತೆ. ಈಗ ಈ ಅನಿರೀಕ್ಷಿತಗಳೆಲ್ಲವೂ ನಿಜವಾಗಿವೆ. ಪ್ರಿಂಟ್ ಮಾಡಿದ ಪ್ರತಿಗಳೆಲ್ಲವೂ ಎರಡೇ ದಿನದಲ್ಲಿ ಖಾಲಿಯಾಗಿದ್ದರಿಂದ ಮತ್ತೆ ಹೊಸದಾ ಪ್ರಿಂಟಿಂಗ್ ಆರ್ಡರ್ ಕೊಟ್ಟಿದ್ದಾರಂತೆ. ಮುಂದಿನ ತಿಂಗಳ ಕೊನೆಯ ಹೊತ್ತಿಗೆ ಏನಿಲ್ಲವೆಂದರು 50,000 ಪ್ರತಿಗಳು ಖರ್ಚಾಗುತ್ತವೆ ಎಂಬ ವಿಶ್ವಾಸವನ್ನು ಮೆಹ್ರಾ ಅವರು ವ್ಯಕ್ತಪಡಿಸಿದ್ದಾರೆ ಹೀಗಾಗಿ ಗುಜರಾತ್ ಸರ್ಕಾರದ ನಿಷೇಧದಿಂದ ಎಲ್ಲರಿಗಿಂತ ಖುಷಿಯಾಗಿದ್ದು ತನ ಎಂದು ಅವರೇ ಹೇಳಿಕೊಂಡಿದ್ದಾರೆ.

ಕಳೆದ ವರ್ಷ ಪೆಂಗ್ವಿನ್ ಪ್ರಕಾಶನದವರು ಪ್ರಕಟಿಸಿದ ರಾಣಿ ಎಂಬ ಕಾದಂಬರಿಯನ ಉತ್ತರ ಪ್ರದೇಶ ಸರ್ಕಾರ ನಿಷೇಧಿಸಿತ್ತು. ಆ ಕಾದಂಬರಿಯಲ್ಲಿ ರಾಣಿಲಕ್ಷ್ಮಿಬಾಯಿ ಮತ ಬ್ರಿಟಿಷ್ ಅಧಿಕಾರಿಯ ನಡುವೆ ಪ್ರೇಮ ಪ್ರಸಂಗವಿದ್ದುದನ್ನೇ ನೆಪವಾಗಿಟ್ಟುಕೊಂಡು ಅದನ ನಿಷೇಧಿಸಲಾಗಿತ್ತು. ವಾಸ್ತವ ಏನೆಂದರೆ ಪ್ರಕಾಶಕರಾಗಲಿ, ಲೇಖಕರಾಗಲಿ ಎಲ್ಲೂ ಅದೊಂದ ಚರಿತ್ರೆ ಎಂದು ಹೇಳಿರಲಿಲ್ಲ. ಅದೊಂದು ಕಾಲ್ಪನಿಕ ಕಾದಂಬರಿ ಎಂದೇ ಸ್ಪಷ್ಟವಾ ನಮೂದಿಸಿದ್ದರು. ಆದರೂ ಸರ್ಕಾರ ಅದನ್ನು ನಿಷೇಧ ಮಾಡಿತು. ಆದರೆ ಆ ನಿಷೇಧವ ಪುಸ್ತಕ ದಾಖಲೆ ಸಂಖ್ಯೆಯಲ್ಲಿ ಮಾರಾಟವಾಗುವುದಕ್ಕೆ ಕಾರಣವಾಯಿತು. ನಮ್ಮಲ್ಲೂ ಕೂ ಕಳೆದ ವರ್ಷ ಬಂಜಗೆರೆ ಜಯಪ್ರಕಾಶ್ ಬರೆದ 'ಆನುದೇವಾ ಹೊರಗಣವನು' ಎಂ ಬಸವಣ್ಣನ ಜಾತಿ ಮೂಲದ ಬಗೆಗಿನ ಸಂಶೋಧನಾ ಪುಸ್ತಕವನ್ನು ಕರ್ನಾಟಕ ಸರ್ಕಾ ನಿಷೇಧ ಮಾಡಿತು. ಆದರೆ ಅದೂ ಕೂಡ ದೊಡ್ಡ ಸಂಖ್ಯೆಯಲ್ಲಿ ಮಾರಾಟವಾಯಿತು.

ಸರ್ಕಾರಗಳು ನಿಷೇಧಗಳ ಮೂಲಕ ಯಾವುದನ್ನು ಓದಬೇಡಿ ಎಂದು ಓದುಗ ಮೇಲೆ ಹೇರಿಕೆ ಹಾಕುತ್ತವೆಯೋ ಅದನ್ನೇ ಜನ ಕುತೂಹಲಕ್ಕಾಗಿ ಹೆಚ್ಚು ಓದುತ್ತಾರೆ. ಯಾ ವಿಚಾರವನ್ನು ಸರ್ಕಾರ ಹರಡದಂತೆ ತಡೆಯುವುದಕ್ಕಾಗಿ ಹಿಡಿದಿಟ್ಟುಕೊಳ್ಳಲು ಪ್ರಯತ್ನಿಸುತ್ತದೆಯೋ ಅದೇ ಜೋರಾಗಿ ಹರಡುತ್ತದೆ. ಅದು ಜಸ್ವಂತ್ ಸಿಂಗ್ ಅವರ ಪುಸ್ತಕದೊಂದಿಗೆ ಮತ್ತೊಮ್ಮೆ ರುಜುವಾತಾಗಿದೆ. ■

...ತ್ಮಹತ್ಯೆಯಲ್ಲಿ ...ಮೆರಿಕವೇನೂ ...ಂದಿಲ್ಲ



...ಅಮೆರಿಕ ಎಂದಾಕ್ಷಣ ಜಗತ್ತಿನ ಅತ್ಯಂತ ಶ್ರೀಮಂತ ... ಭೂಲೋಕದ ಸ್ವರ್ಗ, ಅಲ್ಲಿ ಎಲ್ಲರೂ ಸುಖ, ...ತಿ, ನೆಮ್ಮದಿಯಿಂದ ಬದುಕಿದ್ದಾರೆ ಎಂಬಂತಹ ...ಣವೇ ನಮ್ಮ ಮುಂದೆ ಬರುತ್ತದೆ. ಆದರೆ ಅಲ್ಲಿಯೂ ... ಅಶಾಂತಿ, ನೋವು, ಕಷ್ಟ ನಷ್ಟಗಳಿವೆ ಎಂಬುದನ್ನು ...ದ ಜಗತ್ತಿಗೆ ತೋರಿಸುವ ವರದಿಯೊಂದು ಇತ್ತೀಚೆಗೆ ...ಗೊಂಡಿದೆ. ಅದು ಎಂಥ ಆಘಾತಕಾರಿ ಸುದ್ದಿ ...ರೆ ಪ್ರತೀ ವರ್ಷ ಕನಿಷ್ಠ 30,000 ಅಮೆರಿಕನ್ನರು ...ನಸಿಕ ವೇದನೆ ತಾಳಲಾರದೇ ಆತ್ಮಹತ್ಯೆಗೆ ...ಾಗುತ್ತಿದ್ದಾರೆ!

...ಅಮೆರಿಕ ವಿಶ್ವದಾದ್ಯಂತ ಎಲ್ಲಾ ದೇಶಗಳನ್ನು ಹತ್ತು ...ವು ವಿಧಗಳಲ್ಲಿ ಲೂಟಿ ಹೊಡೆದು ಜಗತ್ತಿನ ಅತ್ಯಂತ ...ಮಂತ ದೇಶವಾಗಿರುವುದೇನೋ ಹೌದು. ಆದರೆ ...ಂಪತ್ತೆಲ್ಲಾ ಸಾಮಾನ್ಯ ಅಮೆರಿಕನ್ನರಿಗೇನೂ ಸೇರಿಲ್ಲ. ...ಗೇಟ್ಸ್, ಫೋರ್ಡ್‌ನಂಥ ನೂರಾರು ಕಾರ್ಪೋರೇಟ್ ...ನಿಗಳ ಸ್ವತ್ತಾಗಿದೆ. ಈ ಸಾಮ್ರಾಜ್ಯಶಾಹಿ ಕಂಪೆನಿಗಳು ... ದೇಶದ ಕಾರ್ಮಿಕರಿಗೆ ಕನಿಷ್ಠ ಉದ್ಯೋಗವನ್ನೂ ...ಾಗಿ ಕೊಟ್ಟಿಲ್ಲ. ಅಲ್ಲಿ ಉದ್ಯೋಗ ಕೊಟ್ಟರೆ ಅತ್ಯಂತ ...ರಿ ಸಂಬಳ ಕೊಡಬೇಕಾಗುತ್ತದೆಂದು ತಮ್ಮೆಲ್ಲಾ ...ಗಗಳನ್ನು ಭಾರತದಂತಹ ತೃತೀಯ ಜಗತ್ತಿಗೆ ...ಯಿಸಿವೆ. ಹೀಗಾಗಿ ಅಲ್ಲಿಯೂ ದೊಡ್ಡ ಪ್ರಮಾಣದಲ್ಲಿ ...ದ್ಯೋಗ ಸಮಸ್ಯೆ ಸೃಷ್ಟಿಯಾಗಿದೆ. ಕೆಲಸ ಸಿಕ್ಕ ಕೆಲವರನ್ನು ...ಗೆ ದುಡಿಸಿಕೊಳ್ಳಲಾಗುತ್ತಿದೆ ಎಂದರೆ ಅವರಿಗೆ ಕನಿಷ್ಠ ...ನಸಿಕ ನೆಮ್ಮದಿಯೂ ಸಿಗದಂತಹ ಪರಿಸ್ಥಿತಿ ...ರ್ಮಾಣವಾಗಿದೆ. ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ವೈದ್ಯಕೀಯ ಶಾಲೆಯೊಂದು ನಡೆಸಿದ ಸ್ವತಂತ್ರ ಅಧ್ಯಯನ ವೊಂದರ ಪ್ರಕಾರ ಅಮೆರಿಕದಲ್ಲಿ ಹಣಕಾಸು ಬಿಕ್ಕಟ್ಟಿನ ಪರಿಣಾಮವಾಗಿ ತಮ್ಮ ಮನೆಮಠಗಳನ್ನು ಅಡವಿಟ್ಟವರ ಸಂಖ್ಯೆ ಅಗಾಧವಾಗಿ ಬೆಳೆಯುತ್ತಿದೆ. ದೇಶದ ಮೂರನೇ ಒಂದು ಭಾಗದಷ್ಟು ಮನೆ ಮಾಲಿಕರು ಭಾರೀ ಮಾನಸಿಕ ಒತ್ತಡಕ್ಕೆ ಸಿಲುಕಿದ್ದಾರೆಂದು ಈ ಅಧ್ಯಯನ ಹೇಳುತ್ತದೆ.

ಹೀಗಾಗಿ, ದಿನದಿಂದ ದಿನಕ್ಕೆ ಹೆಚ್ಚೆಚ್ಚು ಜನ ಮಾನಸಿಕ ವೇದನೆಗೆ ಒಳಪಟ್ಟು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. 2008ರಲ್ಲಿ ಅಮೆರಿಕದಾದ್ಯಂತ 251 ಜನ ತಾವು ಕೆಲಸ ಮಾಡುತ್ತಿದ್ದ ಕಚೇರಿಗಳಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೆಲಸದ ಪ್ರದೇಶದಲ್ಲೇ ಇಷ್ಟೊಂದು ಪ್ರಮಾಣದಲ್ಲಿ ಆತ್ಮಹತ್ಯೆ ಮಾಡಿಕೊಂಡದ್ದು ಅಮೆರಿಕ ಚರಿತ್ರೆಯಲ್ಲೇ ಇದು ಮೊದಲು. ಇನ್ನು ಮನೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯನ್ನೂ ಸೇರಿಸಿದರೆ ವರ್ಷವೊಂದಕ್ಕೆ ಕನಿಷ್ಠ 30,000 ಆತ್ಮಹತ್ಯೆಗಳು ನಡೆಯುತ್ತಿವೆ ಎಂದು ಅಂಕಿಅಂಶಗಳು ತಿಳಿಸುತ್ತವೆ. 25 ರಿಂದ 34 ವರ್ಷ ವಯೋಮಾನದವರ ಒಟ್ಟಾರೆ ಸಾವಿನ ಕಾರಣಗಳಲ್ಲಿ ಆತ್ಮಹತ್ಯೆ ಎರಡನೇ ಸ್ಥಾನ ಗಳಿಸಿಕೊಂಡಿದೆ.

ಇದು ಅಮೆರಿಕ ಎಂಬ ಕಲ್ಪನಾ ಸ್ವರ್ಗದ ಅಸಲೀ ಚಿತ್ರಣ. ಸಾಮ್ರಾಜ್ಯಶಾಹಿ ಲಾಭಕೋರ ಸಂಸ್ಕೃತಿ ಸೃಷ್ಟಿಸಿದ ನರಕ.

...ಇದು ಕರುಣೆಯ ಹಿಂದಿನ ಕ್ರೌರ್ಯ

...1988ರಲ್ಲಿ ಬ್ರಿಟಿಷ್ ವಿಮಾನವೊಂದನ್ನು ಸ್ಕಾಟ್...ನ ಲೋಕರ್‌ಬೈ ಎಂಬಲ್ಲಿ ಸ್ಫೋಟಿಸಿ ಅದರೊಳಗಿದ್ದ ... 270 ಜನರನ್ನು ಕೊಂದು ಹಾಕಿದ ಎನ್ನಲಾದ ...ಮೂದ ಅಬ್ದೆಲ್ ಬಾಸೆಟ್ ಅಲಿ ಅಲ್-ಮೆಗ್ರಾಹಿ ...ವವನನ್ನು ಕೊನೆಗೂ ಸ್ಕಾಟ್‌ಲ್ಯಾಂಡ್ ಬಿಡುಗಡೆ ... ಅವನ ತವರು ದೇಶವಾದ ಲಿಬಿಯಾಕ್ಕೆ ...ಟ್ಟಿದೆ. ಆತ ನಿಜಕ್ಕೂ ಆ ಭೀಕರ ನರ...ದಲ್ಲಿ ಪಾಲ್ಗೊಂಡಿದ್ದನೋ ಇಲ್ಲವೋ ...ಲ್ಲ. ಆತನ ಮೇಲಿದ್ದ ಆರೋಪವನ್ನು ...ತುಪಡಿಸುವುದಕ್ಕೆ ಯಾವುದೇ ಪ್ರತ್ಯಕ್ಷ ...ಳಿರಲಿಲ್ಲ. ಆದರೂ ಸ್ಕಾಟ್‌ಲ್ಯಾಂಡ್ ...ಾಲಯ 'ಸಾಂದರ್ಭಿಕ ಸಾಕ್ಷ್ಯಾಧಾರ' ...ಷ್ಟೇ ಇಟ್ಟುಕೊಂಡು ಆತನಿಗೆ 2001ರಲ್ಲಿ ...ವಧಿ ಶಿಕ್ಷೆ ಕೊಟ್ಟು ಜೈಲಿಗೆ ಅಟ್ಟಿತ್ತು.



...ಂದಲೂ ಆತನನ್ನು ಬಿಡುಗಡೆ ಮಾಡಬೇಕು ಎಂಬ ... ಲಿಬಿಯಾದಿಂದ ಬರುತ್ತಲೇ ಇತ್ತು. ಬ್ರಿಟನ್ ... ಲಿಬಿಯಾಗಳ ನಡುವೆ ಆಗಾಗ ನಡೆಯುತ್ತಿದ್ದ ...ಯ ಮಾತುಕತೆಗಳಲ್ಲೂ ಈ ವಿಚಾರ ನಿರಂತರವಾಗಿ ... ಬರುತ್ತಿತ್ತು. ಆದರೆ ಬ್ರಿಟನ್ ಸರ್ಕಾರ ಮಾತ್ರ ...ಟ್ಟಿನಲ್ಲಿ ಒಂದಿಷ್ಟೂ ಒಲವು ತೋರಿಸಿರಲಿಲ್ಲ. ...ಈಗ ಸ್ಕಾಟ್‌ಲ್ಯಾಂಡ್ ಸರ್ಕಾರ ಆತನನ್ನು ದಿಢೀರನೆ ...ಡೆ ಮಾಡಿ ಅಂತರರಾಷ್ಟ್ರೀಯ ಸಮುದಾಯಕ್ಕೆ ... ಮೂಡಿಸಿದೆ. ಇತ್ತೀಚೆಗೆ ಮೆಗ್ರಾಹಿಂಗೆ ಕ್ಯಾನ್ಸರ್ ...ರುವುದು ಗೊತ್ತಾಗಿ ಆತ ... ಕೇವಲ ಮೂರು ... ಮಾತ್ರವೇ ಬದುಕು... ವೈದ್ಯರು ಹೇಳಿದ್ದರು. ... ಸಂದರ್ಭದಲ್ಲಿ ಆತ ... ದಿನಗಳನ್ನು ತನ್ನ ...ಬದೊಂದಿಗೆ ಕಳೆಯಲಿ ... ಮಾನವೀಯತೆಯ ...ಿಂದ ಬಿಡುಗಡೆ ಮಾಡಲಾಗಿದೆ ಎಂದು ...ಲ್ಯಾಂಡ್ ಸರ್ಕಾರ ಹೇಳಿದೆ.



...ಮೆರಿಕದ ನೇತೃತ್ವದಲ್ಲಿ ಇಡೀ ಸಾಮ್ರಾಜ್ಯಶಾಹಿ ...ಗಳು 'ಭಯೋತ್ಪಾದನೆಯ ವಿರುದ್ಧ ವಿಶ್ವ ಸಮರ' ...ದ ಈ ಹೊತ್ತಿನಲ್ಲಿ 270 ಜನರನ್ನು ಕೊಂದ ...ವಾದಿ'ಯೊಬ್ಬನನ್ನು ಯಾಕೆ ಬಿಡುಗಡೆ ...ಮಾಡಿತು ಎಂಬ ಪ್ರಶ್ನೆಯನ್ನು ಕೆದಕುತ್ತಾ ಹೋದರೆ ...ಬಿಡುಗಡೆ ಎಂಬ ಕರುಣೆಯ ಹಿಂದಿನ ಕ್ರೌರ್ಯದ ...ಅನಾವರಣಗೊಳ್ಳುತ್ತದೆ. ವಾಸ್ತವದಲ್ಲಿ ಬ್ರಿಟನ್‌ನ ಅನೇಕ ...ಗಳು ಲಿಬಿಯಾದಲ್ಲಿ ವ್ಯಾಪಾರ, ವಹಿವಾಟು, ...ತೆ, ಕೈಗಾರಿಕೋದ್ಯಮಗಳಲ್ಲಿ ನಿರತವಾಗಿವೆ. ಆದರೆ ಅವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಲಿಬಿಯಾ ಸರ್ಕಾರದಿಂದ, ಅಧಿಕಾರಿಗಳಿಂದ ಕಿರುಕುಳ ಅನುಭವಿಸುತ್ತಿವೆ. ಅದರಲ್ಲೂ ವಿಶೇಷವಾಗಿ ಬ್ರಿಟಿಷ್ ಪೆಟ್ರೋಲಿಯಂ (ಬಿಪಿ) ಎಂಬ ಕಂಪೆನಿ ಲಿಬಿಯಾದಲ್ಲಿ 900 ಮಿಲಿಯನ್ ಡಾಲರ್‌ಗಳಷ್ಟು ಬೃಹತ್ ಮೊತ್ತದ ಹಣವನ್ನು ಹೂಡಿಕೆ ಮಾಡಿದೆ. ಆದರೆ ಅದರ ಕಾರ್ಯಚಟುವಟಿಕೆಗಳು ಸುಗಮವಾಗಿ ನಡೆಯುವುದಕ್ಕೆ ಲಿಬಿಯಾ ಸರ್ಕಾರದಿಂದ ಅನೇಕ ಅಡಚಣೆಗಳು ಎದುರಾಗುತ್ತಿವೆ. ಆದ್ದರಿಂದ ಬ್ರಿಟನ್ ಸರ್ಕಾರ ಲಿಬಿಯಾದೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಬೇಕೆಂದೂ, ಆ ಮೂಲಕ ತಮ್ಮ ಬಿಸಿನೆಸ್‌ಗೆ ಅನುಕೂಲ ಮಾಡಿಕೊಡಬೇಕೆಂದೂ ಈ ಕಂಪೆನಿಗಳು ಬ್ರಿಟನ್ ಸರ್ಕಾರದ ಮೇಲೆ ಮೊದಲಿನಿಂದಲೂ ಒತ್ತಡ ಹೇರುತ್ತಲೇ ಬಂದಿದ್ದವು. ಈ ಕಾರಣಕ್ಕಾಗಿಯೇ 2007ರಲ್ಲಿ ಅಂದಿನ ಬ್ರಿಟನ್ ಪ್ರಧಾನಿ ಟೋನಿ ಬ್ಲೇರ್ ಲಿಬಿಯಾಕ್ಕೆ ಭೇಟಿ ಕೊಟ್ಟು ಮಾತುಕತೆ ನಡೆಸಿದ್ದರು. ಆಗ ತಮ್ಮ ಮೆಗ್ರಾಹಿಯನ್ನೂ ಒಳಗೊಂಡಂತೆ ಇನ್ನಿತರ ಲಿಬಿಯನ್ ಪ್ರಜೆಗಳನ್ನು ಬಿಡುಗಡೆ ಮಾಡಬೇಕೆಂದು ಲಿಬಿಯಾ ಒತ್ತಾಯಪಡಿಸಿತ್ತು. ಅಂದಿನಿಂದಲೇ ಇಂತಹ ಒಂದು ಬಾಂಧವ್ಯಕ್ಕೆ ಭೂಮಿಕೆ ಸಿದ್ಧಗೊಂಡಿತು. ಈಗ ಅದರ ಫಲಿತಾಂಶವಾಗಿ ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್ ಮೇಲೆ ಒತ್ತಡ ತಂದು ಮೆಗ್ರಾಹಿಯನ್ನು ಬಿಡುಗಡೆಗೊಳಿಸಿದೆ. ಲಿಬಿಯಾದ ನಾಯಕ ಕರ್ನಲ್ ಮುವಾಮ್ಮಾರ್ ಎಲ್-ಗಡಾಫಿಯ ಹಿರಿಯ ಮಗ ಸಾಯಿಫ್ ಅಲ್ ಇಸ್ಲಾಮ್ ಎಲ್-ಗಡಾಫಿಯೇ ಖುದ್ದಾಗಿ ಸ್ಕಾಟ್‌ಲ್ಯಾಂಡ್‌ಗೆ ಹೋಗಿ ಮೆಗ್ರಾಹಿಯನ್ನು ಕರೆದುಕೊಂಡು ಬಂದ. ಆತನನ್ನು ಹೊತ್ತ ವಿಮಾನ ಲಿಬಿಯಾಕ್ಕೆ ಬಂದಿಳಿಯುತ್ತಿದ್ದಂತೆ ಇಡೀ ಲಿಬಿಯಾ ಒಬ್ಬ ಮಹಾನ್ ನಾಯಕನಂತೆ ಅವನನ್ನು ಬರಮಾಡಿಕೊಂಡಿತು. ಇಡೀ ಲಿಬಿಯಾ ಸಂಭ್ರಮಾಚರಣೆ ನಡೆಸಿತು.


ಮೆಗ್ರಾಹಿಯ ಬಿಡುಗಡೆಯ ಹಿಂದೆ ಇಂಗ್ಲೆಂಡ್-ಲಿಬಿಯಾ ನಡುವಿನ ವ್ಯಾಪಾರ ಸಂಬಂಧಗಳು ಇವೆ ಎಂದು ಖುದ್ದಾಗಿ ಸಾಯಿಫ್ ಅಲ್ ಇಸ್ಲಾಮ್ ಎಲ್-ಗಡಾಫಿಯೇ ಮಾಧ್ಯಮಗಳಿಗೆ ಹೇಳಿದ್ದಾರೆ. ಲಾಭವನ್ನೇ ಪ್ರಧಾನ ಗುರಿಯಾಗಿಸಿಕೊಂಡಿರುವ ಕಾರ್ಪೊರೇಟ್ ಕಂಪೆನಿಗಳು, ಸಾಮ್ರಾಜ್ಯಶಾಹಿ ದೇಶಗಳು ಅದನ್ನು ಸಾಧಿಸುವುದಕ್ಕಾಗಿ ಎಂತಹ ಕೆಲಸಗಳಿಗೂ ಇಳಿಯುತ್ತವೆ ಎನ್ನುವುದಕ್ಕೆ ಇದೊಂದು ನಿದರ್ಶನವಷ್ಟೆ. ■

ಕಾರ್ಮಿಕ ಇಲಾಖೆ ಕಾಮುಕ

ಉತ್ತಪ್ಪನಿಗೆ ರಕ್ಷೆ ನೊಂದವಳಿಗೆ ಶಿಕ್ಷೆ

ಬಿಜೆಪಿ ಸರ್ಕಾರದ ಕಾರ್ಮಿಕ ಸಚಿವ ಬಚ್ಚೇಗೌಡ ಹೊಟ್ಟೆಗೆ ಅನ್ನ ತಿನ್ನುತ್ತಾನೋ ಇಲ್ಲಾ ಮಣ್ಣು ತಿನ್ನುತ್ತಿದ್ದಾನೋ ಗೊತ್ತಾಗಬೇಕಿದೆ.

ಕಾರ್ಮಿಕ ಇಲಾಖೆಯ ಜಾಯಿಂಟ್ ಲೇಬರ್ ಕಮಿಷನರ್ ಆಗಿದ್ದ ಎಚ್.ಎಸ್. ಉತ್ತಪ್ಪ ಎಂಬ ಕಚ್ಚೇಹರುಕ ಅಧಿಕಾರಿ ಇಲಾಖೆಯ ಮಹಿಳಾ ನೌಕರರಿಗೆ ಲೈಂಗಿಕ ಕಿರುಕುಳ ಕೊಡುತ್ತಿರುವ ವಿಚಾರ ಜುಲೈನಲ್ಲಿ ಬಹಿರಂಗವಾಗಿತ್ತಲ್ಲ, ಆ ತಕ್ಷಣ ವೀರಾವೇಶದಿಂದ ಉತ್ತಪ್ಪನನ್ನು ಸರ್ಕಾರ ಸಸ್ಪೆಂಡ್ ಮಾಡಿತ್ತು. ಅದಾಗಿ ಇನ್ನೂ ಒಂದು ತಿಂಗಳೂ ಆಗಿಲ್ಲ, ಅದೇ ಸ್ತ್ರೀಪೀಡಕ ಉತ್ತಪ್ಪನನ್ನು ಅದೇ ಸ್ಥಾನದಲ್ಲಿ ಮರುನೇಮಿಸಿದ್ದಾನೆ ಮಂತ್ರಿ ಬಚ್ಚೇಗೌಡ!




ಆಶ್ಚರ್ಯದ ವಿಚಾರ ಏನೆಂದರೆ ಉತ್ತಪ್ಪನ ಸ್ತ್ರೀಪೀಡನೆ ಬಗ್ಗೆ ಒಂದು ತನಿಖೆಯೂ ಇಲ್ಲ, ವಿಚಾರಣೆಯೂ ನಡೆದಿಲ್ಲ.

ಇದು ಬಿಜೆಪಿಗಳ ಆಡಳಿತ ವೈಖರಿ.

ಲಂಪಟನಿಗೇ ರಕ್ಷಣೆ

ಕಳೆದ ಜೂನ್ 24 ರಂದು ಕಾರ್ಮಿಕ ಇಲಾಖೆಯಲ್ಲಿ ಮ್ಯಾನೇಜರ್ ಆಗಿರುವ ನಿರ್ಮಲ ಕುಮಾರಿ ಎಂಬುವರು ತನ್ನ ಮೇಲಧಿಕಾರಿ ಉತ್ತಪ್ಪ ತನಗೆ ಲೈಂಗಿಕ ಕಿರುಕುಳ ಕೊಡುತ್ತಿದ್ದಾನೆಂದು ಅಧಿಕೃತವಾಗಿಯೇ ಒಂದು ದೂರು ನೀಡಿದ್ದರು. ಇದು ಭಾರಿ ಸುದ್ದಿಯಾಯಿತು. ಅದಾದ ಒಂದೆರಡು ದಿನದಲ್ಲಿ ಇಲಾಖಾ ವಿಚಾರಣೆ ಬಾಕಿ ಇರಿಸಿ ಉತ್ತಪ್ಪನನ್ನು ಸರ್ಕಾರ ಸಸ್ಪೆಂಡ್ ಮಾಡಿತು. ಉತ್ತಪ್ಪನ ಲೈಂಗಿಕ ಕಿರುಕುಳದ ಬಗ್ಗೆ ತನಿಖೆ ನಡೆಸಲು ಒಂದು ಸಮಿತಿ ನೇಮಿಸಿ ಹದಿನೈದು ದಿನದೊಳಗಾಗಿ ವರದಿ ನೀಡುವಂತೆ ಸೂಚಿಸಲಾಗಿತ್ತು. ಆದರೆ ಅಸಲಿ ನಾಟಕ ಶುರುವಾಗಿದ್ದೇ ಆನಂತರ.



ಈ ವಿಚಾರಣಾ ಸಮಿತಿಯ ಮುಖ್ಯಸ್ಥನನ್ನಾಗಿ ಅದೇ ಇಲಾಖೆಯ ಜೆ.ಎಚ್. ಕೊಂಗಿ ಎಂಬಾತನನ್ನು ನಿಯೋಜಿಸಲಾಗಿತ್ತು. ಆದರೆ ಡೆಪ್ಯೂಟಿ ಲೇಬರ್ ಕಮಿಷನರ್ ಆಗಿದ್ದ ಕೊಂಗಿ ಸ್ಥಾನಬಲದಲ್ಲಿ ಆರೋಪಿ ಉತ್ತಪ್ಪನಿಗಿಂತ ಕೆಳಗಿನವರು. ಹಾಗಾಗಿ ಕೊಂಗಿಗೆ ತನ್ನ ಮೇಲಧಿಕಾರಿ ಮೇಲೆ ವಿಚಾರಣೆ ನಡೆಸುವ ಅಧಿಕಾರ ಇಲ್ಲ ಎಂಬ ಕ್ಯಾತೆ ಶುರುವಾಯಿತು. ಅಷ್ಟೇ ಅಲ್ಲದೆ ವಿಚಾರಣಾ ಸಮಿತಿಯೊಳಗೆ ಅರ್ಧಕ್ಕಿಂತ ಹೆಚ್ಚು ಮಹಿಳೆಯರಿರಬೇಕೆಂಬ ಸುಪ್ರೀಂಕೋರ್ಟ್ ತೀರ್ಪನ್ನು ಇಲಾಖಾ ಅಧಿಕಾರಿಗಳೇ ನಿರ್ಲಕ್ಷಿಸಿದ್ದರು.... ಕೊನೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕಿ ಸಂಧ್ಯಾ ವೇಣುಗೋಪಾಲ್ ಶರ್ಮ ಎಂಬುವರನ್ನು ಸಮಿತಿಯ ಮುಖ್ಯಸ್ಥೆಯಾಗಿ ಸರ್ಕಾರ ನೇಮಿಸಿತು.. ಆದರೆ ಸಂಧ್ಯಾರವರು ವಿಚಾರಣೆ ಶುರು ಮಾಡುವ ಮೊದಲೇ ಅವರನ್ನು ಮಹಿಳಾ ಇಲಾಖೆಯಿಂದಲೇ ವರ್ಗಾ ಮಾಡಿ ಕಳಿಸಿಬಿಡಲಾಯಿತು. ಈ ಮಧ್ಯೆ ಸಮಿತಿಯೊಳಗೆ NGO ಮಹಿಳಾ ಪ್ರತಿನಿಧಿ ಇರಲೇಬೇಕೆಂಬ ನಿಯಮವನ್ನು ಜ್ಞಾಪಿಸಿಕೊಂಡು APSA ಸಂಸ್ಥೆಯ ಶೈಲಾ ದೇವರಾಜ್ ಎಂಬುವರನ್ನು ನಿಯೋಜಿಸಲಾಯಿತು. ಈ ವಿಚಾರಣಾ ಸಮಿತಿಯು ದೂರು ಕೊಟ್ಟಿದ್ದ ನಿರ್ಮಲಾ ಕುಮಾರಿಯ ಒಂದೂ ಹೇಳಿಕೆ ಪಡೆದಿಲ್ಲ, ವಿಚಾರಣೆ ಪೂರ್ತಿಗೊಳಿಸಿ ವರದಿಯನ್ನು ಕೊಟ್ಟಿಲ್ಲ. ಅಷ್ಟರೊಳಗೆ ಉತ್ತಪ್ಪ ಹಳೇ ಗೆಟಪ್ಪಿನಲ್ಲೇ ಮತ್ತೆ ಬಂದು ಅಧಿಕಾರ ವಹಿಸಿಕೊಂಡಿದ್ದಾನೆ. ಈ ನಡುವೆ ದೂರು ಕೊಟ್ಟಿದ್ದ ನಿರ್ಮಲಾ ಕುಮಾರಿಯ ಮೇಲೇ ಸೇಡು ತೀರಿಸುವಂತೆ ಆಕೆಯನ್ನು ಅಂಕಿ ಅಂಶ ವಿಭಾಗಕ್ಕೆ ವರ್ಗಾ ಮಾಡಲಾಗಿದೆ.

ಹೇಗಿದೆ ಬಿಜೆಪಿಗಳ ಸಾಮಾಜಿಕ ನ್ಯಾಯದಾನ?

ಬಚ್ಚಲುಗೌಡನ ಭಂಡತನ

ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಅವರಿಗೆ ಲೈಂಗಿಕ ಕಿರುಕುಳದಿಂದ ರಕ್ಷಣೆ ನೀಡುವಂಥ ಅನೇಕ ನಿಯಮ ಹಾಗೂ ಕಾನೂನುಗಳಿವೆ. ಆದರೆ ಸಚಿವ ಬಚ್ಚೇಗೌಡನಿಗೆ ಅದರ ತಲೆಬುಡ ತಿಳಿದಂತಿಲ್ಲ. ವಿಚಾರಣೆ ಮುಗಿಯುವ ಮುನ್ನವೇ ಉತ್ತಪ್ಪನನ್ನು ಪುನರ್ ನೇಮಿಸಿದ್ದು ಯಾಕೆಂದು ಕೇಳಿದರೆ "ಸಿಬ್ಬಂದಿ ಕೊರತೆ ಇದೆ, ಅದಕ್ಕೆ" ಅಂದಿದ್ದಾನೆ!

ಹೊಟ್ಟೆಗೆ ಅನ್ನ ತಿನ್ನುವವರು ಆಡುವ ಮಾತಾ ಇದು? ಈ ಸಚಿವನ ಹೆಸರು ಬಚ್ಚೇಗೌಡನೆಂಬ ಬದಲಾಗಿ ಬಚ್ಚಲು ಗೌಡಾ ಅಂತಿರಬೇಕಿತ್ತು ಅನ್ನಿಸಿದರೆ ತಪ್ಪೇನು?

ಈ ಡೀಲಿನಲ್ಲಿ ಬಚ್ಚೇಗೌಡ ಅದೆಷ್ಟು ಲಕ್ಷ ತಿಂದಿರಬಹುದೆಂದು ಮುಖ್ಯಮಂತ್ರಿ ಯಡಿಯೂರಪ್ಪ ಚೆಕ್ ಮಾಡಬೇಕಿದೆ. ಇದೇ ಕಾರ್ಮಿಕ ಇಲಾಖೆಯ ಉನ್ನತ ಮೂಲಗಳು ಇನ್ನೊಂದು ಅನುಮಾನ ವ್ಯಕ್ತಪಡಿಸುತ್ತಿವೆ. ಅದೇನೆಂದರೆ ಈ ಉತ್ತಪ್ಪ ಇದ್ದಿದ್ದು ಕಾರ್ಮಿಕರಿಗೆ ಕನಿಷ್ಠ ವೇತನ ವಿಭಾಗದ ಮುಖ್ಯಸ್ಥನಾಗಿ. ಇತ್ತೀಚೆಗೆ ಗಾರ್ಮೆಂಟ್ಸ್ ನೌಕರರಿಗೆ ಸಂಬಂಧಿಸಿದಂತೆ ಕನಿಷ್ಠ ವೇತನ ಮೊತ್ತ ಹೆಚ್ಚಳವಾಗಿ ಸರ್ಕಾರಿ ಆದೇಶ ಹೊರಬೀಳಬೇಕಿತ್ತು. ಅದೇ ವೇಳೆಯಲ್ಲಿ ಗಾರ್ಮೆಂಟ್ಸ್ ಮಾಲೀಕರು ಆರ್ಥಿಕ ಕುಸಿತದ ನೆಪ ಹೇಳಿ ಈ ಆದೇಶ ಹೊರಬೀಳದಂತೆ ಮಾಡಲು ಖದೀಮ ಉತ್ತಪ್ಪನನ್ನು ಅದೇ ಜಾಗಕ್ಕೆ ಕರೆತಂದು ಕೂರಿಸಿದ್ದಾರೆ ಎನ್ನಲಾಗಿದೆ.

ತನ್ನ ಇಲಾಖೆಯ ಮಹಿಳಾ ನೌಕರರು ಮಾನ ಹೋಗುತ್ತಿದೆ ಎಂದು ಗೋಳಾಡುತ್ತಿದ್ದರೂ ಬಚ್ಚೇಗೌಡ ಯಾಕೆ ಕೇರ್ ಮಾಡಲಿಲ್ಲ ಅಂತಾ ಗೊತ್ತಾಯಿತಾ? ●


ಮಾನವ ಹಕ್ಕು ಆಯೋಗ ಕ್ರಮ ಕೈಗೊಳ್ಳಲಿ



ಕಾರ್ಮಿಕ ಇಲಾಖೆಯ ಮ್ಯಾನೇಜರ್ ನಿರ್ಮಲ ಕುಮಾರಿ ತನ್ನ ಮೇಲಧಿಕಾರಿ ಉತ್ತಪ್ಪನ ವಿರುದ್ಧ ಮಾಡಿದ್ದ ಲೈಂಗಿಕ ಕಿರುಕುಳದ ಆರೋಪ ಯಾವುದೇ ವಿಚಾರಣೆಯಾಗುವ ಮೊದಲೇ ಮೂಲೆಗೆ ಸೇರಿದೆ. ಇಂತಹ ಪ್ರಕರಣಗಳ ಬಗ್ಗೆ ಯಾವ ರೀತಿಯ ಕ್ರಮ ವಹಿಸಬೇಕೆಂದು ಸ್ವತಃ ಸುಪ್ರೀಂಕೋರ್ಟ್ 1997 ರ ವಿಶಾಖ ಕೇಸ್‌ನಲ್ಲಿ ಸೂಚಿಸಿದೆ. ಜೊತೆಗೆ ಕರ್ನಾಟಕ ನಾಗರಿಕ ಸೇವಾ ನಿಯಮ 1957 ರ ಸೆಕ್ಷನ್ 10 ರಲ್ಲೂ ವಿವರಗಳಿವೆ. ಆದರೆ ಸಚಿವ ಬಚ್ಚೇಗೌಡ ಅದ್ಯಾವುದನ್ನೂ ಲೆಕ್ಕಿಸಿಲ್ಲ. ಕನಿಷ್ಠ ಪಕ್ಷ ರಾಜ್ಯ ಮಾನವಹಕ್ಕುಗಳ ಆಯೋಗವಾದರೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಕೇಸ್ ದಾಖಲಿಸಿಕೊಂಡು ತನಿಖೆ ಮಾಡಿ ತಪ್ಪಿತಸ್ಥನಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಲಿ.


ನೆಲಮಂಗಲವೆಂಬ ಮತ್ತೊಂದು 'ವಾಗಟ'

ಬಿಎಮ್ಮೆಲ್ ಕೃಷ್ಣಪ್ಪನ ಹತ್ಯೆಗೆ ಯಾರ ಸ್ಕೆಚ್ಚು?...



ಬಿನ್ನಮಂಗಲ ಕೃಷ್ಣಪ್ಪ

ಕೃಷ್ಣಪ್ಪನ ಆಯುಸ್ಸಿನ್ನೂ ಗಟ್ಟಿಯಿತ್ತೇನೊ. ನೆಲಮಂಗಲದ ಅನಭಿಷಕ್ತ ದೊರೆ ಬಿನ್ನಮಂಗಲ ಕೃಷ್ಣಪ್ಪನ ಕೊಲೆಯತ್ನ ವಿಫಲಗೊಂಡಿದೆ. ಕೊಲ್ಲಲು ಬಂದ ಹರ್ಷನೇ ಲಾರಿಗೆ ಸಿಲುಕಿ ಕಾಲು ಕಳಕೊಂಡದ್ದು ಮತ್ತು ಯತೀಶನ ತಲೆಗೆ ಗುಂಡು ಹೊಕ್ಕಿ ಆತ ಕೋಮಾ ಸ್ಥಿತಿಯಲ್ಲಿ ನಿಮ್ಹಾನ್ಸ್‌ನಲ್ಲಿ ಬಿದ್ದಿರುವುದು ಇಡೀ ಘರ್ಷಣೆಯ ಭೀಕರತೆಗೆ ಸಾಕ್ಷಿಗಳಷ್ಟೇ. ತನ್ನ ಪಾಡಿಗೆ ತಾನಿದ್ದರೂ ವೈಷಮ್ಯಕ್ಕೆ ಸಿಲುಕಿದ ಬಿಎಮ್ಮೆಲ್ ಕೃಷ್ಣಪ್ಪ. ಇತ್ತ ಜೈಲಲ್ಲಿ ಕೂತು ಪರಸ್ಪರರನ್ನು ಮುಗಿಸಲು ತಿಣುಕುತ್ತಿರುವ ಬೆತ್ತನಗೆರೆ ಸೀನ ಮತ್ತು ಕಿಲ್ಲರ್ ಶಂಕ್ರ. ವಿನಾಕಾರಣ ಕೊಲೆಯಾದ ಹ್ಯಾಡಾಳು ದೇವಿ. ಅದಕ್ಕೂ ಮುನ್ನ ಬಲಿಯಾದ ಬೆತ್ತನಗೆರೆಯ ಕುರುಬ ನಾಯಕರು. ಈಗ ಕೃಷ್ಣಪ್ಪನನ್ನು ಮುಗಿಸಲು ಹೋಗಿ ಕಾಲನ್ನೇ ಕಳಕೊಂಡ ದೇವಿಯ ಮಗ ಹರ್ಷ ಮತ್ತು ಗುಂಡಿಗೆ ತಲೆಕೊಟ್ಟ ಯತೀಶ. ನೆಲಮಂಗಲವೆಂಬ ಊರಿನ ದೌರ್ಭಾಗ್ಯಕ್ಕೆ ಇದಕ್ಕಿಂತ ಬೇಕೆ?

ನೆಲಮಂಗಲದ ಅನಭಿಷಕ್ತ ದೊರೆ ಬಿನ್ನಮಂಗಲ ಕೃಷ್ಣಪ್ಪನ ಕೊಲೆಯತ್ನ ವಿಫಲಗೊಂಡಿದೆ. ಗುಂಡೇಟು ತಿಂದೂ ಬದುಕುಳಿದ ಬಿಎಮ್ಮೆಲ್ ಕೃಷ್ಣಪ್ಪ ಅರ್ಥಾತ್ ಬಿನ್ನಮಂಗಲ ಕೃಷ್ಣಪ್ಪ ನೆಲಮಂಗಲದ ಅನಧಿಕೃತ ಎಮ್ಮೆಲ್ಲೆಯೂ ಹೌದು. ಇಲ್ಲಿನ ರಾಜಕಾರಣದ ಪಿತಾಮಹ ಕೂಡ ಹೌದು.


ಬೆಟ್ಟನಗರ ಶಂಕರ

ಆಗಸ್ಟ್ 24 ರ ಸೋಮವಾರದ ಬೆಳಿಗ್ಗೆಯೇ ನಡೆದ ದಾಳಿ ಬಹುಶಃ ನೆಲಮಂಗಲಕ್ಕಷ್ಟೇ ಅಲ್ಲ ಬೆಂಗಳೂರಿಗೂ ಹೊಸದು. ಮಾಜಿ ಮಂತ್ರಿ ಚನ್ನಿಗಪ್ಪನ ಭೈರನಾಯಕನಹಳ್ಳಿ ಮನೆಯಿಂದ ಹತ್ತೂವರೆಯ ಹೊತ್ತಿಗೆ ಹೊರಬಿದ್ದ ಕೃಷ್ಣಪ್ಪನ ಕಾರನ್ನು ಒಂದು ಲಾರಿ ಹಿಂಬಾಲಿಸಿಕೊಂಡು ಬಂದು ಮೈಲ ನಾಯಕನ ಹಳ್ಳಿಯಲ್ಲಿ ಅದಕ್ಕೆ ಮತ್ತೊಂದು ಲಾರಿ ಅಡ್ಡಹಾಕುತ್ತಿದ್ದಂತೆ ಹಿಂದಿನಿಂದ ಬಂದ ಲಾರಿ ಗುದ್ದಿಬಿಟ್ಟರೆ ಕಾರಿನ ಸಮೇತ ಕೃಷ್ಣಪ್ಪ ಅಪ್ಪಚ್ಚಿಯಾಗಿ ಹೋಗುತ್ತಾನೆಂದೇ ಲೆಕ್ಕ ಹಾಕಿದ ಬಂಡೆ ಮಂಜನ ಲೆಕ್ಕಾಚಾರ ಆತನಿಗೇ ಉಲ್ಟಾ ಹೊಡೆದಿದೆ.




ಇಡೀ ಘರ್ಷಣೆ ಅದೆಷ್ಟು ಸಿನಿಮೀಯವೆಂದರೆ; ಸ್ಕೆಚ್ಚು ಸರಿಯಾಗೇ ಇತ್ತು. ಬಿನ್ನಮಂಗಲ ಕೃಷ್ಣಪ್ಪ ಬೆಳ್ಳಂಬೆಳಿಗ್ಗೆಯೇ ಮನೆಬಿಟ್ಟದ್ದು ಅಲ್ಲಿಂದ ನೇರವಾಗಿ ಭೈರನಾಯಕನಹಳ್ಳಿಯ ಚೆನ್ನಿಗಪ್ಪನ ಮನೆ ತಲುಪಿದ್ದು ಮತ್ತು ಅಲ್ಲಿಂದ ಮತ್ತೆ ನೆಲಮಂಗಲದ ರಸ್ತೆಯಲ್ಲಿ ವಾಪಸ್ಸಾಗಿದ್ದು ಎಲ್ಲವನ್ನೂ ಎದುರಾಳಿ ಹ್ಯಾಡಾಳು ಮಂಜನ (ಬಂಡೆ ಮಂಜ) ಗ್ಯಾಂಗ್ ಕಣ್ಣಿಟ್ಟು ಗಮನಿಸಿದೆ. ಕೃಷ್ಣಪ್ಪನ ಕಡು ವೈರಿ ಮತ್ತು ಜೆಡಿಎಸ್ ನಾಯಕ ಹ್ಯಾಡಾಳು ದೇವಿಯ ಹತ್ಯೆಗೆ ಪ್ರತೀಕಾರ ಹೇಳಲು ಕಳೆದೊಂದು ವರ್ಷದಿಂದ ಹೊಂಚು ಹಾಕುತ್ತಲೇ ಇದ್ದ ಬೆತ್ತನಗೆರೆ ಸೀನ ಸದ್ಯ ಪರಪ್ಪನ ಅಗ್ರಹಾರ ಜೈಲಲ್ಲಿ ಕಂಬಿ ಎಣಿಸುತ್ತಿದ್ದಾನೆ.

ಮೊದಲು ಬಾಳೇಮಂಡಿ ಬಸವಯ್ಯನ ಹತ್ಯೆ ನಂತರ ವಕೀಲ ದೇವರಾಜು ಮತ್ತು ಪಂಚಾಯ್ತಿ ಮೆಂಬರ್ ಕೃಷ್ಣಮೂರ್ತಿಯ ಜೋಡಿ ಕೊಲೆ; ಹೀಗೆ ಒಂದರ ಮೇಲೊಂದು ಭೀಕರ ಹತ್ಯೆಗಳನ್ನೆಸಗುತ್ತಲೇ ಬಂದ ಪಾತಕಿ ಬೆತ್ತನಗೆರೆ ಸೀನ ಜೈಲು ಪಾಲಾಗುತ್ತಿದ್ದಂತೆ ಎದ್ದು ನಿಂತವನು ಕ್ರಿಮಿ ಬೆತ್ತನಗೆರೆ ಶಂಕ್ರ. ಇಂಥ ಹತ್ಯೆಗಳ ಲಾಭವನ್ನೆಲ್ಲ ಸೀನ ಅನುಭವಿಸುತ್ತಾ ಸೀನನ ಅಕ್ಕನ ಗಂಡ ಹ್ಯಾಡಾಳು ದೇವಿ ನೆಲಮಂಗಲದ ಯಜಮಾನಿಕೆಗೆ ನಿಂತಿದ್ದನ್ನು ಶಂಕ್ರನಂಥ ಕ್ರಿಮಿ ತಾನೇ ಹೇಗೆ ಸಹಿಸಲು ಸಾಧ್ಯ?

■ ರಾ. ಸೋಮನಾಥ್

ಅದಕ್ಕೆ ಕಾರಣ ಶಂಕ್ರನ ವಸೂಲಿ ಹಾವಳಿಗೆ ಸಿಲುಕಿದ ನೆಲಮಂಗಲದ ಇಬ್ಬರು ರಿಯಲ್ ಎಸ್ಟೇಟ್ ಕುಳಗಳ ಪರ ವಹಿಸಿದ ದೇವಿ ಶಂಕ್ರನನ್ನು ಕರೆಸಿ ಎರಡೇಟು ಕೊಟ್ಟು ಬುದ್ಧಿ ಹೇಳಿದ್ದು. ಅಷ್ಟಕ್ಕೂ ದೇವಿ ಶಂಕ್ರನಿಗೆ ಸ್ವಂತ ಮಾವ. ಶಂಕ್ರ ಸೀನನಿಗೂ ಸಂಬಂಧಿಯೇ. ಬೆತ್ತನಗೆರೆಯ ಡೈರಿ ಎಲೆಕ್ಷನ್ನು, ಅದಕ್ಕೆ ಪೂರಕವೆಂಬಂತೆ ನಡೆದ ಊರ ಜಾತ್ರೆಗೆ ಆಲೂರಿನ ಕುರುಬರು ಅರ್ಥಾತ್ ಕಾಂಗ್ರೆಸ್ ಕಾರ್ಯಕರ್ತರು ಬಹಿಷ್ಕಾರ ಹಾಕಿದ್ದು, ತಾನೇ ನಿಂತು ಸಂಘಟಿಸಿದ ಊರ ಜಾತ್ರೆಗೆ ಸಹಕರಿಸದ ಕುರುಬರ ವಿರುದ್ಧ ಜಿದ್ದಿಗೆ ಬಿದ್ದ ಸೀನ ಶಂಕ್ರನನ್ನು ಛೂಬಿಟ್ಟು ಬಾಳೆಮಂಡಿ ಬಸವಯ್ಯನನ್ನು ಕೊಲ್ಲಿಸಿದ್ದು, ಬಸವಯ್ಯನ ಕೊಲೆಗೆ ಸಾಕ್ಷಿದಾರರೆಂಬ ಒಂದೇ ಕಾರಣಕ್ಕೆ ವಕೀಲ ದೇವರಾಜು ಮತ್ತು ಕೃಷ್ಣಮೂರ್ತಿಯನ್ನು ಸೀನ ಮುಗಿಸಿದ್ದು, ಕೊನೆಗೆ ಈ ಎಲ್ಲಾ ಕೊಲೆಗಳ ತೆರೆಮರೆಯ ರೂವಾರಿ ಶಂಕ್ರನೇ ತಿರುಗಿಬಿದ್ದು ಸೀನನ ಅಕ್ಕನ ಗಂಡ ದೇವಿಯನ್ನು ಕೊಲ್ಲಿಸಿದ್ದು ನೆಲಮಂಗಲದ ರಕ್ತಸಿಕ್ತ ಪರಂಪರೆಯೊಂದರ ಮೈಲಿಗಲ್ಲುಗಳಷ್ಟೇ.


ಬೆಟ್ಟನಗೆರೆ ಶೀನ

ಹಿಂದೆ ಹೊಸಕೋಟೆಯ ವಾಗಟ ಎಂಬ ಊರಿನ ಸರಣಿ ಹತ್ಯಾ ಪ್ರವೃತ್ತಿ ಈಗ ನೆಲಮಂಗಲಕ್ಕೆ ಸ್ಥಳಾಂತರಗೊಂಡಿದೆ. ಹೀಗೆ ಕೊಲ್ಲಲು ನಿಂತ ಜೆಡಿಎಸ್ ಹಂತಕ ಪಡೆಗೆ ದೊರೆಯಂತಿದ್ದ ಬೆತ್ತನಗೆರೆ ಸೀನನ ಸೇನಾನಿಯಂತಿದ್ದ ಶಂಕ್ರ ಏಕಾಏಕಿ ಬಂಡೆದ್ದು ಮಾವ ಹ್ಯಾಡಾಳು ದೇವಿಯನ್ನೇ ಕೊಲ್ಲುತ್ತಾನೆಂದು ಯಾರಿಗೆ ತಾನೇ ಗೊತ್ತಿತ್ತು. ಕ್ರಿಮಿ ಎಷ್ಟೆಂದರೂ ಕ್ರಿಮಿಯೆ.



ಹ್ಯಾಡಾಳು ದೇವಿ ಕೊಲೆಯಾಗುವ ತನಕ ಸೀನನ ಗ್ಯಾಂಗಿಗಾಗಲಿ, ಸ್ವತಃ ದೇವಿಯ ಬಂಟರಿಗಾಗಲಿ ಬಿನ್ನಮಂಗಲ ಕೃಷ್ಣಪ್ಪನೆಂಬ ಲೋಕಲ್ ಕಾಂಗ್ರೆಸ್ ನಾಯಕನ ಮೇಲೆ ಕಣ್ಣು ಬಿದ್ದಿರಲಿಲ್ಲ. ಕೃಷ್ಣಪ್ಪ ಅರಿಶಿನಕುಂಟೆಯಿಂದ ಗೆದ್ದ ಜಿ.ಪಂ. ಸದಸ್ಯ ಮಾತ್ರವಲ್ಲ, ಕಳೆದ ಮೂರು ದಶಕಗಳಿಂದ ನೆಲಮಂಗಲದ ಹಣೆಬರಹ ಬರೆದ ರಾಜಕೀಯ ಪಿತಾಮಹ. ಕಾಂಗ್ರೆಸ್ಸಿನ ಆಂಜನಮೂರ್ತಿಯನ್ನು ಆವತ್ತಿನಿಂದಲೂ ಗೆಲ್ಲಿಸಿಕೊಂಡೇ ಬಂದವನು. ಸದ್ಯ ನೆಲಮಂಗಲಕ್ಕೆ ಶಾಸಕನಾಗಿರುವ ನಾಗರಾಜ್ ಕೂ[ಡ] ಕೃಷ್ಣಪ್ಪನ ಆಜ್ಞಾನುವರ್ತಿಯೆ. ಇಂಥ ಕೃಷ್ಣಪ್ಪನ ಸಾಮ್ರಾಜ್ಯಕ್ಕೆ ಲಗ್ಗೆ ಇಟ್ಟದ್ದು ಮತ್ತೊಬ್ಬ ಲೋಕಲ್ ಜೆಡಿಎಸ್ ನಾಯಕ ಮತ್ತು ಮುಂಗಾರು ಮಳೆ ಚಿತ್ರದ ನಿರ್ಮಾಪಕ ಅಡಕಮಾರನಹಳ್ಳಿ ಕೃಷ್ಣಪ್ಪ. ಹೇಳಿಕೇಳಿ ನೆಲಮಂಗಲ ಮೀಸಲು ಕ್ಷೇತ್ರವಾದ್ದರಿಂದ ಒಕ್ಕಲಿಗರ ಬಿನ್ನಮಂಗಲ ಕೃಷ್ಣಪ್ಪ ಯಾವತ್ತಿಗೂ ಎಮ್ಮೆಲ್ಲೇಯಾಗುವುದು ಸಾಧ್ಯವಿರಲಿಲ್ಲ.

ಅರಿಶಿನಕುಂಟೆ ಕ್ಷೇತ್ರಕ್ಕೆ ಕಳೆದ ಜಿ.ಪಂ. ಚುನಾವಣೆಯಲ್ಲಿ ಕೃಷ್ಣಪ್ಪ ವಿರುದ್ಧ ನಿಲ್ಲುವವರೇ ಗತಿಯಿಲ್ಲದಾದಾಗ ಜೆಡಿಎಸ್ ಕಣಕ್ಕಿಳಿಸಿದ್ದು ಹ್ಯಾಡಾಳು ದೇವಿಯನ್ನು. ಈ ಹ್ಯಾಡಾಳು ದೇವಿ ಮತ್ತು ಮುಂಗಾರು ಮಳೆ ಕೃಷ್ಣಪ್ಪ ಸೇರಿಕೊಂಡು ಇನ್ನೇನು ಬಿಎಮ್ಮೆಲ್‌ನ ಕಾಂಗ್ರೆಸ್ ಕೋಟೆಯನ್ನು ಧ್ವಂಸಗೊಳಿಸಬೇಕೆನ್ನುವಷ್ಟರಲ್ಲೇ ಬೆತ್ತನಗೆರೆಯ ಸರಣಿ ಹತ್ಯೆ ಶುರುವಾಗಿತ್ತು. ದೇವಿಯ ಭಾಮೈದ ಸೀನ ಕೊಲ್ಲುತ್ತ ಬಂದ ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ಪರೋಕ್ಷವಾಗಿ ಬಿಎಮ್ಮೆಲ್‌ನ ಅನುಯಾಯಿಗಳೆ.

ಹೀಗೆ ಒಬ್ಬೊಬ್ಬರೇ ಕಾಂಗ್ರೆಸ್ ಕಾರ್ಯಕರ್ತರನ್ನು ಮುಗಿಸುತ್ತಾ ಬಂದ ಸೀನನ ಪಡೆಯಲ್ಲಿದ್ದ ಶಂಕ್ರ ದುಡುಕಿಗೆ ಬಿದ್ದು ಮುಂದಿನ ಗುರಿ ಬಿಎಮ್ಮೆಲ್ ಕೃಷ್ಣಪ್ಪ ಎಂದು ಕಂಡಕಂಡಲ್ಲಿ ಡೈಲಾಗ್ ಹೊಡೆದ. ಹೀಗೆ ಭೀತಿ ಹುಟ್ಟಿಸಿ ಕೃಷ್ಣಪ್ಪನಿಂದ ರೊಕ್ಕ ಕೀಳುವುದು ಶಂಕ್ರನ ಗಿಮ್ಮಿಕ್ಕಾಗಿತ್ತು. ಇದು ಗೊತ್ತಾಗಿದ್ದೇ ಪ್ರಾಣ ಭೀತಿಗೆ ಬಿದ್ದ ಬಿಎಮ್ಮೆಲ್ ತನ್ನ ಛೇಲಾ ಕುಪ್ಪಮಾಳ ಸಿದ್ರಾಜು ಮತ್ತು ಬಸವನಹಳ್ಳಿಯ ವರದಿಯ ಮೂಲಕ ಶಂಕ್ರನನ್ನು ನೆಲಮಂಗಲದ ಹಾಲಿಡೇ ಫಾರ್ಮ್ಸ್ ರೆಸಾರ್ಟ್‌ಗೆ ಕರೆಸಿಕೊಂಡು ರಾಜಿ ಮಾಡಿಕೊಂಡ.

ಶಂಕ್ರನ ಲೆಕ್ಕದಲ್ಲಿ ರಾಜಿ ಎಂದರೇನೇ ಲಕ್ಷಗಟ್ಟಲೇ ಕಮಾಯಿ!


ಹೀಗೆ ಬಿಎಮ್ಮೆಲ್ ಕೃಷ್ಣಪ್ಪನನ್ನು ಬೆದರಿ[ಸಿ] ದುಡ್ಡು ಕಿತ್ತ ಶಂಕ್ರ ಇದಾಗಿ ತಿಂಗಳಿಗೇ ಕೃಷ್ಣಪ್ಪನ ಎದುರಾಳಿ ಮತ್ತು ತನ್ನ ಸ್ವಂತ ಮಾವ ಹ್ಯಾಡಾಳ[ು] ದೇವಿಯನ್ನು ಕೊಂದುಬಿಟ್ಟ. ವಿಕಟವೆಂದರೆ ಪ್ರಾಣಭೀತಿಗೆ ಬಿದ್ದು ಕೃಷ್ಣಪ್ಪ ಶಂಕ್ರನಿಗೆ ಕೊಟ್ಟ ಕಪ್ಪವನ್ನೇ ದೇವಿಯ ಹತ್ಯೆಗೆಂದು ಕೊಟ್ಟ ಸುಪಾರಿ ಹಣವೆಂದು ದೇವಿಯ ಕಡೆಯವರು ಭಾವಿಸಿಬಿಟ್ಟರು. ಬಹುಶಃ ಕೃಷ್ಣಪ್ಪನ ಮೇಲಿದ್ದ ದೇವಿಯ ರಾಜಕೀಯ ವೈಷಮ್ಯವನ್ನು ಮುಂದುವರೆಸಲು ಸತ್ಯ ಗೊತ್ತಿದ್ದರೂ ಅದನ್ನು ಒಪ್ಪದೇ ಕೃಷ್ಣಪ್ಪನಿಂದಲೇ ದೇವಿಯ ಹತ್ಯೆಯಾಯಿತೆಂದು ಸಾಧಿಸತೊಡಗಿದರು.

ಈ ಮಧ್ಯೆ ದೇವಿಯ ಹತ್ಯೆಗೆ ಪ್ರತೀಕಾರ ಹೇಳಲು ಫೀಲ್ಡಿಗಿಳಿದವನು ದೇವಿಯ ಚಿಕ್ಕಪ್ಪನ ಮಗ ಹ್ಯಾಡಾಳು ಮಂಜ ಉರ್ಫ್ ಬಂಡೆ ಮಂ[ಜ]. ಹೇಗೂ ಸೀನ ಜೈಲು ಸೇರಿದ್ದನಾದ್ದರಿಂದ ಮಂಜನಲ್ಲದೇ ಫೀಲ್ಡಿನಲ್ಲಿ ಪಳಗಿದ ಮತ್ತೊಬ್ಬ ಹ್ಯಾಡಾಳು ಗ್ಯಾಂಗಿನಲ್ಲಿರಲಿಲ್ಲ.

ಜೊತೆಗೆ ದೇವಿಯ ದೊಡ್ಡ ಮಗ ಹರ್ಷ, ದೇವಿ[ಯ] ತಮ್ಮ ಪ್ರಕಾಶನೂ ಮಂಜನ ಜೊತೆ ನಿಂತರು. ಶತಗ[ತಾಯ] ಶಂಕ್ರನನ್ನು ತೆಗೆದೇ ಬಿಡಲು ತಿಂಗಳಾನುಗಟ್ಟಲೇ ಮಂ[ಜನ] ಗ್ಯಾಂಗ್ ರೌಂಡಿಂಗ್ ನಡೆಸಿತು. ಶಂಕ್ರ ಮ[...] ದಿನಕ್ಕೊಂದು ಜಾಗ ಬದಲಿಸುತ್ತಲೇ ಇದ್ದ[...]

ಹಾಕಿಕೊಟ್ಟವನು ಚೆನ್ನಿಗಪ್ಪನ ಮಗ ಗೌರಿಶಂಕ್ರ?






ಭೈರನಾಯಕನಹಳ್ಳಿಯ ಚೆನ್ನಿಗಪ್ಪನ ಮನೆಯಿಂದ ಕೃಷ್ಣಪ್ಪ ಹೊರಬಿದ್ದ ಸುದ್ದಿಯನ್ನು ಹ್ಯಾಡಾಳು ಮಂಜನ ಕಿವಿಗೆ ಹಾಕಿದ್ದು ಸ್ವತಃ ಚೆನ್ನಿಗಪ್ಪನ ಮಗ ಗೌರಿಶಂಕ್ರನೆ?

ಹೌದು ಅನ್ನುತ್ತದೆ ನೆಲಮಂಗಲ. ಆ ಕಾಲದಿಂದಲೂ ಬೆತ್ತನಗೆರೆ ಸೀನನನ್ನು ಛೂಬಿಟ್ಟು ಧಮಕಿ, ಲ್ಯಾಂಡ್ ಡೀಲು ಮಾಡಿಕೊಂಡೇ ಬಂದಿದ್ದು ಮಾಜಿ ಮಂತ್ರಿ ಚೆನ್ನಿಗಪ್ಪ ಮತ್ತಾತನ ಮಗ ಗೌರಿಶಂಕ್ರ. ಸದ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ (KSSIDC) ಅಧ್ಯಕ್ಷನಾಗಿರುವ ಗೌರಿಶಂಕ್ರ ಇನ್ನೊಂದರ್ಥದಲ್ಲಿ ಬೆತ್ತನೆಗರೆ ಹಂತಕರ ಪಾಲಿನ ಗಾಡ್‌ಫಾದರ್ ಕೂಡ. ಇದು ಗೊತ್ತಿದ್ದೂ ಚೆನ್ನಿಗಪ್ಪನ ಮನೆಗೆ ಬಂದ ಕೃಷ್ಣಪ್ಪನಿಗೆ ಮಗ ಗೌರಿಶಂಕ್ರನೇ ಇಂಥ ಕೆಲಸ ಮಾಡುತ್ತಾನೆಂಬ ಲೆಕ್ಕಾಚಾರವಾದರೂ ಎಲ್ಲಿತ್ತು?

ಕೃಷ್ಣಪ್ಪ ಮನೆಗೆ ಬಂದಿದ್ದು, ವಾಪಸ್ಸಾಗುತ್ತಿರುವುದು ಎಲ್ಲವನ್ನೂ ಗೌರಿಶಂಕ್ರನೇ ಬಂಡೆ ಮಂಜನಿಗೆ ಫೋನ್ ಮಾಡಿ ತಿಳಿಸಿದ್ದಾನೆಂಬ ಮಾಹಿತಿ ನೆಲಮಂಗಲದ ಕಾಂಗ್ರೆಸ್ ನಾಯಕರಿಗೆ ಸಿಕ್ಕಿದೆ. ಬಿಜೆಪಿ ಸರ್ಕಾರದಲ್ಲಿ ನಿಗಮವೊಂದರ ಅಧ್ಯಕ್ಷನಾಗಿದ್ದೂ ತನ್ನ ಪುಂಡು ಬುದ್ಧಿಯನ್ನು ಬಿಡದ ಗೌರಿಶಂಕ್ರನಂಥ ಕ್ರಿಮಿಗಳಿಗೆ ಶಿಕ್ಷೆ ವಿಧಿಸುವವರ್ಯಾರು?

ಮ ಶಿಕಾರಿಗೆ ಅಣಿಯಾಗುತ್ತಿದ್ದ, ಯಾವ ಬಂಡೆ ದೇವಿಯ ಹತ್ಯೆಗೆ ಪ್ರತೀಕಾರಕ್ಕೆ ನಿಂತಿದ್ದಾನೋ ತೆಗೆದುಬಿಡಲು ಇಲ್ಲಿಗೆ ತಿಂಗಳ ಹಿಂದೆ ದಾಳಿಯೊಂದನ್ನು ರೂಪಿಸಿದ್ದ.

ತ್ತು ನೆಲಮಂಗಲದ ಮಂಜನ ಮನೆ ಸುತ್ತ ಸುಮೋ ಗಾಡಿಗಳಲ್ಲಿ ಹೊಂಚು ಹಾಕುತ್ತಿದ್ದ ಮಂಜ ಮತ್ತು ಪೂರಿಶಿವ ಇಬ್ಬರೂ ಗಾಯತ್ರಿ ಬ್ರೇಕ್ ಜಗ್ಗಿಯ ಶಿಷ್ಯರು. ಶಂಕ್ರನ ಪರವಾಗಿ ನ್ನು ಮುಗಿಸಲು ಬಂದಿದ್ದ ಪಡೆ ಅಚಾನಕ್ಕಾಗಿ ಗಲದ ಡಿವೈಎಸ್‌ಪಿ ಧರಣೇಂದ್ರರ ಕೈಗೆ . ಇತ್ತ ಡಿವೈಎಸ್‌ಪಿ ಧರಣೇಂದ್ರ ಮತ್ತು ಕ್ಟರ್ ಯತಿರಾಜು ಇನ್ನೇನು ಶಂಕ್ರನ ಂಟರ್ ಮಾಡುತ್ತಾರೆಂದು ಸುದ್ದಿ ಸ್ವಂತೆಯೇ ಹುಷಾರಾದ ಶಂಕ್ರ ಯಲಹಂಕದ ರಿಗೌರಿಯವರ ಮೂಲಕ ರಾಮನಗರದ ಶರಣಾಗಿ ಜೈಲು ಸೇರಿ ಸೇಫಾಗಿ ಬಿಟ್ಟ. ನನ್ನು ಕೊಲ್ಲಲು ತಿಂಗಳಾನುಗಟ್ಟಲೇ ತಲೆ ಡಿದ್ದ ಹ್ಯಾಡಾಳು ಮಂಜ ಆತ ಸೇಫಾಗಿ ರಿಕೊಂಡಿದ್ದನ್ನು ಕೇಳಿ ಕೈಕೈ ಹಿಸುಕಿಕೊಂಡ. ದೇವಿಯ ಹತ್ಯೆಗೆ ಏನಾದರೂ ಪ್ರತೀಕಾರ


...ಮಾಡಲು ಬಳಸಿದ ಲಾರಿಗಳು ಮತ್ತು ...ತದಲ್ಲಿ ಜಖಂಗೊಂಡ ಕಾರು

ಲೇ ಬೇಕಿತ್ತಲ್ಲ. ಅದಕ್ಕೆ ಬಲಿಯಾಗಿದ್ದು ಕೃಷ್ಣಪ್ಪ. ಶಂಕ್ರನನ್ನು ಸರೆಂಡರ್ ಮಾಡಿಸಿದ್ದೇ ಂದು ಹ್ಯಾಡಾಳು ಗ್ಯಾಂಗ್ ಭಾವಿಸಿತ್ತು. ಮುಗಿಸಿಬಿಟ್ಟರೆ ಶಂಕ್ರನ ಅರ್ಧ ತಾಕತ್ತು ಾಗುತ್ತದೆ. ದೇವಿಯ ಹತ್ಯೆಗೆ ಪ್ರತೀಕಾರ ಾಗುತ್ತದೆ ಜೊತೆಗೆ ನೆಲಮಂಗಲದ ಕಾಂಗ್ರೆಸ್ ಕೊನೆಗೊಳ್ಳುತ್ತದೆ.

ದು ಲೆಕ್ಕ ಹಾಕಿದ ಹ್ಯಾಡಾಳು ಗ್ಯಾಂಗ್‌ನ ಯಲ್ಲಿದ್ದವನು ಬಂಡೆ ಮಂಜ. ಜೊತೆಗೆ ದೊಡ್ಡ ಮಗ ಹರ್ಷನೂ ಅಣಿಯಾಗಿ ನಿಂತ. ಗಟ್ಟಲೇ ಕೃಷ್ಣಪ್ಪನ ಚಲನವಲನದ ಮೇಲೆ ಂತಕರಿಗೆ ಅಚಾನಕ್ಕಾಗಿ ಸಿಕ್ಕಿದ್ದು ಕೃಷ್ಣಪ್ಪ ಕನಹಳ್ಳಿಗೆ ಬಂದ ಸುದ್ದಿ. ಆಗಸ್ಟ್ 24 ರ ಬೆಳಿಗ್ಗೆ ದೊಡ್ಡಬಳ್ಳಾಪುರ ರಸ್ತೆಯಲ್ಲಿ ಹ್ಯಾಡಾಳು ಮೂಲಕವೇ ಹಾದುಹೋದ ಕೃಷ್ಣಪ್ಪನ ಕಾರನ್ನು ದೇವಿಯ ಮಗ ಹರ್ಷ ಮತ್ತು ದೇವಿ ತಮ್ಮ ಲಿಂಗೇಗೌಡ ಗಮನಿಸಿದ್ದಾರೆ. ಫಾಲೋ ಮಾಡಲು ಹುಡುಗರನ್ನು ಬಿಟ್ಟು ಚಿನ್ನಿಗಪ್ಪನ ಮನೆಯಿಂದ ವಾಪಸ್ಸಾದ ಸುದ್ದಿಯನ್ನೂ ಪಡೆದಿದ್ದಾರೆ.

ಆ ಹೊತ್ತಿಗಾಗಲೇ ಬಂಡೆ ಮಂಜನ ಸ್ಕೆಚ್ಚು ರೆಡಿಯಾಗಿತ್ತು. ಮೈಲನಾಯಕನ ಹಳ್ಳಿಗೆ ಎರಡು ಕಿ.ಮೀ. ಇರುವಂತೆಯೇ ಹರ್ಷ ಕ್ಯಾಂಟರ್ ಗಾಡಿಯೊಂದರಲ್ಲಿ ಹೊಂಚಿ ಕೂತರೆ ಅಡ್ಡಗಟ್ಟಲೆಂದು ಮಂಜ ತನ್ನ ಭೈರವೇಶ್ವರ ಸ್ವಾಮಿ ಎಂಬ ಹಳೇ ಲಾರಿಯೊಂದನ್ನು ಅಣಿಗೊಳಿಸಿದ್ದ. ಲೆಕ್ಕಾಚಾರದಂತೆಯೇ ಆಗಿದ್ದರೆ ಕೃಷ್ಣಪ್ಪ ತನ್ನ ಕಾರಿನ ಸಮೇತ ಅಪ್ಪಚ್ಚಿಯಾಗುತ್ತಿದ್ದ. ಆದರೆ ವಿಧಿ ಬೇರೆಯದನ್ನೇ ಬಗೆದಿತ್ತು. ಮೈಲನಾಯಕನಹಳ್ಳಿಯಲ್ಲಿ ಕೃಷ್ಣಪ್ಪನ ಕಾರನ್ನು ಬಂಡೆ ಮಂಜನ ಲಾರಿ ಅಡ್ಡಹಾಕಿದ್ದೇ ತಡ ಹುಷಾರಾದ ಕೃಷ್ಣಪ್ಪ ಕಾರನ್ನು ಯಮ ವೇಗದಲ್ಲಿ ಎಡಭಾಗದ ಹೊಲಕ್ಕೆ ನುಗ್ಗಿಸಿಬಿಟ್ಟ. ನುಗ್ಗಿದ ರಭಸಕ್ಕೆ ಕಾರು ಪಕ್ಕದ ಹಳ್ಳಕ್ಕೆ ಬಿದ್ದು ಮೂರು ಪಲ್ಟಿಯಾಗಿ ನಿಲ್ಲುತ್ತಿದ್ದಂತೆ ಹಿಂಭಾಗದಿಂದ ಗುದ್ದಲು ದಾವಿಸಿದ ಹರ್ಷನ ಲಾರಿ ನೇರವಾಗಿ ಮಂಜನ ಲಾರಿಗೆ ಬಡಿಯಿತು. ಅಷ್ಟೇ; ಬಡಿದ ರಭಸಕ್ಕೆ ಹರ್ಷನ ಲಾರಿಯ ಮುಂಭಾಗ ಅದರ ಡ್ರೈವಿಂಗ್ ಸಿಟಿಗೆ ಕಚ್ಚಿಕೊಂಡು ಹರ್ಷನ ಎರಡೂ ಕಾಲುಗಳು ತುಂಡಾಗಿ ಹೋದವು!


ಇತ್ತ ಬಂಡೆ ಮಂಜ ಲಾರಿಯಿಂದ ನೆಗೆದು ಬಚಾವಾದನಾದರೂ ಕಾಲುಜಜ್ಜಿ ಚೀರಾಡುತ್ತಿದ್ದ ಹರ್ಷನನ್ನು ಹೊರಗೆಳೆಯುವಲ್ಲಿ ಹೆಣಗಾಡುತ್ತಿದ್ದ. ಮತ್ತೊಂದೆಡೆ ಮಂಜನ ಶಿಷ್ಯರಾದ ವಾಸು ಮತ್ತು ಯತೀಶ ಪಲ್ಟಿಬಿದ್ದಿದ್ದ ಕೃಷ್ಣಪ್ಪನ ಕಾರಿನತ್ತ ನುಗ್ಗಿದ್ದಾರೆ. ವಾಸು ಬಳಿ ನಾಡ ಪಿಸ್ತೂಲಿದ್ದರೆ ಯತೀಶನ ಕೈಯಲ್ಲಿ ಲಾಂಗ್ ಇತ್ತು. ಕಾರಲ್ಲಿ ಕಂಗಾಲಾಗಿ ಕೂತಿದ್ದ ಕೃಷ್ಣಪ್ಪನತ್ತ ವಾಸು ಹಾರಿಸಿದ ಗುಂಡು ಕೃಷ್ಣಪ್ಪನ ಕೈ ಹೊಕ್ಕಿದೆ. ಇನ್ನೇನು ಯತೀಶ ನುಗ್ಗಿ ಕತ್ತರಿಸಬೇಕೆನ್ನುವಷ್ಟರಲ್ಲಿ ಕೃಷ್ಣಪ್ಪನ ಕಾರಿನಲ್ಲಿದ್ದ ಪೇದೆ ನಾಗೇಂದ್ರ ರಾವ್ ತನ್ನ ಡಬ್ಬಲ್ ಬ್ಯಾರೆಲ್ ಬಂದೂಕಿನಿಂದ ಗುಂಡು ಹಾರಿಸಿದ್ದಾನೆ. ಗುಂಡು ಯತೀಶನ ತಲೆಯನ್ನೇ ಹೊಕ್ಕಿ ಆತ ನೆಲಕ್ಕೆ ಬಿದ್ದಿದ್ದೇ ತಡ ವಾಸು ಪರಾರಿಯಾದ. ಮತ್ತೊಂದೆಡೆ ಲಿಂಗೇಗೌಡ ಮತ್ತು ಮಂಜನ ಕಾಲೆರಡೂ ತುಂಡಾಗಿ ಲಾರಿಗೆ ಸಿಕ್ಕಿಬಿದ್ದಿದ್ದ ದೇವಿಯ ಮಗ ಹರ್ಷನನ್ನು ಹೊರಗೆಳೆದು ಆಸ್ಪತ್ರೆಗೆ ಸಾಗಿಸಿದ್ದಾರೆ.

ಕೃಷ್ಣಪ್ಪನ ಆಯುಸ್ಸಿನ್ನೂ ಗಟ್ಟಿಯಿತ್ತೇನೊ. ಕೊಲ್ಲಲು ಬಂದ ಹರ್ಷನೇ ಲಾರಿಗೆ ಸಿಲುಕಿ ಕಾಲು ಕಳಕೊಂಡದ್ದು ಮತ್ತು ಯತೀಶನ ತಲೆಗೆ ಗುಂಡು ಹೊಕ್ಕಿ ಆತ ಕೋಮಾ ಸ್ಥಿತಿಯಲ್ಲಿ ನಿಮಾನ್ಸ್‌ನಲ್ಲಿ ಬಿದ್ದಿರುವುದು ಇಡೀ ಘರ್ಷಣೆಯ ಭೀಕರತೆಗೆ ಸಾಕ್ಷಿಗಳಷ್ಟೇ.

ತನ್ನ ಪಾಡಿಗೆ ತಾನಿದ್ದರೂ ವೈಷಮ್ಯಕ್ಕೆ ಸಿಲುಕಿದ ಬಿಎಮ್ಮೆಲ್ ಕೃಷ್ಣಪ್ಪ, ಇತ್ತ ಜೈಲಲ್ಲಿ ಕೂತು ಪರಸ್ಪರರನ್ನು ಮುಗಿಸಲು ತಿಣುಕುತ್ತಿರುವ ಬೆತ್ತನಗೆರೆ ಸೀನ ಮತ್ತು ಕಿಲ್ಲರ್ ಶಂಕ್ರ, ವಿನಾಕಾರಣ ಕೊಲೆಯಾದ ಹ್ಯಾಡಾಳು ದೇವಿ. ಅದಕ್ಕೂ ಮುನ್ನ ಬಲಿಯಾದ ಬೆತ್ತನಗೆರೆಯ ಕುರುಬ ನಾಯಕರು. ಈಗ ಕೃಷ್ಣಪ್ಪನನ್ನು ಮುಗಿಸಲು ಹೋಗಿ ಕಾಲನ್ನೇ ಕಳಕೊಂಡ ದೇವಿಯ ಮಗ ಹರ್ಷ ಮತ್ತು ಗುಂಡಿಗೆ ತಲೆಕೊಟ್ಟ ಯತೀಶ.

ನೆಲಮಂಗಲವೆಂಬ ಊರಿನ ದೌರ್ಭಾಗ್ಯಕ್ಕೆ ಇದಕ್ಕಿಂತ ಬೇಕೆ?

●




ಬಾಗಲಕೋಟೆ

ಶಾಸಕ ಚರಂತಿಮಠ ಲ್ಯಾಂಡ್ ಕದೀತಾನೆ, ಚರಂಡಿ ನೀರ್ ಕುಡಸ್ತಾನೆ!

ಹಣೆ ಮೇಲೆ ಭರ್ತಿ ವಿಭೂತಿ ಬಳಿದುಕೊಂಡು ಮಹಾನ್ ಪ್ರಾಮಾಣಿಕ ಎಂಬಂತೆ ಪೋಸ್ ಕೊಡುವ ಬಾಗಲಕೋಟೆಯ ಬಿಜೆಪಿ ಶಾಸಕ ವೀರಣ್ಣ ಚರಂತಿಮಠ ಗುಮ್ಮನಗುಸುಗ. ಬಸವ ಬಸವ ಎನ್ನುತ್ತಲೇ ಕಾಸು ಹೊಸೆವ ಹುಸಿ ಜಂಗಮ. ಎಷ್ಟು ಹಾಕಿದರೂ ತುಂಬದು ಈತನ ಆಶೆಬುರುಕ ಜೋಳಿಗೆ. ಇದನ್ನೆಲ್ಲ ಬಲ್ಲವರು ಈತನನ್ನು 'ಚರಂಡಿ'ಮಠ ಎಂದೇ ಗುರುತಿಸುತ್ತಾರೆ. ಇದು ಗೊತ್ತಾಗಿಯೋ ಏನೋ, ಈ ಚರಂತಿಮಠನೀಗ ಬಾಗಲಕೋಟೆಯ ಜನರಿಗೆ ಚರಂಡಿ ನೀರು ಕುಡಿಸಲು ಯೋಜನೆ ರೂಪಿಸಿಬಿಟ್ಟಿದ್ದಾನೆ. ಇನ್ನೊಂದು ಕಡೆ ಆಲಮಟ್ಟಿ ಡ್ಯಾಮ್ ಸಂತ್ರಸ್ತರ ನಿವೇಶನಗಳಿಗೂ ನಾಲಿಗೆಯನ್ನು ಚಾಚಿದ್ದಾನೆ.

ವೀರಣ್ಣ ಚರಂತಿಮಠ ಲ್ಯಾಂಡ್ ಲೂಟಿಗೆ ಆಶ್ರಯಿಸಿರುವುದು ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ (ಬಿಟಿಡಿಎ)ವನ್ನು. ತನ್ನ ಉದ್ದೇಶ ಈಡೇರಿಸಿಕೊಳ್ಳಲೆಂದೇ ಬಿಟಿಡಿಎ ಕುರ್ಚಿಯಲ್ಲಿ ತನ್ನ ಚೇಲಾ ನಿಂಗಪ್ಪ ವಾಲಿಯನ್ನು ತಂದುಕೂಡ್ರಿಸಿದ್ದಾನೆ. ಹಾಗೆಯೇ ಭೂಗಳ್ಳತನವೆಲ್ಲ ನಡೆಯುವುದು ಬೇನಾಮಿ ಸಂಸ್ಥೆಗಳ ಹೆಸರಲ್ಲಿ. ಈ ಸಂಸ್ಥೆಗಳ ಒಡೆಯ ಶಾಸಕನ ಸಹೋದರ ಮಲ್ಲ... ಸಂತ್ರಸ್ತರ ಭೂಮಿ ಕಂಡರೆ ಸದಾ ಜೊಲ್ಲು ಸುರಿಸ್ತಾನೆ ಈ ಮಲ್ಲ.

ಶಾಸಕನ ಭೂದಾಹ ಎಷ್ಟಿದೆಯೆಂದರೆ ಆತ ಸಂತ್ರಸ್ತರನ್ನೂ ಬಿಡುತ್ತಿಲ್ಲ. ನವನಗರದ ಶೆಡ್‌ಗಳಲ್ಲಿದ್ದ 1500 ಸಂತ್ರಸ್ತ ಕುಟುಂಬಗಳನ್ನು ರಾತ್ರೋರಾತ್ರಿ ಬೀದಿಗೆ ತಳ್ಳಲಾಗಿದೆ. ಯಾರ್‍ಯಾರು ತಮಗೆ ದೊರೆತ ನಿವೇಶನಗಳಲ್ಲಿ ಮನೆ ಕಟ್ಟಿಲ್ಲವೋ ಅವರಿಗೆ ನಿವೇಶನ ಮಾರಾಟ ಮಾಡುವ ಸೌಲಭ್ಯ ಒದಗಿಸಿದ್ದಾನೆ. ಅಂದರೆ ಬೇನಾಮಿ ಹೆಸರಲ್ಲಿ ಅಂತಹ ನಿವೇಶನಗಳನ್ನು ಖರೀದಿಸಲು ನಡೆಸಿರುವ ಹುನ್ನಾರವಿದು. ಸಂತ್ರಸ್ತರ ಯಾವುದೇ ಜಾಗೆಗಳನ್ನು ಕನಿಷ್ಠ 20 ವರ್ಷಗಳವರೆಗೆ ಮಾರಬಾರದು, ಸ್ಥಳಾಂತರಗೊಳಿಸಬಾರದು ಎಂದು 1984 ರ ಭೂಸ್ವಾಧೀನ ಕಾಯ್ದೆ ಹೇಳುತ್ತದೆ. ಇಲ್ಲಿವರೆಗೆ ಅದನ್ನು ಪಾಲಿಸುತ್ತ ಬರಲಾಗಿದೆ. ಆದರೆ ಬಿಟಿಡಿಎ ಮೂಲಕ ಈ ಕಾಯ್ದೆಯನ್ನು ಮುರಿಯುವ ಯೋಜನೆ ಚರಂತಿಮಠನದು. ಮುಂದೆ ಆಲಮಟ್ಟಿಯಲ್ಲಿ 521 ಮೀಟರ್‌ವರೆಗೆ ನೀರು ಸಂಗ್ರಹಿಸಿದರೆ ಹಿನ್ನೀರಿನ ಪ್ರಮಾಣ ಇನ್ನೂ ಹೆಚ್ಚಿ ಮತ್ತೆ 3170 ಕುಟುಂಬಗಳು ಶಿಫ್ಟ್ ಆಗಬೇಕಾಗುತ್ತದೆ. ಆ ಕುಟುಂಬಗಳಿಗೆಂದು ಮೀಸಲಿಟ್ಟಿರುವ ಮೇಲೆ 1860 ಎಕರೆ ಕಾಕದೃಷ್ಟಿ ಬೀರಿರುವ ಚರಂತಿಮಠ ಬಿಟಿಡಿಎ ನೆರವಿನಿಂದ ಮೆಲ್ಲಮೆಲ್ಲನೆ ಭೂಸ್ವಾಹಾ ಕೆಲಸವನ್ನು ಶುರು ಮಾಡಿದ್ದಾನೆ.


ಚರಂತಿಮಠ

ಈತನ ಸಹೋದರ ಮಲ್ಲನ ಆಯಿಲ್ ಇಂಡಸ್ಟ್ರೀಸ್ ಮುಳುಗಡೆ ಭಾಗದಲ್ಲಿ ಬಂದಿದ್ದರಿಂದ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಜಾಗ ಸಿಗುವುದಿತ್ತು. ಆದರೆ ಈ ಜಾಗ ಕಮರ್ಷಿಯಲಿ ಸೂಟೇಬಲ್ ಅಲ್ಲ ಎಂಬುದನ್ನು ಕಂಡುಕೊಂಡ ಶಾಸಕ ತನ್ನ ಇಂಜನಿಯರಿಂಗ್ ಕಾಲೇಜ್ ಹಿಂದುಗಡೆ ಚದರ ಕಿ.ಮೀ.ಗೆ ಕೇವಲ 2 ರೂ.ನಂತೆ 8 ಎಕರೆ ಜಾಗ ಸಿಗುವಂತೆ ಮಾಡಿದ. ಹಾಗೆಯೇ ತನ್ನ ಬಸವೇಶ್ವರ ಸಂಸ್ಥೆಯ ಹಾಸ್ಟೆಲ್ ಒಂದಕ್ಕಾಗಿ 50 ಎಕರೆ, ಅದೇ ಸಂಸ್ಥೆಯ ಮೆಡಿಕಲ್ ಕಾಲೇಜಿಗೆಂದು 310 ಎಕರೆ ಭೂಮಿಯನ್ನು ಎಕರೆಗೆ ಕೇವಲ 5 ಸಾವಿರ ರೂಪಾಯಿ ದರದಲ್ಲಿ ಗಿಟ್ಟಿಸಿದ್ದಾನೆ. ತನ್ನ ಇಂಜನಿಯರಿಂಗ್ ಕಾಲೇಜ್‌ಗೆಂದು 280 ಎಕರೆಯನ್ನು ಸಸ್ತಾ ಮೊತ್ತಕ್ಕೆ ಲೀಸ್ ಪಡೆದಿದ್ದಾನೆ.

ಬಾಗಲಕೋಟೆಯ ಮಧ್ಯಭಾಗದಲ್ಲಿರುವ ಬಸವೇಶ್ವರ ಚೌಕದಲ್ಲಿ ಸಹೋದರ ಮಲ್ಲನ ಸಂಸ್ಥೆಯೊಂದಕ್ಕೆ ಹನ್ನೊಂದು ಎಕರೆ ಭೂಮಿಯನ್ನು ನಗರಸಭೆಯಿಂದ ಕಡಿಮೆ ರೇಟಿಗೆ ಒದಗಿಸಲಾಗಿದೆ. ಈಗ ಅಲ್ಲಿ ಫ್ಲಾಟ್‌ಗಳನ್ನು ಮಾಡಿ, ಫ್ಲಾಟ್ ಒಂದಕ್ಕೆ ಹತ್ತು ಲಕ್ಷದಂತೆ ಮಾರಾಟ ಮಾಡಲಾಗುತ್ತಿದೆ. ಈ ಜಾಗಕ್ಕೆ ಭಾರೀ ಬೆಲೆ ಬರಲೆಂದು ಅಲ್ಲಿಯೇ ಗುರುಸಿದ್ದೇಶ್ವರ ಚಿತ್ರಮಂದಿರದ ಎದುರಿನಲ್ಲಿರುವ ತರಕಾರಿ ಮಾರಾಟದ ಅಂಗಡಿಗಳನ್ನು ನೆಲಸಮ ಮಾಡಿಸಿದ್ದಾನೆ.

ಇದರಿಂದ ಮೂನ್ನೂರಕ್ಕೂ ಹೆಚ್ಚು ಕುಟುಂಬಗಳು ಬೀದಿಪಾಲಾಗಿವೆ.

ಸತ್ಯಸಾಯಿ ಶಿಕ್ಷಣ ಸಂಸ್ಥೆಗೆ ನವನಗರದಲ್ಲಿ ನೀಡಿದ್ದ ಭೂಮಿಯನ್ನು ವಾಪಸ್ ಪಡೆಯಲು ಬಿಟಿಡಿಎ ಮೂಲಕ ನೋಟೀಸ್ ಕೊಡಿಸಿದ್ದಾನೆ. ಸಂತ್ರಸ್ತರಿಗೆ ನೀಡಬೇಕಾದ ಭೂಮಿಯಲ್ಲೇ 700 ಎಕರೆಯನ್ನು ತೋಟಗಾರಿಕಾ ವಿಶ್ವವಿದ್ಯಾಲಯಕ್ಕೆ ನೀಡಿದ್ದಾನೆ. ಮುಂದೆ ಆಲಮಟ್ಟಿಯಲ್ಲಿ ಹೆಚ್ಚಿನ ಪ್ರಮಾಣದ ನೀರು ಸಂಗ್ರಹಿಸಿದಾಗ ಅತಂತ್ರವಾಗುವ 3170 ಕುಟುಂಬಗಳಿಗೆ ಜಾಗ ಸಿಗುವುದೇ ಕಷ್ಟವಾಗಲಿದೆ. ಹುಬ್ಬಳ್ಳಿ ರಸ್ತೆಯಲ್ಲಿರುವ 90 ಎಕರೆ ಜಮೀನನ್ನು ಪತ್ನಿಯ ಹೆಸರಲ್ಲಿ ಖರೀದಿಸಿರುವ ಚರಂತಿಮಠ, ಅಲ್ಲಿ ನಿಂಗಣ್ಣ ವಾಲಿಯೊಂದಿಗೆ ಸೇರಿ ಡಿಸ್ಟಿಲ್ಲರಿ ಸ್ಥಾಪಿಸುವ ಪ್ಲಾನು ಹಾಕಿದ್ದಾನೆ.

ಬಾಗಲಕೋಟೆಯ ಸುತ್ತಮುತ್ತಲಿನ ಊರುಗಳಿಗೆ ಹೊಸ ಶಾಲೆ, ಕಾಲೇಜುಗಳು ಮಂಜೂರಾಗದಂತೆ ಮಾಡುತ್ತಿರುವುದು ಇದೇ ಚರಂತಿಮಠ. ಇತ್ತೀಚೆಗಷ್ಟೇ ಹೊನ್ನಕಟ್ಟಿ ಗ್ರಾಮದ ಜನರು ತಮ್ಮೂರಿಗೆ ಪದವಿಪೂರ್ವ ಕಾಲೇಜನ್ನು ಮಂಜೂರು ಮಾಡಿಸಿಕೊಂಡರು. ಈ ಕಾಲೇಜ್ ಆರಂಭವಾದರೆ ತನ್ನ ಕಾಲೇಜಿಗೆ ಡೊನೇಷನ್ ಹರಿವು ಕಡಿಮೆಯಾಗುತ್ತದೆಂದು ಕುತರ್ಕ ಮಾಡಿದ ಚರಂತಿಮಠ ಆ ಕಾಲೇಜಿನ ಮಂಜೂರಾತಿಯನ್ನು ವಾಪಸ್ ಕಳಿಸಿಬಿಟ್ಟ. ಮಹಾರುದ್ರಪ್ಪನ ಹಳ್ಳದ ಸೇತುವೆ ಏರಿಸಲು 37 ಕೋಟಿ ರೂ. ಮಂಜೂರು ಮಾಡಿಸಿಕೊಂಡ. ಇದರಲ್ಲಿ 15 ಕೋಟಿ ಸ್ವಾಹಾ ನಿಶ್ಚಿತ. ಈ ಸೇತುವೆ ದುರಸ್ತಿಯಿಂದ ಚರಂತಿಮಠ ಬಾಡಿಗೆ ನೀಡಿರುವ ಅಂಗಡಿಗಳ ಮಾಲೀಕರನ್ನು ಬಿಟ್ಟರೆ ಇನ್ನಾರಿಗೂ ಅಂತಹ ಉಪಯೋಗವಿಲ್ಲ. 10 ಕೋಟಿಯಲ್ಲಿ ಮುಗಿಯಬಹುದಾದ ಗದ್ದನಕೇರಿ ಕ್ರಾಸ್-ಬೇವಿನಕಟ್ಟಿ ರಸ್ತೆ ರಿಪೇರಿಗೆ 46 ಕೋಟಿ ಬಿಡುಗಡೆ ಮಾಡಿಸಿದ್ದಾನೆ. ಅಲ್ಲಾಗಲೇ ಸಹೋದರ ಮಲ್ಲ ಮೆಲ್ಲಲು ಆರಂಭಿಸಿರುವ ಸುದ್ದಿಗಳು ಹರಡಿವೆ. ಗದ್ದನಕೇರಿ ಕ್ರಾಸ್‌ನಿಂದ ಹಳೆಯ ಬಾಗಲಕೋಟೆಯಲ್ಲಿರುವ ತನ್ನ ಸಂಸ್ಥೆಯವರೆಗೆ ರಸ್ತೆ ಕೆಲಸಕ್ಕೆಂದು 60 ಕೋಟಿ ಬಿಡುಗಡೆ ಮಾಡಿಸಿದ್ದಾನೆ. ಇಲ್ಲಿ ಈಗಾಗಲೇ ರಸ್ತೆ ಇದ್ದು ಒಂದ್ಹತ್ತು ಕೋಟಿಯಲ್ಲಿ ರಿಪೇರಿ ಮಾಡಿಸಿದ್ದರಾಗುತ್ತಿತ್ತು. ಆದರೆ ಕಮಿಷನ್ ಬರಬೇಕಲ್ಲ?

ಚರಂತಿಯ ಚರಂಡಿ ನೀರು

ಹಳೆ ಬಾಗಲಕೋಟೆಗೆ ನಿತ್ಯ 42 ಲಕ್ಷ ಗ್ಯಾಲನ್ ನೀರು ಸರಬರಾಜು ಮಾಡುವ 18 ಇಂಚಿನ ಪೈಪ್ ಚರಂತಿಮಠನ ಬಸವೇಶ್ವರ ಇಂಜನಿಯರಿಂಗ್ ಕಾಲೇಜಿನ ಪಕ್ಕವೇ ಹಾದುಹೋಗುತ್ತದೆ. ಆ ಪೈಪಿಗೆ ತೂತು ಕೊರೆದು ಪೈಪೊಂದನ್ನು ಜೋಡಿಸಿಕೊಂಡು ನಿತ್ಯ 20 ಲಕ್ಷ ಗ್ಯಾಲನ್ ನೀರನ್ನು ಕದಿಯಲಾಗುತ್ತಿದೆ. ಈ ನೀರು ಇಂಜನಿಯರಿಂಗ್ ಕಾಲೇಜು ಮತ್ತು ಪಕ್ಕದ ಹಾಸ್ಟೆಲ್‌ಗಳಿಗೆ ಬಳಕೆಯಾಗುತ್ತಿದೆ. ಹೀಗೆ ಸಾರ್ವಜನಿಕರ ನೀರನ್ನೂ ಕದಿಯುವ ಚರಂತಿಮಠ ಈಗ ಬಾಗಲಕೋಟೆಯ ಜನರಿಗೆ ಚರಂಡಿ ನೀರು ಕುಡಿಸುವ ವಿಷಕಾರಿ ಯೋಜನೆಯೊಂದನ್ನು ಜಾರಿ ಮಾಡುತ್ತಿದ್ದಾನೆ. ಇದು ಹತ್ತೂವರೆ ಕೋಟಿ ರೂಪಾಯಿ ಯೋಜನೆಯಾಗಿದ್ದು, ಸಿಮೆಂಟ್ ಕ್ವಾರಿಗಳಲ್ಲಿ ಸಂಗ್ರಹವಾಗುವ ಹಿನ್ನೀರನ್ನು ಶುದ್ಧೀಕರಿಸಿ ಬಾಗಲಕೋಟೆಗೆ ಚರಂಡಿ ನೀರು ಕುಡಿಸುವ ಕುಚೋದ್ಯವಾಗಿದೆ. ಏಕೆಂದರೆ ಬಾಗಲಕೋಟೆ ಗಟಾರಗಳ ಕೊಚ್ಚೆ ಬಂದು ಸೇರುವುದು ಈ ಸಿಮೆಂಟ್ ಕ್ವಾರಿಗಳಿಗೇ. ಚರಂತಿಯ ಈ ಚರಂಡಿ ನೀರಿನ ಯೋಜನೆಯ ವಿರುದ್ಧ ಮಾನವಹಕ್ಕು ಆಯೋಗಕ್ಕೆ ಜನ ದೂರು ಸಲ್ಲಿಸಿದ್ದಾರೆ.

ಹೀಗೆ ಬಿಳಿ ವಿಭೂತಿಯ ಹಿಂದೆ ನೂರಾರು ಕಪ್ಪು ಕೆಲಸಗಳಲ್ಲಿ ಚರಂತಿಮಠ ಮುಳುಗಿದ್ದಾನೆ. ಜಾತಿವಾದಿ, ಮಹಾನ್ ಕೋಮುವಾದಿಯಾಗಿರುವ ಈತನೀಗ ಭ್ರಷ್ಟಾತಿಭ್ರಷ್ಟ, ಭಯಂಕರ ಭೂಗಳ್ಳ ಎಂಬ ಕೀರ್ತಿಗೂ ಪಾತ್ರನಾಗುತ್ತಿದ್ದಾನೆ.

● ಮೇಘರಾಜ್


ಸೋತಿದ್ದು ಏಕೆ?

ಸೋಮಣ್ಣ ಬಿದ್ದೊಡೆ ಆಳಿಗೊಂದು ಕಲ್ಲ

ರಾಜಕೀಯವಾಗಿ ಸೋಮಣ್ಣನಿಗೆ ಹೋಲಿಸಿದರೆ ಪ್ರಿಯಕೃಷ್ಣ ಇನ್ನೂ ಮಗು. ಮುತ್ಸದ್ದಿಯಲ್ಲ, ಸಣ್ಣದೊಂದು ಪಾಲಿಕೆ ಚುನಾವಣೆಯನ್ನೂ ಎದುರಿಸಿದ ಅನುಭವವಿಲ್ಲ. ಹೆಚ್ಚೂಕಮ್ಮಿ ಮಗನ ವಯಸ್ಸಿನ, ಭಾಷಣ ಕೂಡ ಗೊತ್ತಿಲ್ಲದ ಪೋರನ ಮುಂದೆ ಮಂತ್ರಿಯಾಗಿದ್ದೂ ನೆಲಕಚ್ಚಿದ ಸೋಮಣ್ಣ ಬಿದ್ದದ್ದು ತಾನೇ ತೋಡಿಕೊಂಡ ಹಳ್ಳಕ್ಕೆ.




ವಿಜಯನಗರ ಸಾಮ್ರಾಜ್ಯ ಪತನವಾಗಿದೆ. ಹಳ್ಳಕ್ಕೆ ಬಿದ್ದ ವೀರಪುತ್ರ ಸೋಮಣ್ಣನ ಮೇಲೆ ಆಳಿಗೊಂದು ಕಲ್ಲು. ಯಾವುದೇ ವ್ಯವಸ್ಥೆಯೊಂದು ತನ್ನೆಲ್ಲಾ ಗುಣದೋಷಗಳನ್ನು ತೋರಿಸಿಯೇ ನಾಶವಾಗುತ್ತದೆಯೆಂಬ ಚಾರಿತ್ರಿಕ ಸತ್ಯವೊಂದಕ್ಕೆ ತಾನು ಮಂತ್ರಿಯಾಗಿದ್ದಾಗಲೇ ಉದಾಹರಣೆಯಾಗುತ್ತೇನೆಂಬ ಕಹಿಸತ್ಯವನ್ನು ಜೀರ್ಣಿಸಿಕೊಳ್ಳಲಾಗದೇ ಚಡಪಡಿಸುವ ಸೋಮಣ್ಣನ ದುರ್ಗತಿಗೆ ಮರುಗುವವರಾದರೂ ಯಾರು?



ಲೇಟಿಟ್ ಕೃಷ್ಣಪ್ಪ

ರಾಜಕೀಯವಾಗಿ ಸೋಮಣ್ಣನಿಗೆ ಹೋಲಿಸಿದರೆ ಪ್ರಿಯಕೃಷ್ಣ ಇನ್ನೂ ಮಗು. ಮುತ್ಸದ್ದಿಯಲ್ಲ, ಸಣ್ಣದೊಂದು ಪಾಲಿಕೆ ಚುನಾವಣೆಯನ್ನೂ ಎದುರಿಸಿದ ಅನುಭವವಿಲ್ಲ, ಹೆಚ್ಚೂಕಮ್ಮಿ ಮಗನ ವಯಸ್ಸಿನ, ಭಾಷಣ ಕೂಡ ಗೊತ್ತಿಲ್ಲದ ಪೋರನ ಮುಂದೆ ಮಂತ್ರಿಯಾಗಿದ್ದೂ ನೆಲಕಚ್ಚಿದ ಸೋಮಣ್ಣ ಬಿದ್ದದ್ದು ತಾನೇ ತೋಡಿಕೊಂಡ ಹಳ್ಳಕ್ಕೆ.



ದೇವೇಗೌಡ


ಕಾಂಗ್ರೆಸ್ಸಿನಲ್ಲೇ ಉಳಿದಿದ್ದರೆ ತಾನು ಜನ್ಮಾಪಿ ಮಂತ್ರಿಯಾಗುತ್ತಲೇ ಇರಲಿಲ್ಲ ಎಂಬ ಸೋಮಣ್ಣನ ವಾದ ನಿಜವೇ ಆದರೂ ಬಿಜೆಪಿಯಂಥ ಕೋಮುವಾದಿ ಪಕ್ಷಕ್ಕೆ ಸೇರಿ ರಾಜೀನಾಮೆ ಕೊಟ್ಟು ಮತ್ತೆ ಗೆಲ್ಲಬೇಕೆಂದರೆ ಯಾವ ಮಟ್ಟದ ತಯಾರಿಬೇಕು!

ಸೋಮಣ್ಣ ಎಡವಿದ್ದೇ ಇಲ್ಲಿ. ಮೂವರು ಮಾಜಿ ಉಪಮೇಯರ್‌ಗಳು, ಹದಿಮೂರು ಮಂದಿ ಮಾಜಿ ಕೌನ್ಸಿಲರ್‌ಗಳು ತನ್ನ ಜೊತೆಗಿದ್ದ ಮಾತ್ರಕ್ಕೇ ತಾನು ಗೆದ್ದು ಬಿಡುತ್ತೇನೆಂಬುದು ಸೋಮಣ್ಣನ ಲೆಕ್ಕಾಚಾರವಾಗಿತ್ತು. ಮೂಡಲಪಾಳ್ಯದ ಶಾಂತಕುಮಾರಿ, ಗಾಳಿ ಆಂಜನೇಯ ವಾರ್ಡಿನ ಲಕ್ಷ್ಮಿನಾರಾಯಣ ಮತ್ತು ಅಮರಜ್ಯೋತಿನಗರದ ಪುಟ್ಟರಾಜು; ಈ ಮೂವರು ಮಾಜಿ ಉಪಮೇಯರ್‌ಗಳ ಪೈಕಿ ಸೋಮಣ್ಣನಿಗೆ ಪ್ರಾಮಾಣಿಕವಾಗಿ ನಿಷ್ಠೆಯಿಂದಿದ್ದದ್ದು ಲಕ್ಷ್ಮಿನಾರಾಯಣ ಮಾತ್ರ.

ಚೋಳೂರುಪಾಳ್ಯದ ರವೀಂದ್ರ, ಮಾರೇನಹಳ್ಳಿಯ ಪಿಳ್ಳರಾಜು, ಅತ್ತಿಕುಪ್ಪೆಯ ಶಿವಪ್ಪ, ಬಾಪೂಜಿನಗರದ ವೆಂಕಟಸ್ವಾಮಿ, ಗೋವಿಂದರಾಜನಗರದ ಚನ್ನಪ್ಪ, ಚಿಕ್ಕತಿಮ್ಮಯ್ಯ; ಹೀಗೆ ಸೋಮಣ್ಣನ ಜೊತೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಮಾಜಿ ಕೌನ್ಸಿಲರ್‌ಗಳು ಬಿಟ್ಟರೆ ಬಹುತೇಕ ಕಾರ್ಯಕರ್ತರ್‍ಯಾರೂ ಬಿಜೆಪಿ ಸೇರಲೇ ಇಲ್ಲ. ಹೀಗೆ ಸೋಮಣ್ಣನ ಬೆನ್ನಿಗೆ ಬಂದ ಮಾಜಿ ಉಪಮೇಯರ್‌ಗಳು ಮತ್ತು ಮಾಜಿ ಕೌನ್ಸಿಲರ್‌ಗಳೆಲ್ಲ ತಮ್ಮ ಅಧಿಕಾರಾವಧಿಯಲ್ಲಿ ಹೆಸರು ಕೆಡಿಸಿಕೊಂಡವರೆ. ಇಂಥವರ ಬಗ್ಗೆ ಮೊದಲೇ ಜನಕ್ಕೆ ಅಸಹನೆಯಿರುವಾಗ ಇಂಥವರನ್ನು ಮುಂದಿಟ್ಟುಕೊಂಡು ಮತ ಕೊಡಿ ಎಂದರೆ ಜನಕ್ಕೆ ಉರಿಯದೇ ಇನ್ನೇನು?

ಸೋಮಣ್ಣ ಬೆಳೆಸಿದ್ದು ಕೂಡ ಇಂಥವರನ್ನೆ. ಶಾಂತಕುಮಾರಿ ಹೇಳಿಕೇಳಿ ರೌಡಿ ರಾಣಿ. ರವೀಂದ್ರ ಹಳೇ ರೌಡಿ. ಚನ್ನಪ್ಪ ಲೋಕಜ್ಞಾನವೇ ಇಲ್ಲದ ಪೆದ್ದಂಭಟ್ಟ. ಚಿಕ್ಕತಿಮ್ಮಯ್ಯ ಹುಟ್ಟಾ ಹುಂಬ. ಅತ್ತಿಕುಪ್ಪೆಯ ಶಿವಪ್ಪನ ನಿಷ್ಠೆ ಏನಿದ್ದರೂ ಅಧಿಕಾರವಿರುವಲ್ಲಿ ಮಾತ್ರ. ಈಗಾಗಲೇ ಕೌನ್ಸಿಲರ್‌ಗಳಾಗಿ ಕಾರ್ಯಕರ್ತರ ಸಿಟ್ಟಿಗೆ ಗುರಿಯಾಗಿದ್ದ ಇಂಥ ಪುಡಿ ಲೀಡರುಗಳ ಅಸಲೀ ತಾಕತ್ತೇನು? ಇವರಿಂದ ನಿಜಕ್ಕೂ ಲಾಭವಿದೆಯಾ? ಅಥವಾ ಇವರ ಕುಖ್ಯಾತಿ ತನಗೇ ಕೆಡುಕಾಗುತ್ತಾ? ಇತ್ಯಾದಿ ಯಾವುದನ್ನೂ ಸೋಮಣ್ಣ ಲೆಕ್ಕ ಹಾಕಲಿಲ್ಲ.


ಅಷ್ಟಿಷ್ಟು ಜನಪ್ರಿಯತೆ ಮತ್ತು ಬೆಂಬಲಿಗರನ್ನುಳ್ಳ ಗಾಳಿ ಆಂಜನೇಯ ವಾರ್ಡಿನ ಮಾಜಿ ಉಪಮೇಯರ್ ಲಕ್ಷ್ಮಿನಾರಾಯಣ ಮಾತ್ರವೇ ಸೋಮಣ್ಣನ ಬತ್ತಳಿಕೆಯಲ್ಲಿದ್ದ ಗಟ್ಟಿ ಆಯುಧವೇ ಹೊರತು ಮಿಕ್ಕವರೆಲ್ಲ ಎಂದೋ ಜನರ ತಾತ್ಸಾರಕ್ಕೆ ಈಡಾಗಿದ್ದಾಗಿತ್ತು. ಮಿಕ್ಕಂತೆ ಸೋಮಣ್ಣ ಪೋಷಿಸಿದ್ದು ಕಂಟ್ರಾಕ್ಟರ್‌ಗಳು, ರಿಯಲ್ ಎಸ್ಟೇಟ್ ಖದೀಮರನ್ನು ಅಷ್ಟೇ ಅಧಿಕಾರವಿದ್ದಷ್ಟೂ ದಿನ ಲ್ಯಾಂಡು, ಕಳ್ಳಬಿಲ್ಲು ದಂಧೆಗೆ ಸೋಮಣ್ಣನನ್ನು ಹಾಡಿ ಹೊಗಳುತ್ತಿದ್ದ ಇದೇ ಜನ ಈ ಬಾರಿಯ ಚುನಾವಣೆಯಲ್ಲಿ ಜೊತೆಗಿದ್ದೇ ಎದುರಾಳಿ ಲೇಟಿಟ್ ಕೃಷ್ಣಪ್ಪನವರನ್ನು ಓಲೈಸುತ್ತಿದ್ದರು.



ಪ್ರಿಯಕೃಷ್ಣ

ಸೋಮಣ್ಣ ಮಹಾನ್ ಕೆಲಸಗಾರ ಎಂಬುದರಲ್ಲಿ ಎರಡು ಮಾತಿಲ್ಲ. ಗೋವಿಂದರಾಜನಗರ ಕ್ಷೇತ್ರವೊಂದಕ್ಕೇ ನೂರು ಕೋಟಿಗೂ ಅಧಿಕ ಕಾಮಗಾರಿ ತಂದಿದ್ದೂ ಅಷ್ಟೇ ನಿಜ. ಪ್ರಿಯಕೃಷ್ಣ ಗೆದ್ದರೂ ಕಾಂಗ್ರೆಸ್ ಸರ್ಕಾರವಿಲ್ಲದ್ದರಿಂದ ಆತ ಮಂತ್ರಿಯಾಗಲಾರ ಮತ್ತು ಬಿಜೆಪಿ ಸರ್ಕಾರವಿದ್ದುದರಿಂದ ಆತನಿಂದ ಹೆಚ್ಚಿನ ಕೆಲಸ ಸಾಧ್ಯವಿಲ್ಲವೆಂದು ಗೊತ್ತಿದ್ದೂ ಜನ ಜಿದ್ದಿಗೆ ಬಿದ್ದವರಂತೆ ಸೋಮಣ್ಣನನ್ನು ಸೋಲಿಸಿದ್ದಕ್ಕೆ ಬೇರೆಯದೇ ಕಾರಣವಿತ್ತು.

ಅದು ಸೋಮಣ್ಣನ ವ್ಯಕ್ತಿತ್ವದಲ್ಲಾದ ಬದಲಾವಣೆ. ಪಾಲಿಕೆ ಕೌನ್ಸಿಲರ್ ಆಗಿ, ಕ್ರಮೇಣ ಎಮ್ಮೆಲ್ಲೆಯಾಗಿ, ಪಟೇಲ್ ಸಂಪುಟದಲ್ಲಿ ಮಂತ್ರಿಯಾಗಿ ನಂತರ ಪಕ್ಷೇತರನಾಗೇ 'ಬಸ್' ಗುರುತಿನಿಂದ ಗೆದ್ದ ಸೋಮಣ್ಣನ ಆಗಿನ ವ್ಯಕ್ತಿತ್ವವೇ ಬೇರೆ, ಈಗಿನ ಸೋಮಣ್ಣನ ಗತ್ತೇ ಬೇರೆ. ಮೊದಲಾದರೆ ಪ್ರತಿಯೊಬ್ಬರನ್ನೂ ಗುರುತು ಹಿಡಿ[...] ಮಾತಾಡಿಸುತ್ತಿದ್ದ. ತಾನೇ ಮುಂದೆ ನಿಂತು ಕೆಲಸ[...] ಮಾಡಿಕೊಡುತ್ತಿದ್ದ. ಸಣ್ಣಪುಟ್ಟ ಗಣೇಶೋತ್ಸವ, ರಾಜ್ಯೋತ್ಸವಗಳಿಗೂ ನೆರವಾಗುತ್ತಿದ[...] ಇಂಥ ಸ್ಥಿತಿಯಲ್ಲಿ ಸೋಮಣ್ಣನ ಪಕ್[...] ಚೇಲಾನಂತೆ ಉದ್ಭವಿಸಿದವನು ನರಿಬುದ್ಧಿಯ ವಿಶ್ವನಾಥ್ ಗೌಡ. ವೃತ್ತಿಯಲ್ಲಿ ಕಳ್ಳಬಿಲ್ಲು ದಂಧೆಯ ಕಂಟ್ರಾಕ್ಟರ್ ಆದ ವಿಶ್ವನಾಥ ಗೌಡ[...] ಜೊತೆ ಇನ್ನೂ ಮೂರ್ನಾಲ್ಕು ಮಂದಿ ಕಂಟ್ರಾಕ್ಟರುಗಳು ಸೇರಿ ಸೋಮಣ್ಣ[...] ಸುತ್ತ ಕೋಟೆ ಕಟ್ಟಿ ಜನಸಾಮಾನ್ಯರಿಗೂ ಪತ್ರಕರ್ತರಿಗೂ[...] ಸೋಮಣ್ಣನಿಗೂ ಇದ್ದ ಸಂಪರ್ಕವ[...] ಕಡಿದುಬಿಟ್ಟರು.



ಬಿ ನಟರಾಜ್

ಪ್ರತಿ ಗಲ್ಲಿಯಲ್ಲೂ ಕನಿಷ್ಠ ಡಜನ್‌ಗಳಷ್ಟು ಹುಡುಗರ ಹೆಸರು ಹಿಡಿದು ಮಾತಾಡಿಸುತ್ತಿದ್ದ ಸೋಮಣ್ಣ ಕ್ರಮೇಣ ಪುಡಿ ಲೀಡರ್‌ಗಳನ್ನು ನೆಚ್ಚಿಕೊಳ್ಳಲಾರಂಭಿಸಿದ. ಜನರಿಂದ ಎಂದೋ ದೂರವಾಗಿ ದುಡ್ಡು ಮಾಡುವುದರಲ್ಲೇ ಬ್ಯುಜಿಯಾಗಿದ್ದ ಇಂಥ ಮರಿ ಲೀಡರುಗಳ ಕೈಗೆ ಚುನಾವಣಾ ಖರ್ಚಿಗೆ ರೊಕ್ಕ ಕೊ[...] ಏನಾಗಬೇಕಿತ್ತೋ ಅದೇ ಆಯಿತು. ಸೋಮಣ್ಣ ಕೊಟ್ಟ ದುಡ್ಡನ್ನು ಸದ್ದಿಲ್ಲದೇ ಜೇಬಿಗಿಳಿಸಿದ ಶಿಷ್ಯರು ಜನಕ್ಕದನ್ನು ಹಂಚಲೇ ಇಲ್ಲ.

ಗೋವಿಂದರಾಜನಗರದ ದುರಂತವೆಂದರೆ [...] ಬಾರಿ ಅಭಿವೃದ್ಧಿ, ಕಾಮಗಾರಿ, ಸಾಧನೆ, ವ್ಯಕ್ತಿತ್ವ [...] ಯಾವುದೂ ಮತದಾರನಿಗೆ ಮುಖ್ಯವಾಗಲಿಲ್ಲ. ಮನೆಯೊಂದರಲ್ಲಿ ಐದು ಓಟಿದ್ದ ಹೆಂಗಸು ಕೂ[...] ನೀವೆಷ್ಟು ಕೊಡ್ತೀರಿ? ನೀವೆಷ್ಟು ಕೊಡ್ತೀರಿ? ಎ[...] ಬಿಜೆಪಿ-ಕಾಂಗ್ರೆಸ್ ನಾಯಕರಿಬ್ಬರನ್ನೂ ನಿಲ್ಲಿಸಿ ಕೇಳುತ್ತಿದ್ದಳು!

▶▶


ಗಣಿರೆಡ್ಡಿಗಳ ಕ್ಯಾತೆ ಕೇಸರಿ ಒಕ್ಕಲಿಗರ ತಂಟೆ



ಕಳೆದ ಚುನಾವಣೆಗೂ ಈ ಬಾರಿಗೂ ಹೋಲಿಸಿದರೆ ಸೋಮಣ್ಣನ ಪಾಲಿನ ಮತಗಳ್ಯಾವುದೂ ಕಮ್ಮಿಯಾಗಿಲ್ಲ. ಕಳೆದ ಬಾರಿ ಶೇ. 43 ರಷ್ಟು ಮತಗಳು ಬಿದ್ದು ಸೋಮಣ್ಣ 54,500 ರಷ್ಟು ಮತಗಳಿಸಿ ಗೆದ್ದಿದ್ದ. ಈಗ ಶೇ. 48.4 ರಷ್ಟು ಮತ ಚಲಾವಣೆಗೊಂಡು ಸೋಮಣ್ಣ 59 ಸಾವಿರದಷ್ಟು, ಅಂದರೆ ಕಳೆದ ಬಾರಿಗಿಂತ ನಾಲ್ಕೂವರೆ ಸಾವಿರದಷ್ಟು ಹೆಚ್ಚಿಗೆ ಓಟು ಬಾಚಿಯೂ ಸೋತಿದ್ದಾನೆ.

ಇದರರ್ಥ ಸೋಮಣ್ಣ ತನ್ನ ಪಾಲಿನ ಮತಗಳನ್ನು ಪೂರ್ತಿಯಾಗಿ ಪಡೆದರೂ ಕಳೆದ ಬಾರಿ ಜೆಡಿಎಸ್ ಅಭ್ಯರ್ಥಿ ರಂಗೇಗೌಡ ಗಳಿಸಿದ್ದ 20 ಸಾವಿರದಷ್ಟು ಮತಗಳು ಕಾಂಗ್ರೆಸ್ಸಿನ ಪ್ರಿಯಕೃಷ್ಣನ ಪಾಲಾಗಿದ್ದರಿಂದ ಸೋಮಣ್ಣ ಸೋಲಬೇಕಾಯಿತು.

ಇದು ದೇವೇಗೌಡರ ತಂತ್ರ. ವಿಕಟವೆಂದರೆ ಸೋಮಣ್ಣನನ್ನು ಸೋಲಿಸುವುದರ ಮೂಲಕ ದೇವೇಗೌಡ ತಮ್ಮ ವಂಶದ ಕಡುವೈರಿಗಳಾದ ಗಣಿರೆಡ್ಡಿಗಳ ಕೈ ಬಲಪಡಿಸಿದ್ದಾರೆ. ಸೋಮಣ್ಣ ಗೆದ್ದು ಮಂತ್ರಿಯಾಗಿದ್ದರೆ ಬಿಜೆಪಿಯಲ್ಲಿ ಯಡ್ಡಿ ತಾಕತ್ತು ಹೆಚ್ಚುತ್ತಿತ್ತು. ತನ್ನ ನಂತರ ಲಿಂಗಾಯತರ ಲಾಬಿಗೆ ಯಡ್ಡಿಗೆ ಸೋಮಣ್ಣನಂಥ ಪ್ರಚಂಡನೊಬ್ಬನ ಅಗತ್ಯವಿತ್ತು. ಅದಕ್ಕೆಂದೇ ಕೃಷ್ಣಯ್ಯ ಶೆಟ್ಟಿಯನ್ನು ಕೆಳಕ್ಕಿಳಿಸಿ ಆ ಜಾಗಕ್ಕೆ ಜಾತಿಬಂಧು ಸೋಮಣ್ಣನನ್ನು ತಂದರು. ಇದರಿಂದ ಹೆದರಿದ್ದು ಆರೆಸ್ಸೆಸ್ ಮಾತ್ರವೇ ಅಲ್ಲ, ನಿರಂತರವಾಗಿ ತಮ್ಮ ಬ್ಲ್ಯಾಕ್‌ಮೇಲ್‌ಗೀಡಾಗಿ ತಗ್ಗಿಬಗ್ಗಿ ನಡೆಯುತ್ತಿದ್ದ ಯಡ್ಡಿ ಎಲ್ಲಿ ತಿರುಗಿಬಿದ್ದಾರೋ ಎಂಬ ಆತಂಕದಲ್ಲಿದ್ದ ಗಣಿ ರೆಡ್ಡಿಗಳಿಗೆ 'ಭಯ' ಶುರುವಾಗಿದ್ದೇ ಸೋಮಣ್ಣನ ಎಂಟ್ರಿಯಿಂದ.





ಹೇಗೂ ಸೋಮಣ್ಣ ಸೋತಿದ್ದನಾದ್ದರಿಂದ ಆತನ ಮಂತ್ರಿಗಿರಿ ಕಿತ್ತುಕೊಳ್ಳಿ ಎಂದು ಮೊದಲು ಕ್ಯಾತೆ ತೆಗೆದದ್ದೇ ಗಣಿ ರೆಡ್ಡಿಗಳು. ಇದಕ್ಕೆ ಸೋಮಣ್ಣನ ವರ್ಚಸ್ಸಿನಿಂದ ತಮಗೆಲ್ಲಿ ಆಪತ್ತಾಗುತ್ತೋ ಎಂದು ಹೊಟ್ಟೆಕಿಚ್ಚಿಗೆ ಬಿದ್ದ ಶೋಭಾ ಕರಂದ್ಲಾಜೆ, ಅಶೋಕ್, ಕಟ್ಟಾ, ರಾಮಚಂದ್ರೇಗೌಡರಂಥವರು ಪಂಪ್ ಹೊಡೆಯುತ್ತಿದ್ದಾರೆ.


ಆರೆಸ್ಸೆಸ್ ಅಂಕೆಯನ್ನು ಮೀರಿ ಯಡ್ಡಿ ಬೆಳೆಯುವುದಾಗಲಿ, ಬಿಜೆಪಿಗೆ ವ್ಯತಿರಿಕ್ತ[...] ಲಿಂಗಾಯತ ಲಾಬಿ ಕೊಬ್ಬುವುದಾಗಲಿ ಕೇಸರಿ ಪಾಳಯದ ಒಕ್ಕಲಿಗ ಲಾಬಿ[...] ಇಷ್ಟವಿಲ್ಲ. ಯಡ್ಡಿ ತಾಕತ್ತು ಹೆಚ್ಚಿದಷ್ಟೂ ತಮ್ಮ ಬೇಳೆ ಬೇಯುವುದು ಕಷ್ಟ ಎ[...] ಆತಂಕ ಗಣಿ ರೆಡ್ಡಿಗಳದು. ಆರೆಸ್ಸೆಸ್ ಕೂಡ ಯಡ್ಡಿಗೆ ಲಗಾಮು ಹಾಕ[...] ಹವಣಿಸುತ್ತಿದೆಯಾದ್ದರಿಂದ ಸೋಮಣ್ಣ ಮಂತ್ರಿಯಾಗಿರುವುದು ಅದಕ್ಕೂ ಬೇ[...]

ಅಂತಿಮವಾಗಿ ಸೋಮಣ್ಣನಿಗೆ ಬಿಡಿಎ ಛೇರ್ಮನ್‌ಗಿರಿಯೇ ಗಟ್ಟಿಯಾಗಬಹುದೇನೋ.

ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲೆಂಬಂತೆ ಸೋಮಣ್ಣನ ಪ್ರಚಂಡ ಬುದ್ಧಿ ಆತನಿಗೆ ಮುಳುವಾಗುತ್ತಿದ[...]


ಎತವಾರನೇ ಆ ಮಟ್ಟಕ್ಕೆ ಭ್ರಷ್ಟನಾಗಿರುವಾಗ
ಮಣ್ಣ ತನ್ನ ಸಾಧನೆಯನ್ನಾಗಲಿ,
ಯನ್ನಾಗಲಿ ಹೇಳಿಕೊಳ್ಳಲು
ಶವಾದರೂ ಎಲ್ಲಿತ್ತು?

ದವಷ್ಟೇ ಕಾದು ಸಣ್ಣಪುಟ್ಟ ಕಾರ್ಯಕರ್ತರು,
ಲೀಡರುಗಳನ್ನೆಲ್ಲ ಹಿಡಿದು ಹಾಕಿದ ಲೇಬಿಟ್
ನವರ ಶಿಷ್ಯರು ಯಥೇಚ್ಛವಾಗಿ ಕಾಸು
ಆರಂಭಿಸಿದ್ದರು. ಇಂಥಾ ಸ್ಥಿತಿಯಲ್ಲಿ
ಮಣ್ಣನ ಎಲೆಕ್ಷನ್ ಖರ್ಚಿಗೆಂದು
ಯಿಂದ ಬಂದದ್ದು ಕೇವಲ ಮೂರು ಕೋಟಿ
. ಹತ್ತು ಕೋಟಿಯಿದ್ದರೂ ಕಮ್ಮಿ ಎಂಬಂಥ
ಯಿರುವಾಗ ಮೂರು ಕೋಟಿ ಯಾವ


ಲಕ್ಷ್ಮೀನಾರಾಯಣ್

ದೇ ಮೂರು ಕೋಟಿ ಕೊಟ್ಟದ್ದಕ್ಕೆ
ವಾದ ಸೋಮಣ್ಣ ತನ್ನ
ಮರು 'ಬಜೆಪಿಗೆ ಬಂದು ದೊಡ್ಡ
ಮಾಡಿದೆ' ಎಂದು ಹಣೆ
ಳ್ಳುತ್ತಿದ್ದ. ಬಜೆಪಿಯೊಳಗೇ
ಮಣ್ಣ ಗೆಲ್ಲುವುದು ಅನೇಕರಿಗೆ
ರಲಿಲ್ಲ. ವಿಶೇಷವಾಗಿ ಮಂತ್ರಿ
ಚಂದ್ರಗೌಡರು ಕಾಮಾಕ್ಷಿಪಾಳ್ಯದ
ಸಂಬಂಧಿಕರನ್ನು ಕರೆದು
ದರೂ ಮಾಡಿ ಸೋಮಣ್ಣನನ್ನು
ಸಿಬಿಡಿ ಎಂದು ಆದೇಶ ಕೊಟ್ಟುಬಿಟ್ಟರು.
ಗಳಾದ ಆರ್. ಅಶೋಕ್, ಕಟ್ಟಾನಾಯ್ಡು
ಸೋಮಣ್ಣನನ್ನು ಸೋಲಿಸುವುದರಲ್ಲೇ
ಆಸಕ್ತಿಯಿಂದಿದ್ದರು.

ಸೋಮಣ್ಣನಂಥ ಪ್ರಚಂಡ ಗೆದ್ದುಬಿಟ್ಟರೆ
ನಾಳೆ ಅದು ತಮಗೇ ಅಪಾಯವೆಂದು
ಅಶೋಕ್, ರಾಮಚಂದ್ರಗೌಡರಂಥವರು ಕತ್ತಿ
ಮಸುತ್ತಿದ್ದರು. ಹೀಗಾಗಿ ಬಜೆಪಿಯ ಅನೇಕ
ಪ್ ಪದಾಧಿಕಾರಿಗಳೇ ಸೋಮಣ್ಣನ ವಿರುದ್ಧ
ಕೃಷ್ಣಪ್ಪನವರ ಜೊತೆ ಕೈಜೋಡಿಸಿಬಿಟ್ಟರು.
ನ್ಸಾ ಕೋಟಲೆಗಳ ಮಧ್ಯೆಯೇ ಮಹಾನ್
ಟ್ಟೊಂದಕ್ಕೆ ಸೋಮಣ್ಣ ಕೈಯಿಟ್ಟ. ಅದು
ಉಪಮೇಯರ್ ಪುಟ್ರಾಜುವನ್ನು
ಗಳಿಗೆಯಲ್ಲಿ ಬಜೆಪಿಗೆ ಎಳಕೊಂಡಿದ್ದು.
ಮಣ್ಣ ಬಜೆಪಿ ಸೇರಿದಾಗಿನಿಂದಲೂ
ಪ್ಪನಲ್ಲೇ ಇದ್ದ ಮಾಜಿ ಡೆಪ್ಯೂಟಿ ಮೇಯರ್
ಜು ಜಾತಿಯಲ್ಲಿ ಲಿಂಗಾಯತ. ತನ್ನ
ವನೆಂಬ ಒಂದೇ ಕಾರಣಕ್ಕೆ ಎಂದೋ
ಡಿಸಿದ್ದ ಪುಟ್ರಾಜುವನ್ನು ಮತ್ತೆ ಸೋಮಣ್ಣ
ಳ್ಳುವುದಾದರೆ, ಜಾತಿಬುದ್ಧಿಗೆ
ಪುಟ್ರಾಜು ಕೊನೇಗಳಿಗೆಯಲ್ಲಿ
ವರಿಗೆ ಕೈಕೊಟ್ಟು ಸೋಮಣ್ಣನ
ಕ್ಕೆ ನಿಲ್ಲುವುದಾದರೆ ತಾವೇಕೆ
ಜಾತಿಯ ಪ್ರಿಯಕೃಷ್ಣನನ್ನು
ಸಕೊಡದೆಂಬ ಜಾತಿ ವೈಷಮ್ಯಕ್ಕೆ
ರು ಬಿದ್ದರು.


...ಚಂದ್ರೇಗೌಡ

ಗೋವಿಂದರಾಜನಗರದ ಎರಡೂ
ಮು ಲಕ್ಷ ಮತದಾರ ಪೈಕಿ
ರೇ ಎಂಭತ್ತು ಸಾವಿರದಷ್ಟಿದ್ದಾರೆ.
ಸೆಲ್ಲ ಸಾರಾಸಗಟಾಗಿ ಪ್ರಿಯಕೃಷ್ಣನ
ಕ್ಕೆ ನಿಂತುಬಿಟ್ಟರು. ಇದಕ್ಕೆ ತಕ್ಕಂತೆ
ನ ಎಸ್.ಎಂ. ಕೃಷ್ಣ ದೀಕೆ ಮತ್ತು ಕೃಷ್ಣ
ಡ ವಿಪರೀತ ಆಸಕ್ತಿ ವಹಿಸಿ ಸೋಮಣ್ಣನ
ಪ್ರಚಾರಕ್ಕಿಳಿದರು. ಅದರಲ್ಲೂ
ವೇಗೌಡ ಪ್ರತಿನಿತ್ಯ ಪಾದಯಾತ್ರೆ ಮಾಡಿ
ಷ್ಣನ ಪರ ಒಕ್ಕಲಿಗರನ್ನು ಸಂಘಟಿಸಿದ್ದು
ಣ್ಣನ ಪಾಲಿಗೆ ದೊಡ್ಡ ಆಪತ್ತಾಯಿತು.

ಲ್ಲಕ್ಕೂ ತಳಪಾಯ ಹಾಕಿಕೊಟ್ಟದ್ದು
ಮಗ ದೇವೇಗೌಡ. ಚುನಾವಣೆಗೂ
ಜೆಡಿಎಸ್‌ನಿಂದ ಅಭ್ಯರ್ಥಿಯನ್ನೇ ಹಾಕದೇ
ವಾಗಿ ಒಕ್ಕಲಿಗರ ಜಾತಿಬುದ್ಧಿಯನ್ನು
ಸಿದ್ದ ದೇವೇಗೌಡರು ಸೋಮಣ್ಣನ
ಯಾವತ್ತೋ ಮುನ್ನುಡಿ ಬರೆದಾಗಿತ್ತು.

ಕಾಲದಿಂದಲೂ ಸೋಮಣ್ಣನನ್ನು
ಕೊಂಡೇ ಬಂದಿದ್ದ ವಿಜಯನಗರದ
ಗೆ ಕೇವಲ ಪುಟ್ರಾಜು ಪಕ್ಷಾಂತರವೊಂದೇ
ಗಿರಲಿಲ್ಲ, ಅದಕ್ಕೂ ಮೊದಲು ಸೋಮಣ್ಣ
ಮು ಯಡವಟ್ಟು ಮಾಡಿದ್ದ. ಅದು
ನಿಯ ಪ್ರಮಾಣವಚನವನ್ನು ಸಿದ್ದಗಂಗೆಯ

ಶಿವಕುಮಾರ ಸ್ವಾಮಿಗಳ ಹೆಸರಲ್ಲಿ ಸ್ವೀಕರಿಸಿದ್ದು. ಆ ಕಾಲದಿಂದಲೂ ಆದಿಚುಂಚನಗಿರಿ ಸ್ವಾಮಿಗಳ ಪರಮಾಪ್ತನಂತೆ ಓಡಾಡಿಕೊಂಡಿದ್ದ ಸೋಮಣ್ಣ ಮೈಸೂರು ರಸ್ತೆ ಪ್ಲೈಓವರ್‌ಗೆ ಬಾಲಗಂಗಾಧರನಾಥರ ಹೆಸರಿಟ್ಟು ಮೆರೆದಿದ್ದ ಒಕ್ಕಲಿಗ ನಿಷ್ಠೆಯನ್ನು ಸಿದ್ಧಗಂಗೆ ಸ್ವಾಮಿಗಳ ಹೆಸರಲ್ಲಿ ಪ್ರಮಾಣಗೈದಿದ್ದು ನೀವಾಳಿಸಿ ಹಾಕಿತ್ತು.

ಜಾತಿ ರಾಜಕಾರಣದ ಸೂಕ್ಷ್ಮ ಮತ್ತು ಅದನ್ನು ನಿಭಾಯಿಸುವ ತಂತ್ರಗಾರಿಕೆಯಲ್ಲಿ ಸೋಮಣ್ಣ ಪದೇಪದೇ ಎಡವುತ್ತಲೇ ಬಂದದ್ದು ಅಂತಿಮವಾಗಿ ಅವರ ಮಂತ್ರಿಗಿರಿಗೇ ಆಪತ್ತಾಯಿತು.

ಒಕ್ಕಲಿಗರನ್ನು ಬಿಟ್ಟರೆ ಗೋವಿಂದರಾಜನಗರದ ಎರಡನೇ ದೊಡ್ಡ ಸಮೂಹವೆಂದರೆ ಸರಿಸುಮಾರು ನಲವತ್ತು ಸಾವಿರದಷ್ಟಿರುವ ಕುರುಬರು. ಕಳೆದ ಐದು ಚುನಾವಣೆಗಳಲ್ಲೂ ಅರ್ಧಕ್ಕರ್ಧ ಕುರುಬರು ಸೋಮಣ್ಣನ ಬೆನ್ನಿಗಿದ್ದರು. ಒಕ್ಕಲಿಗರು-ದೇವೇಗೌಡ ಮತ್ತು ಕುರುಬರು-ಸಿದ್ಧರಾಮಯ್ಯ ನಡುವಿದ್ದ ಜಾತಿ ವೈಷಮ್ಯವನ್ನು ಸೂಕ್ಷ್ಮವಾಗಿ ವಿಭಜಿಸುವತ್ತ ಸೋಮಣ್ಣ ಆಸಕ್ತಿ ವಹಿಸಲೇ ಇಲ್ಲ, ಎಲ್ಲೆಂದರಲ್ಲಿ ತನಗೆ ಸಿದ್ಧರಾಮಯ್ಯನವರ ಆಶೀರ್ವಾದವಿದೆ ಎಂದು ಬಹಿರಂಗವಾಗಿ ಹೇಳಿಕೊಂಡರು. ಇದರಿಂದ ಮುಜುಗರಕ್ಕೀಡಾದ ಸಿದ್ದರಾಮಯ್ಯ ಐದು ದಿನಗಳ ಕಾಲ ಗೋವಿಂದರಾಜನಗರದಲ್ಲೇ ಠಿಕಾಣಿ ಹಾಕಿ ಪ್ರಿಯಕೃಷ್ಣ ಪರವಾಗಿ ಕುರುಬರನ್ನು ಸಂಘಟಿಸಿದರು.

ಇದರಿಂದ ಸೋಮಣ್ಣನ ಜೊತೆಗಿದ್ದ ಅಳಿದುಳಿದ ಕುರುಬರೂ ಉಲ್ಟಾ ಹೊಡೆದರು. 80 ಸಾವಿರದಷ್ಟಿದ್ದ ಒಕ್ಕಲಿಗರು, ನಲವತ್ತು ಸಾವಿರದಷ್ಟಿದ್ದ ಕುರುಬರ ಪೈಕಿ ಅರ್ಧದಷ್ಟು ಮತಗಳಾದರೂ ಅವೆಲ್ಲವೂ ಪ್ರಿಯಕೃಷ್ಣನ ಪರವಾಗಿ ಬಿದ್ದವೇ ಹೊರತು ಬಜೆಪಿಗೆ ಲಾಭವಾಗಲಿಲ್ಲ ಮಿಕ್ಕಂತೆ ಮೂರನೇ ಅತೀ ದೊಡ್ಡ ಸಂಖ್ಯೆಯ ಮತದಾರರೆಂದರೆ 26 ಸಾವಿರದಷ್ಟಿರುವ ಮುಸ್ಲಿಮರು. ಜೊತೆಗೆ ಆರು ಸಾವಿರದಷ್ಟಿರುವ ಕ್ರಿಶ್ಚಿಯನ್ನರೂ ಸೇರಿದಂತೆ ವೈಯಕ್ತಿಕವಾಗಿ ಸೋಮಣ್ಣನ ಮೇಲೆ ಪ್ರೀತಿಯಿದ್ದರೂ ಬಜೆಪಿ ದೆಸೆಯಿಂದಾಗಿ ಅಲ್ಪಸಂಖ್ಯಾತರ ಒಂದೇ ಒಂದು ಓಟು ಸೋಮಣ್ಣನಿಗೆ ಬೀಳಲಿಲ್ಲ.

ಹದಿನಾರು ಸುತ್ತಿನ ಮತ ಎಣಿಕೆಯಲ್ಲಿ 13 ನೇ ಸುತ್ತಿನ ಹೊತ್ತಿಗೆ 1500 ಮತಗಳಷ್ಟು ಮುಂದಿದ್ದ ಪ್ರಿಯಕೃಷ್ಣ 14 ನೇ ಮತ್ತು 15 ನೇ ಸುತ್ತಿನ ಗಂಗೊಂಡನಹಳ್ಳಿ ಮುಸ್ಲಿಂ ಏರಿಯಾದ ಮತಪೆಟ್ಟಿಗೆಗಳನ್ನು ತೆರೆಯುತ್ತಿದ್ದಂತೆ ಸೋಮಣ್ಣನಿಗಿಂತ ಎರಡೂವರೆ ಸಾವಿರದಷ್ಟು ಅಧಿಕ ಮತಗಳನ್ನು ಗಳಿಸಿಬಿಟ್ಟಿದ್ದ. ಕೊನೇ ಸುತ್ತಿನ ಮತ ಎಣಿಕೆ ಅಂದರೆ 16 ನೇ ರೌಂಡಿನ ಪಂತರಪಾಳ್ಯದ ಮತಪೆಟ್ಟಿಗೆಗಳನ್ನು ಒಡೆದರೆ ಇನ್ನೂ ಸಾವಿರದೈನೂರು ಅಧಿಕ ಮತಗಳು ಪ್ರಿಯಕೃಷ್ಣನಿಗೇ ಬಿದ್ದವೇ ಹೊರತು ಸೋಮಣ್ಣನ ದೌರ್ಭಾಗ್ಯಕ್ಕೆ ಕೊನೆಯೇ ಇರಲಿಲ್ಲ.

5200 ಮತಗಳ ಅಂತರದಿಂದ ಪ್ರಿಯಕೃಷ್ಣ ಗೆದ್ದ ಸುದ್ದಿ ಕೇಳಿದ್ದೇ ಸೋಮಣ್ಣ ಗಳಗಳನೇ ಅಳುತ್ತಿದ್ದ. ಸೋಮಣ್ಣ ಕೆಲಸಗಾರ ನಿಜ. ರಾಮಲಿಂಗಾರೆಡ್ಡಿ, ಕಟ್ಟಾನಾಯ್ಡು, ನಂದೇಶ್ ರೆಡ್ಡಿ, ಸತೀಶ್ ರೆಡ್ಡಿ ಇತ್ಯಾದಿ ನಾಯ್ಡು-ರೆಡ್ಡಿಗಳದೇ ಸಾಮ್ರಾಜ್ಯವಾಗಿರುವ ಬೆಂಗಳೂರಿನ ರಾಜಕಾರಣದಲ್ಲಿ ಕನ್ನಡಿಗರ ದನಿಯಂತಿದ್ದ. ಬಹುಶಃ ಗೆದ್ದಿದ್ದರೆ ಮುಖ್ಯಮಂತ್ರಿ ಯಡ್ಡಿಯ ನಂತರ ಲಿಂಗಾಯತರ ಪಾಳಯಕ್ಕೆ ಉತ್ತರಾಧಿಕಾರಿಯಾಗುತ್ತಿದ್ದ. ಎಷ್ಟೇ ಕೆಲಸ ಮಾಡಿ ಏನೇ ಲಗಾಟ ಹೊಡೆದರೂ ದುಡ್ಡು ಮತ್ತು ಜಾತಿಯ ಮುಂದೆ ಅವೆಲ್ಲವೂ ಕೊಚ್ಚಿ ಹೋಗುತ್ತವೆ ಎಂಬುದಕ್ಕೆ ಸೋಮಣ್ಣ ನಿದರ್ಶನವಷ್ಟೇ. ಬಜೆಪಿಯ ಮೇಲಿನ ಮತದಾರನ ಸಿಟ್ಟಿಗೆ ಸೋಮಣ್ಣ ಬಲಿಯಾದ.

ಗೆಲುವು ಪ್ರಿಯಕೃಷ್ಣನದಾದರೂ ಅಸಲಿಗೆ ಸೋಮಣ್ಣನ ವಿರುದ್ಧ ಗೆದ್ದಿದ್ದು ದೇವೇಗೌಡ!

● ರಾ. ಸೋಮನಾಥ್

ಮಹಿಳಾ ಆಯೋಗ ಏನು ಮಾಡುತ್ತಿದೆ


ರಾಮಚಂದ್ರಾಪುರ ಗುರುಕುಲದಲ್ಲಿ ಹವ್ಯಕ ವಿದ್ಯಾರ್ಥಿನಿಯರ ಲೈಂಗಿಕ ಶೋಷಣೆಯ ವಿಚಾರ ಈಗ ಜಗಜ್ಜಾಹೀರಾಗಿದೆ. ಈ ಬಗ್ಗೆ ಯಾರೇ ವಿದ್ಯಾರ್ಥಿನಿಯಾಗಲಿ ಅಥವಾ ಪೋಷಕರಾಗಲಿ ಕಂಪ್ಲೇಂಟ್ ಕೊಟ್ಟಿಲ್ಲ. ಆದರೂ ಈ ಹೀನಕೃತ್ಯ ನಡೆದಿರುವ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಹೀಗಿರುವಾಗ ರಾಜ್ಯ ಮಹಿಳಾ ಆಯೋಗ ತಾನೇ ಯಾಕೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ನಡೆಸಬಾರದು?

ರಾಮಚಂದ್ರಾಪುರಮಠ

ಹವ್ಯಕ ಬಾಲೆಯರ ಮಾನಹರಣ

ಸೆಪ್ಟೆಂಬರ್ 8ಕ್ಕೆ ವಿಚಾರಣೆ

ಹೊಸನಗರದ ರಾಮಚಂದ್ರಾಪುರ ಮಠದ ಗುರುಕುಲದಲ್ಲಿ ಹವ್ಯಕ ಬಾಲೆಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಕೀಚಕ ಜಗದೀಶ ಶರ್ಮ ಈಗ ಮಲೆನಾಡಿನಲ್ಲೆಲ್ಲೂ ಕಾಣಿಸುತ್ತಿಲ್ಲ. ಇವನ ಗುರು ರಾಘವೇಶ್ವರ ಭಾರತಿ ಸ್ವಾಮಿ ದೂರದ ಕೊಲ್ಕತ್ತಾದಲ್ಲಿ ಚಾತುರ್ಮಾಸ ಪೂಜಾ ನಿರತರಾಗಿದ್ದು ಮಠದೊಳಗೆ ನಡೆದ ಹವ್ಯಕ ಬಾಲೆಯರ ಮಾನಹರಣದ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳುತ್ತಿಲ್ಲ. ಜೊತೆಗೆ ಈ ಸ್ವಾಮಿಗೆ ಕೊಲ್ಕತ್ತಾದಲ್ಲೂ ನೆಮ್ಮದಿ ಸಿಗುತ್ತಿಲ್ಲ. ಕಳೆದ ವಾರ ಕಂಚಿಮಠದ ಕೆಲವು ಭಕ್ತರಿಗೂ ರಾಘವೇಶ್ವರಗೂ ಕೊಲ್ಕತ್ತಾದಲ್ಲೇ ಬೀದಿ ಜಗಳವಾಗಿದೆ. ರಾಮಚಂದ್ರಪುರ ಮಠವನ್ನು ಆದಿ ಶಂಕರಾಚಾರ್ಯರು ಸ್ಥಾಪಿಸಿದರೆಂದು ರಾಘವೇಶ್ವರ ಹೇಳಿಕೊಳ್ಳುತ್ತಿರುವುದಕ್ಕೆ ಕಂಚೀ ಮಠದವರು ಆಕ್ಷೇಪಿಸಿ ಗಲಾಟೆ ಮಾಡುತ್ತಿದ್ದಾರೆ. ಈ ಗದ್ದಲದ ಮಧ್ಯೆಯೇ ಪ್ರಖ್ಯಾತ ಕಾಸ್ಮೆಟಿಕ್ಸ್ ಕಂಪೆನಿಯಾಗಿರುವ ಇಮಾಮಿ ಗ್ರೂಪಿನ ಆರ್.ಎಸ್.ಅಗರ್‌ವಾಲ್ ಹಾಗೂ ಗೋಯೆಂಕಾಗಳ ಇಮಾಮಿ ಗೆಸ್ಟ್‌ಹೌಸಿನೊಳಗೆ ಕುಳಿತು ಪೂಜೆ ಮಾಡುತ್ತಿರುವ ರಾಘವೇಶ್ವರ ಸ್ವಾಮಿ ಮುಂದಿನ ಸೆಪ್ಟೆಂಬರ್ 6ರಂದು ಹೊಸನಗರಕ್ಕೆ ವಾಪಸ್ ಬರುತ್ತಿದ್ದಾರೆ.


ಜಗದೀಶ್ ಶರ್ಮಾ

ಈತ ಇಲ್ಲಿಗೆ ಬಂದು ತಲುಪಿದ ಎರಡನೇ ದಿನವೇ ಅಂದರೆ ಸೆಪ್ಟೆಂಬರ್ 8ರಂದು ಹವ್ಯಕ ಜನಾಂಗೀಯರು ರಾಮಚಂದ್ರಾಪುರ ಮಠಕ್ಕೆ ಘೇರಾವ್ ಹಾಕಲು ಸಜ್ಜಾಗುತ್ತಿದ್ದಾರೆ. ಈಗ ಮಠದಿಂದ ತಲೆಮರೆಸಿಕೊಂಡು ಓಡಿಹೋಗಿರುವ ಜಗದೀಶ್ ಶರ್ಮನು ಮೈಸೂರಿನ ಲಲಿತ ಮಹಲ್ ರಸ್ತೆಯ ನಟ ಅಂಬರೀಶ್‌ನ ಫಾರಂ ಹೌಸಿನ ಪಕ್ಕದಲ್ಲಿರುವ ರಾಘವೇಶ್ವರರ ತೋಟದಲ್ಲಿ ಅವಿತಿಟ್ಟುಕೊಂಡಿದ್ದಾನೆ.


ಇಮಾಮಿ ಬ್ರದರ್ಸ್..... ಕೊಲ್ಕತ್ತಾದಲ್ಲಿ ರಾಘು....

ಸೆಪ್ಟೆಂಬರ್ 8ರಂದು ನಡೆಯಲಿರುವ ರಾಘವೇಶ್ವರ ಸ್ವಾಮಿ ಹಾಗೂ ಹವ್ಯಕ ಭಕ್ತರ ಮುಖಾಮುಖಿಯಲ್ಲಿ ಈ ಕಾಮವ್ಯಸನಿ ಜಗದೀಶ್ ಶರ್ಮ ಹಾಜರಿರುವುದು ಅನುಮಾನಾಸ್ಪದವಾಗಿದೆ. ಈ ಜಗದೀಶ್ ಶರ್ಮ ಹಾಜರಿರಲಿ ಬಿಡಲಿ ಅವತ್ತಿನ ಸಭೆಯಲ್ಲಿ ಇವನ ಹಲ್ಕಾ ಕೆಲಸಗಳ ಪೂರ್ಣ ಮಾಹಿತಿ ಹೊರಗೆಡವಲು ಜನ ತಯಾರಾಗಿರುವ ಸುದ್ದಿ ಬರುತ್ತಿದೆ.

ರಾಮಚಂದ್ರಾಪುರ ಮಠದ ಗುರುಕುಲದಲ್ಲಿ ಓದುತ್ತಿದ್ದ ಹವ್ಯಕ ಬಾಲೆಯರು ಈಗ ಮಠ ತ್ಯಜಿಸಿ ಮನೆಗಳಿಗೆ ಹಿಂತಿರುಗಿ ಹೋದ ನಂತರ ತಮ್ಮ ಪೋಷಕರ ಬಳಿ ಹೇಳಿಕೊಂಡಿರುವ ಕತೆಗಳು ಭಯಾನಕವಾಗಿವೆ. ಈ ಜಗದೀಶ ಶರ್ಮ ಗುರುಕುಲದ ಬಾಲೆಯರ ಬಾತ್‌ರೂಂನಲ್ಲಿ ಯಾರ ಗಮನಕ್ಕೂ ಬಾರದಿರುವಂತೆ ಒಂದು ಕಿಂಡಿ ಮಾಡಿ ಡಿಜಿಟಲ್ ಕ್ಯಾಮರಾ ಮೂಲಕ ಸ್ನಾನದ ದೃಶ್ಯಗಳನ್ನು ರೆಕಾರ್ಡ್ ಮಾಡಿ ಕಂಪ್ಯೂಟರ್‌ನಲ್ಲಿ ಶೇಖರಿಸಿ ಇಟ್ಟುಕೊಂಡಿದ್ದನಂತೆ. ಹಾಗೆಂದು ಗುರುಕುಲದ ವಿದ್ಯಾರ್ಥಿನಿಯೊಬ್ಬಳು ಮನೆಯಲ್ಲಿ ಹೇಳಿಕೊಂಡು ಅತ್ತಿದ್ದಾಳೆ. ಮಠದ ಮುಖ್ಯಸ್ಥ ಜಗದೀಶ ಶರ್ಮನ ಈ ಹೀನಕೃತ್ಯ ನೆನೆನೆನೆದುಕೊಂಡು ಜನ ಹಲ್ಲು ಕಡಿಯುತ್ತಿದ್ದಾರೆ.

ಈ ಸಂದರ್ಭದಲ್ಲಿ ರಾಘವೇಶ್ವರರು ಧರ್ಮ ಉದ್ಧರಿಸುವ, ಮಲ್ಲಿಕಾ ಶೆರಾವತ್ ಹಿಂದೆ ಓಡಾಡುವ ಇಮಾಮಿ ಕ್ರೀಂನವರ ಜೊತೆಗಿರುವ ಅಸಂಬದ್ಧ ಬಾಲಚೇಷ್ಟೆಗಳನ್ನು ಬದಿಗಿರಿಸಿ ಮಠದ ಗೌರವ ಉಳಿಸಿಕೊಳ್ಳುವ ಕೆಲಸ ಮಾಡಬೇಕಿದೆ. ಹವ್ಯಕರು ಬೇರೆ ಬ್ರಾಹ್ಮಣರಂತಲ್ಲ ಕಷ್ಟಪಟ್ಟು ದುಡಿದು ಅನ್ನ ಸಂಪಾದಿಸಿಕೊಳ್ಳುವವರು. ಅದಕ್ಕೂ ಮಿಗಿಲಾಗಿ ಬ್ರಾಹ್ಮಣನಾದರೇನು, ಶೂದ್ರನಾದರೇನೂ ಯಾವನದ್ದೋ ಮಠಕ್ಕಾಗಿ ತಮ್ಮ ಕುಟುಂಬದ ಹುಡುಗಿಯರ ಮಾನ ಬಲಿಕೊಟ್ಟು ಸುಮ್ಮನಿರಲಾರರು.

ಸೆಪ್ಟೆಂಬರ್ 8ರಂದು ನಡೆಯಲಿರುವ ಸಭೆಯಲ್ಲಿ ರಾಘವೇಶ್ವರರು ಮೊದಲು ನಡೆದ ಅನಾಹುತದ ಬಗ್ಗೆ ಮಠದ ಭಕ್ತರ ಕ್ಷಮೆ ಯಾಚಿಸಲಿ, ನಂತರ ಜಗದೀಶ ಶರ್ಮನ ಮೇಲೆ ಪೊಲೀಸರಿಗೆ ದೂರು ಕೊಟ್ಟು ಜೈಲಿಗೆ ಹಾಕಿಸಲಿ.

ಧರ್ಮಗುರುವಾದವನು ಮಾಡಲೇಬೇಕಾದ ಮಿನಿಮಂ ಕೆಲಸ ಅದು. ●

ಆರೆಸ್ಸೆಸ್ ರಾಜಿ ಕಬೂಲಿ

ಹವ್ಯಕ ಹುಡುಗಿಯರ ಮಾನ ಹೋದರೂ ಪರವಾಗಿಲ್ಲ, ಆದರೆ ಹಿಂದೂ ಧರ್ಮದ ಉದ್ಧಾರಕ್ಕೆ ಟೊಂಕಕಟ್ಟಿ ನಿಂತಿರುವ ರಾಮಚಂದ್ರಾಪುರ ಮಠದ ಮಾನ ಹೋಗಲು ಬಿಡಬಾರದೆಂದು ಆರ್‌ಎಸ್ಸೆಸ್ ಹೈದರು ತೀರ್ಮಾನ ಮಾಡಿರುವ ಅನುಮಾನ ಮಲೆನಾಡಿನ ಜನರಿಗೆ ಬಂದಿದೆ. ಏಕೆಂದರೆ ಬರುವ ಸೆಪ್ಟೆಂಬರ್ 8ರ ಸಭೆಯಲ್ಲಿ ಮಠದ ಭಕ್ತರು ತೀರಾ ಆಕ್ರೋಶಗೊಳ್ಳದಂತೆ ನಿಯಂತ್ರಿಸುವ ರಹಸ್ಯ ಪ್ರಯತ್ನವೊಂದನ್ನು ಸಂಘ ಪರಿವಾರಗಳು ಈಗಾಗಲೇ ನಡೆಸುತ್ತಿದ್ದಾರೆ. ಇದರಿಂದ ಕೆರಳಿರುವ ಜನ ಕೇಳುತ್ತಿರುವ ಪ್ರಶ್ನೆ ಏನು ಗೊತ್ತೇ?

"ಮಂಗಳೂರಿನಲ್ಲಿ, ಮುಸ್ಲಿಂ ಹುಡುಗ ಹಿಂದೂ ಹುಡುಗಿಯನ್ನು ಮಾತನಾಡಿಸಿದ್ದಕ್ಕೇ ದೊಡ್ಡ ರಂಪ ಮಾಡಿ ಗಲಾಟೆ ಮಾಡುತ್ತಾರಲ್ಲ ಈ ಆರೆಸ್ಸೆಸ್‌ನವರು ಅದೇ, ಇಲ್ಲಿ ರಾಮಚಂದ್ರಾಪುರ ಮಠದೊಳಗೆ ಸ್ವಾಮೀಜಿಯ ಬೆಂಟನೆ ಹಿಂದೂ ಹುಡುಗಿಯರ ಮಾನಹರಣ ಮಾಡಿದರೂ ಯಾಕೆ ಪ್ರತಿಭಟಿಸಲಿಲ್ಲ?"

ಇದಕ್ಕೆ ಆರೆಸ್ಸೆಸ್‌ನವರೇ ಉತ್ತರಿಸಬೇಕಲ್ಲವೇ?

ಮುರಿದ ಮನೆಗೆ ಅನಂತು ಅಧ್ಯಕ್ಷ?

ಹತ್ತಾರು ವೈರಸ್‌ಗಳು ಹೊಕ್ಕು ಕಾಡುತ್ತಿರುವ ದೇಹದಂತಾಗಿರುವ ಬಿಜೆಪಿ ಈಗ ನಿತ್ರಾಣಗೊಳ್ಳುತ್ತಿದೆ. ಅದರ ಒಂದೊಂದೇ ಪಿಲ್ಲರ್‌ಗಳು ಕುಸಿದು ಬೀಳುತ್ತಿವೆ. ಹೀಗೆ ಮುರಿದು ಬೀಳುತ್ತಿರುವ ಪಾರ್ಟಿಯ ಅಧ್ಯಕ್ಷನಾಗಿರುವ ಪೈಲ್ವಾನ್ ರಾಜನಾಥ್ ಸಿಂಗ್ ಬರುವ ನವೆಂಬರ್‌ನಲ್ಲಿ ಅಧಿಕಾರ ಬಿಟ್ಟುಕೊಡಬೇಕಿದೆ. ಕಳಪೆ ನಾಯಕತ್ವ ಗುಣದವನಾದ ರಾಜ್‌ನಾಥ್ ಸಿಂಗ್ ಬಗ್ಗೆ RSSನವರಿಗೆ ಅದೇನೇನೂ ನಂಬಿಕೆ ಇತ್ತೋ ಏನೋ. ಆದರೆ ದೇಶದ ಜನ ಈತನನ್ನು ಉದಾಸೀನ ಮಾಡಿದ್ದರು. ಜನರಿಗೆ ನಾಟಕೀಯ ನಾಯಕ ವಾಜಪೇಯಿ ಪರವಾಗಿಲ್ಲ ಅನ್ನಿಸಿದ್ದರು. ಅಬ್ಬರದ ಮಾತುಗಳ ಹಿಂಸಾವಾದಿ ಅಡ್ವಾಣಿಯನ್ನು ಜನ ಸುಮಾರಾಗೇ ಸಹಿಸಿಕೊಂಡಿದ್ದರು. ಆದರೆ ಯಾವಾಗ ಕುಸ್ತಿ ಅಖಾಡದಿಂದೆದ್ದು ಬಂದವನಂತೆ ಉತ್ತರ ಪ್ರದೇಶದ ಬಯಲು ಸೀಮೆಯಿಂದ ರಾಜನಾಥ್ ಎದ್ದು ಬಂದನೋ ಆ ಕ್ಷಣದಿಂದಲೇ ಬಿಜೆಪಿಗಿದ್ದ ತೂಕ ಕಡಿಮೆಯಾಗಿ ಹೋಗಿತ್ತು. ಈಗ ಈ ಪೈಲ್ವಾನನ ಅವಧಿಯು ಮುಗಿಯುತ್ತಿದೆ. ಹಾಗಾಗಿ ಮುಂದಿನ ಮೂರು ವರ್ಷ ಕಾಲ ರಾಷ್ಟ್ರ ಬಿಜೆಪಿಯ ಅಧ್ಯಕ್ಷ ಯಾರಾಗಬೇಕೆಂಬ



ಹುಡುಕಾಟ ಈಗಿನಿಂದಲೇ ಶುರುವಾಗಿದೆ. ಈ ಸ್ಥಾನಕ್ಕೆ ಅನಂ[...] ಕುಮಾರ್ ಹೆಸರೂ ಕೇಳಿಬರುತ್ತಿದೆ.

ಇದು ಎಷ್ಟು ವಾಸ್ತವ ಎಂಬುದು ಗೊತ್ತಾಗಲು ಇನ್ನೆರ[...] ತಿಂಗಳು ಕಾಯಬೇಕು. ಬಿಜೆಪಿಗೆ ಇದು ವರ್ಕೌಟ್[...] ಆಗುತ್ತದಾ ಎಂದು ತಿಳಿಯಲು ಅನಂತ್ ಅಧ್ಯಕ್ಷರಾದ ಮೇಲ[...] ಮೂರು ವರ್ಷ ಪೂರ್ತಿಯಾಗಬೇಕು.

ಹಾಗೇನಾದರೂ ಅನಂತ್ ರಾಷ್ಟ್ರ ಬಿಜೆಪಿಗೆ ಅಧ್ಯಕ್ಷರಾಗಿಯ[...] ಬಿಟ್ಟರೆ ಅವರು ಪಕ್ಷದ ಈಗಿನ ಒಳಜಗಳಗಳನ್ನು ಎಷ್ಟರಮಟ್ಟ[...] ಸರಿಪಡಿಸುತ್ತಾರೋ ಗೊತ್ತಿಲ್ಲ ಆದರೆ ಹೊಸ ಸಮಸ್ಯೆಗಳನ್ನಂತೂ ಸೃಷ್ಟಿಸುತ್ತಾರೆ.

ಅದು ಕರ್ನಾಟಕದ ಬಿಜೆಪಿ ಒಳಜಗಳದ ವಿಚಾ[...] ದೇಶದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ[...] ಒಳಜಗಳದ ಹೀಟ್ ಸದ್ಯಕ್ಕೆ ಕಡಿಮೆ ಇದೆ. ಆದರೆ ಯಡ್ಡಿಯ[...] ನಂಬರ್ ಒನ್ ವಿರೋಧಿ ಅನಂತ್ ಬಿಜೆಪಿ ಅಧ್ಯಕ್ಷರಾಗಿಬಿಟ್ಟ[...] ಆ ಘಳಿಗೆಯಿಂದಲೇ ಯಡ್ಡಿಯ ಅವನತಿ ಶುರುವಾಗಿಯ[...] ಬಿಡಬಹುದು.

ಅನಂತ್ ಹಾದಿ ಸುಗಮವೆ?

ಕಳೆದ ಮೂರು ದಶಕಗಳಿಂದ RSSನ ಸೇವೆಯಲ್ಲಿರು[...]



ಬಿಜೆಪಿಯೊಳಗೆ ಬೀದಿನಾಯಿ ಜಗಳ

ಸಾಲು ಸಾಲು ಅವಘಡಗಳನ್ನು ಕಾಣುತ್ತಿರುವ ಭರತಖಂಡಕ್ಕೆ ಕೊನೆಗೂ ಒಂದಿಷ್ಟು ಸಿಹಿ ಸುದ್ದಿಗಳು ಹೊರಬೀಳುತ್ತಿವೆ. ಅದರಲ್ಲಿ ಬಹಳಷ್ಟು ಪ್ರಮುಖವಾದದ್ದು ಎಂದರೆ ಶತಶತಮಾನಗಳಿಂದ ಶಾಂತಿ-ಸಾಮರಸ್ಯದಿಂದ ಬದುಕಿದ್ದ ಭಾರತೀಯರು ಧರ್ಮಗಳ ಹೆಸರಿನಲ್ಲಿ, ದೇವರುಗಳ ಹೆಸರಿನಲ್ಲಿ ಪರಸ್ಪರ ಕಚ್ಚಾಡಿಕೊಳ್ಳುವಂತೆ ಮಾಡಿ ದಶಕಗಳ ಕಾಲ ದೇಶದ ನೆಮ್ಮದಿಯನ್ನೇ ಹಾಳು ಮಾಡಿದ್ದ ಬಿಜೆಪಿ ಮತ್ತು ಸಂಘಪರಿವಾರಿಗಳು ಅವನತಿಯ ದಾರಿ ಹಿಡಿದಿರುವುದು. ಇದರಿಂದ ದೇಶಕ್ಕೆ ಕೆಟ್ಟದ್ದೇನೂ ಆಗುವುದಿಲ್ಲ. ಬದಲಿಗೆ ಸಾಕಷ್ಟು ಒಳ್ಳೆಯದೇ ಆಗಲಿದೆ. ಜನ ಮತ್ತೆ ಶಾಂತಿ, ನೆಮ್ಮದಿಗೆ ಮರಳುತ್ತಾರೆ.


ಭಾರತದಲ್ಲಿ ಒಳಜಗಳಗಳಿಲ್ಲದ, ಇಬ್ಭಾಗವಾಗದ ಪಕ್ಷಗಳಾಗಲೀ, ಸಂಘಟನೆಗಳಾಗಲೀ ಸಿಗುವುದೇ ಇಲ್ಲ. ಕಮ್ಯುನಿಸ್ಟರಂತೂ ಕೂದಲು ಸೀಳುವ ಸೈದ್ಧಾಂತಿಕ ಚರ್ಚೆಗಳಲ್ಲಿ ಅರ್ಧ ಜೀವಮಾನ ಕಳೆದು ತಮ್ಮ ಪಕ್ಷಗಳನ್ನು ಒಡೆದುಕೊಳ್ಳುತ್ತಲೇ ಬಂದಿದ್ದಾರೆ. ಈಗ ದೇಶದಲ್ಲಿ ಅದೆಷ್ಟು ವಿಭಿನ್ನ ಬಗೆಯ ಕಮ್ಯೂನಿಸ್ಟ್ ಗುಂಪುಗಳಿವೆಯೆಂದು ನೋಡುತ್ತಾಹೋದರೆ ನಿಮಗೆ ಲೆಕ್ಕವೇ ಸಿಗುವುದಿಲ್ಲ. ಕಾಂಗ್ರೆಸ್ ಮತ್ತು ಜನತಾದಳಗಳಂಥ ರಾಷ್ಟ್ರೀಯ ಪಕ್ಷಗಳೂ ಒಳಜಗಳಗಳಿಂದ ತತ್ತರಿಸಿ ಇಬ್ಭಾಗವಾಗಿ ಹೋಗಿವೆ. ಸಾಮಾಜಿಕ ಹೋರಾಟಗಳಲ್ಲಿ ತೊಡಗಿರುವ ದಲಿತ, ರೈತ, ಕಾರ್ಮಿಕ ಸಂಘಟನೆಗಳೂ ಛಿದ್ರವಾಗಿ ಹೋಗಿವೆ. ನಮ್ಮ ರಾಜ್ಯವನ್ನೇ ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಇಡೀ ರಾಜ್ಯವನ್ನೇ ತಮ್ಮ ಉಗ್ರ ಹೋರಾಟಗಳಿಂದ ತಲ್ಲಣಗೊಳಿಸಿದ್ದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘಗಳು ಲೆಕ್ಕಕ್ಕೆ ಸಿಗದಷ್ಟು ಗುಂಪುಗಳಾಗಿ ಛಿದ್ರಗೊಂಡಿವೆ.

ಆದರೆ, ಈ ಒಳಜಗಳ ಮತ್ತು ಇಬ್ಭಾಗಗಳ 'ಭಾರತೀಯ ಸಂಸ್ಕೃತಿ'ಗೆ ಅಪವಾದವೆಂಬಂತೆ ಸಂಘಪರಿವಾರಿಗಳಿದ್ದರು. ದಶಕಗಳಿಂದ ಅವರಲ್ಲಿ ಹೇಳಿಕೊಳ್ಳುವಂಥ ಕಿತ್ತಾಟಗಳಾಗಲೀ, ಒಳಜಗಳಗಳಾಗಲೀ, ಸಂಘಟನೆಯನ್ನು ಒಡೆಯುವಂಥ ಕೃತ್ಯಗಳಾಗಲೀ ಸಂಭವಿಸಿರಲಿಲ್ಲ. ಕೆಲವು ಬುದ್ಧಿಜೀವಿಗಳು 'ಒಗ್ಗಟ್ಟಿನಿಂದ ಹೇಗೆ ಕೆಲಸ ಮಾಡಬೇಕೆಂಬುದನ್ನು ಬಿಜೆಪಿ ಮತ್ತು ಸಂಘಪರಿವಾರವನ್ನು ನೋಡಿ ಕಲಿತುಕೊಳ್ಳಿ' ಎಂದು ಸಾಮಾಜಿಕ ಕಾರ್ಯಕರ್ತರಿಗೆ, ಹೋರಾಟಗಾರರಿಗೆ, ಕಮ್ಯೂನಿಸ್ಟರಿಗೆ ಬುದ್ಧಿ ಹೇಳುತ್ತಿದ್ದರು. ಅಷ್ಟರ ಮಟ್ಟಿಗೆ ಬಿಜೆಪಿ ಮತ್ತು ಸಂಘಪರಿವಾರ ಒಗ್ಗಟ್ಟನ್ನು ಪ್ರದರ್ಶಿಸುತ್ತಿತ್ತು. ಆ ಒಗ್ಗಟ್ಟೇ ಭರತಖಂಡದ ಶಾಂತಿ, ನೆಮ್ಮದಿಗಳನ್ನು ಹಾಳು ಮಾಡಿತ್ತು. ಆ ಒಗ್ಗಟ್ಟೇ ದೇಶದಲ್ಲಿ ನಿತ್ಯ ರಕ್ತಹರಿಯುವಂತೆ ಮಾಡಿತ್ತು. ಆ ಒಗ್ಗಟ್ಟೇ ದೇಶದ ಜನ ತಮ್ಮ ಲೌಕಿಕ ಕಷ್ಟಕಾರ್ಪಣ್ಯಗಳನ್ನು ನಿವಾರಿಸಿಕೊಳ್ಳುವ ದಿಕ್ಕಾಗಿ ಹೋರಾಟ ಮಾಡುವುದನ್ನು ತಪ್ಪಿಸಿ ಅದರ ಬದಲಿಗೆ ಅಲೌಕಿಕವಾದ ಧರ್ಮ, ದೇವರುಗಳ ವಿಚಾರದಲ್ಲಿ ಕಚ್ಚಾಡಿಕೊಳ್ಳುವಂತೆ ಮಾಡಿತ್ತು. ಆ ಒಗ್ಗಟ್ಟೇ ಬಿಜೆಪಿ-ಸಂಘಪರಿವಾರದವರು ದೇಶವನ್ನು ಲೂಟಿ ಹೊಡೆಯುತ್ತಿದ್ದರೂ ಅವರ ವಿರುದ್ಧ ಜನ ಬಂಡೇಳದಂತೆ ತಡೆದಿತ್ತು.

ಈಗ ಅದೆಲ್ಲ ಚರಿತ್ರೆಯ ಪುಟ ಸೇರುತ್ತಿದೆ. ಅಭೇದ್ಯ ಕೋಟೆಯಂತಿದ್ದ ಬಿಜೆಪಿ ಮತ್ತು ಸಂಘಪರಿವಾರದೊಳಗೂ ಕಳೆದ ಕೆಲವಾರು ವರ್ಷಗಳಿಂದ ದೊಡ್ಡ ಪ್ರಮಾಣದ ಬಿರುಕುಗಳು ಕಾಣಿಸಲಾರಂಭಿಸಿವೆ. ಅದರಲ್ಲೂ ಪರಿವಾರದ ಅವಿಭಾಜ್ಯ ಅಂಗವಾಗಿರುವ ಬಿಜೆಪಿಯೊಳಗಂತೂ ಜಗಳವೆಂಬುದು ಒಂಥರಾ ಬೀದಿನಾಯಿ ಜಗಳದಂತಾಗಿಬಿಟ್ಟಿದೆ. ಅದೀಗ ಎಲ್ಲಿಗೆ ಬಂದು ನಿಂತಿದೆ ಎಂದರೆ ಕೆಲವೇ ಪ್ರಭಾವಿ ನಾಯಕರು ಅಪಸ್ವರ ಎತ್ತಿದವರನ್ನೆಲ್ಲಾ ಯಾವುದೇ ಮುಲಾಜಿಲ್ಲದೇ ಪಕ್ಷದಿಂದ ಹೊರದಬ್ಬುವ ಸರ್ವಾಧಿಕಾರಿ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಅದಕ್ಕೆ ಇತ್ತೀಚಿನ ಬಲಿಪಶು ಎಂದರೆ ಬಿಜೆಪಿಯಲ್ಲಿ, ಜನಸಂಘದಲ್ಲಿ, ಪರಿವಾರದಲ್ಲಿ ಕಳೆದ ಮೂರು ದಶಕಗಳಿಂದ ನಿಷ್ಠಾವಂತರಾಗಿ ಕಾರ್ಯನಿರ್ವಹಿಸಿಕೊಂಡು ಬಂದಿದ್ದ ಜಸ್ವಂತ್ ಸಿಂಗ್. ಅವರು ಬರೆದ Jinnha: India-Partition-Independence ಎಂಬ ಪುಸ್ತಕದಲ್ಲಿ ದೇಶ ಇಬ್ಭಾಗವಾಗುವುದಕ್ಕೆ ಮೊಹ್ಮದ್ ಅಲಿ ಜಿನ್ನಾ ಕಾರಣರಲ್ಲ, ಬದಲಿಗೆ ನೆಹರೂ ಮತ್ತು ವಲ್ಲಭಬಾಯಿ ಪಟೇಲ್ ಹೊಣೆಗಾರರು ಎಂದು ಆಪಾದಿಸಿದ್ದನ್ನೇ ನೆಪವಾಗಿಟ್ಟುಕೊಂಡು ಕನಿಷ್ಠ ಒಂದು ಸಣ್ಣ ಸೂಚನೆಯನ್ನೂ ಕೊಡದೆ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಹೊರದಬ್ಬಲಾಗಿದೆ.

ಈ ಹಿಂದೆ ಮಧ್ಯ ಪ್ರದೇಶದ ಮಾಜಿ ಮುಖ್ಯಮಂತ್ರಿ ಉಮಾ ಭಾರತಿಗೂ ಇದೇ ಆತಿಥ್ಯ ನೀಡಲಾಗಿತ್ತು. ಒಂದು ಕಾಲದಲ್ಲಿ ಉಮಾ ಭಾರತಿ ಬಿಜೆಪಿಯ ಮೌತ್ ಪೀಸ್ ಆಗಿದ್ದವರು. ಹಿಂದೂತ್ವ ಪರ ಹಾಗೂ ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ವಿರುದ್ಧದ ಅವರ ಉರಿನಾಲಿಗೆಯಿಂದಲೇ ಪಕ್ಷದೊಳಗೆ, ಪರಿವಾರದೊಳಗೆ ಜನಪ್ರಿಯ ನಾಯಕಿಯಾಗಿ ಹೊರಹೊಮ್ಮಿದ್ದರು. ಕೇವಲ ಮಧ್ಯಪ್ರದೇಶದ ಮುಖ್ಯಮಂತ್ರಿ ಮಾತ್ರವಲ್ಲ ರಾಷ್ಟ್ರೀಯ ಬಿಜೆಪಿಯಲ್ಲೂ ಪ್ರಭಾವಿ ನಾಯಕಿಯಾಗಿದ್ದರು. ಆದರೆ, ಉಮಾ ಭಾರತಿ ಮತ್ತು ರಾಷ್ಟ್ರೀಯ ನಾಯಕರ ನಡುವೆ ಬೆಳೆದ ವೈಷಮ್ಯದ ಕಾರಣದಿಂದಾಗಿ ರಾಷ್ಟ್ರೀಯ ನಾಯಕರು ಆಕೆಯನ್ನು ಹೇಳಹೆಸರಿಲ್ಲದಂತೆ ತುಳಿದು ಹಾಕಿದರು. ಹುಬ್ಬಳ್ಳಿ ಈದ್ಗಾ ಮೈದಾನ ಗಲಾಟೆಯಲ್ಲಿ ಆಕೆ ಪ್ರಚೋದನಾಕಾರಿ ಭಾಷಣ ಮಾಡಿದ ಆರೋಪದ ಮೇಲೆ ಸ್ಥಳೀಯ ನ್ಯಾಯಾಲಯ ಹೊರಡಿಸಿದ ಅರೆಸ್ಟ್ ವಾರೆಂಟ್ ಅನ್ನೇ ನೆಪವಾಗಿಟ್ಟುಕೊಂಡು ಆಕೆಯನ್ನು ಮಧ್ಯಪ್ರದೇಶ ಮುಖ್ಯಮಂತ್ರಿ ಸ್ಥಾನದಿಂದ ಕಿತ್ತೆಸೆದು ರಾಷ್ಟ್ರೀಯ ನಾಯಕತ್ವಕ್ಕೆ ಬಾಲಂಗೋಚಿಯಂತಿದ್ದ ಶಿವರಾಜ್ ಚೌಹಾಣ್ ಅವರನ್ನು ಕೂರಿಸಲಾಯಿತು. ನಂತರ ಮತ್ತೆ ಆಕೆ ಮತ್ತೆಂದೂ ಮುಖ್ಯಮಂತ್ರಿ ಕುರ್ಚಿಯ ಬಳಿ ಸುಳಿಯದಂತೆ ನೋಡಿಕೊಳ್ಳಲಾಯಿತು. ಕೊನೆಗೆ ಎಂಥ ಪರಿಸ್ಥಿತಿ ನಿರ್ಮಾಣವಾಯಿತೆಂದರೆ ಆಕೆ ಪಕ್ಷವನ್ನೇ ತೊರೆದು ಕಳೆದ ಲೋಕಸಭಾ ಚುನಾವಣೆಯಲ್ಲಿ ತಾನು ಗೆಲ್ಲುವುದು ಮುಖ್ಯವಲ್ಲ, ಬಿಜೆಪಿಯನ್ನು ಸೋಲಿಸುವುದೇ ತನ್ನ ಏಕೈಕ ಉದ್ದೇಶ ಎಂದು ಘೋಷಿಸಿಬಿದ್ದಳು.

ಬಾಬ್ರಿ ಮಸೀದಿ ಉರುಳಿದಾಗ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಹಾಗೂ ಬಿಜೆಪಿಯ ಪ್ರಧಾನ ಮುಖವಾಗಿದ್ದ ಕಲ್ಯಾಣ್ ಸಿಂಗ್‌ಗೂ ಅದೇ ಪರಿಸ್ಥಿತಿ ಸೃಷ್ಟಿಸಲಾಯಿತು. ಮೊದಲೇ ಹೇಳಿಕೇಳಿ ಬಿಜೆಪಿ ಬ್ರಾಹ್ಮಣವಾದಿಗಳ ಪಕ್ಷ. ಅಲ್ಲಿ ಉಮಾಭಾರತಿ ಮತ್ತು ಕಲ್ಯಾಣ್ ಸಿಂಗ್ ಥರದ ಹಿಂದುಳಿದ ಜಾತಿಗಳಿಗೆ ಸೇರಿದ ಜನ ಬಹಳಷ್ಟು ದಿನ ನಿರಾಳವಾಗಿ ಉಸಿರಾಡಿಕೊಂಡಿರುವುದೂ ಕಷ್ಟ. ಕಲ್ಯಾಣ್ ಸಿಂಗ್ ಏನು ಸಾಮಾನ್ಯ ಕಾರ್ಯಕರ್ತರಾಗಿದ್ದವರಲ್ಲ. ಬಿಜೆಪಿಯಿಂದಲೇ ಎರಡು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾದವರು. 'ಅಯೋಧ್ಯಾ ಚಳವಳಿ'ಯ ಹೆಸರಿನಲ್ಲಿ ಅಡ್ವಾಣಿ ದೇಶದಾದ್ಯಂತ ಹಿಂದೂ-ಮುಸ್ಲಿಮ್ ಸೌಹಾರ್ದತೆ ಕದಡುತ್ತಿದ್ದಾಗ ಕಲ್ಯಾಣ್ ಸಿಂಗ್ ಅವರನ್ನೇ ಉತ್ತರ ಪ್ರದೇಶದ ಬಿಜೆಪಿಯ ಮುಖವೆಂಬಂತೆ ಬಿಂಬಿಸಲಾಗಿತ್ತು. ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿ ಹಾಕಿದಾಗ ಇದೇ ಕಲ್ಯಾಣ್ ಸಿಂಗ್ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ಅವರನ್ನು ಎಷ್ಟು ಉಪಯೋಗಿಸಿಕೊಳ್ಳಬೇಕೋ ಅಷ್ಟು ಉಪಯೋಗಿಸಿಕೊಂಡಾದ ಮೇಲೆ, ಬ್ರಾಹ್ಮಣವಾದಿಗಳಿಗೆ ಅವರ ಅಗತ್ಯ ಇಲ್ಲವೆಂದು ಮನವರಿಕೆಯಾದ ಮೇಲೆ ಅವರನ್ನು ಕಸದ ಬುಟ್ಟಿಗೆ ಎಸೆದುಹಾಕಲಾಯಿತು.



ಬಿಜೆಪಿಯ ಬ್ರಾಹ್ಮಣವಾದಿಗಳಿಗೆ ಬಲಿಯಾದವರಿಗೆ ಲೆಕ್ಕವಿಲ್ಲ. ತೆಹಲ್ಕಾ ಹಗರಣದಲ್ಲಿ ಸಿಕ್ಕಿ ಹಾಕಿಕೊಂಡಿದ್ದನ್ನೇ ನೆಪಮಾಡಿಕೊಂಡು ಅಂದಿನ ಬಿಜೆಪಿ ಅಧ್ಯಕ್ಷರಾಗಿದ್ದ ದಲಿತ ಹಿನ್ನೆಲೆಯ ಬಂಗಾರು ಲಕ್ಷ್ಮಣ್ ಅವರನ್ನು ಶಾಶ್ವತವಾಗಿ ತುಳಿದು ಹಾಕಲಾಗಿತ್ತು. ಅಂತೆಯೇ, ಜಾರ್ಖಂಡ್‌ನಲ್ಲಿ ಬಾಬುಲಾಲ್ ಮರಾಂಡಿ, ದೆಹಲಿಯಲ್ಲಿ ಮದನ್‌ಲಾಲ್ ಖುರಾನಾರಂಥ ನಾಯಕರೂ ಒಬ್ಬರಾದ ಮೇಲೊಬ್ಬರಂತೆ ನೆಲಕಚ್ಚುವಂತೆ ನೋಡಿಕೊಳ್ಳಲಾಗಿತ್ತು.



ಒಂದು ಹಂತದಲ್ಲಿ ವಾಜಪೇಯಿಯಂಥ ಸೌಮ್ಯ – ಅಡ್ವಾನಿಯಂಥ ಕ್ರೂರ ಮುಖಗಳ ಕಾಂಬಿನೇಶನ್ ಆಗಿತ್ತು ಬಿಜೆಪಿ. ಬಿಜೆಪಿಯ ರಕ್ತಸಿಕ್ತ, ನಂಜುಕಾರಕ ಐಡಿಯಾಲಜಿಯನ್ನು ವಿರೋಧಿಸುವವರೂ ವಾಜಪೇಯಿಯವರನ್ನು ಗೌರವಿಸುತ್ತಿದ್ದರು. ಈಗ ಅವರು ರಾಜಕೀಯದಿಂದ ನಿವೃತ್ತರಾಗಿದ್ದಾರೆ. ಅರುಣ್ ಜೇಟ್ಲಿಯಂತೆಯೇ ಚಾಣಾಕ್ಷವಾಗಿ ಸರ್ಕಾರ, ಪಕ್ಷಗಳನ್ನು ಮುನ್ನಡೆಸಿದ ಪ್ರಮೋದ್ ಮಹಾಜನ್ ತನ್ನ ಸಹೋದರನಿಂದಲೇ ಗುಂಡೇಟು ತಿಂದು ಸತ್ತು ಹೋಗಿದ್ದಾರೆ. ಉಳಿದಿರುವುದು 'ಕೈಕಾಲು ಕಡಿಯಿರಿ', 'ಜೀವಂತವಾಗಿ ಸುಟ್ಟುಹಾಕಿ', 'ರೇಪ್ ಮಾಡಿ' ಎಂದೆಲ್ಲಾ ರಕ್ಕಾರುವ ವರುಣ್ ಗಾಂಧಿ[...] ಅಡ್ವಾನಿ, ಮೋದಿಗಳಂಥ ಕ್ರೂರ ಮುಖಗಳು ಮಾತ್ರವೆ[...] ವಾಜಪೇಯಿ ರಾಜಕೀಯ ನಿವೃತ್ತಿ ಘೋಷಿಸುವುದ[...] ಗ್ಯಾರಂಟಿಯಾಗುತ್ತಿದ್ದಂತೆಯೇ ಭವಿಷ್ಯದ ಪ್ರಧಾ[...] ಪಟ್ಟಕ್ಕೇರಲು ಅಡ್ವಾನಿ ಸಿದ್ಧತೆ ಮಾಡಿಕೊಂಡರು[...] ವಾಜಪೇಯಿಯಂತೆಯೇ ತಾವೂ ಸೌಮ್ಯವಾದಿಯಾಗ[...] ವುದಕ್ಕೆ ಹರಸಾಹಸಪಟ್ಟರು. ಆ ಮೂಲಕ ಎನ್‌ಡಿ[...] ಮೈತ್ರಿಕೂಟಗಳ ಮಿತ್ರಪಕ್ಷಗಳನ್ನು, ದೇಶದ ಮಧ್ಯ[...] ವರ್ಗವನ್ನು ಪ್ರಭಾವಿಸಲು ಪ್ರಯತ್ನ ಪಟ್ಟರು. [...] ಕಾರ್ಯಸಾಧನೆಯ ಭಾಗವಾಗಿಯೇ 2005 ರ[...] ಪಾಕಿಸ್ತಾನಕ್ಕೆ ಹೋಗಿ ಮಹ್ಮದ್ ಅಲಿ ಜಿನ್ನಾ ಅವರನ್ನು ಧರ್ಮನಿರಪೇಕ್ಷಕ ಹಾಗೂ ಜಾತ್ಯತೀತವಾದಿ ಎಂದ[...] ಬಣ್ಣಿಸಿದರು. ಆದರೆ, ಅಡ್ವಾನಿ ಸೌಮ್ಯವಾದಿಯಾಗಲ[...] ಪ್ರಯತ್ನಪಟ್ಟಷ್ಟೂ ಚಿತ್ತಲಾಗಿ ನಿಂತರು. ಪ್ರವೀಣ್ ತೊಗಾ[...] ಯಾದಿಯಾಗಿ ಸಂಘಪರಿವಾರಿಗಳು ಅವರ ಚಡ್ಡಿ ಕಳಚುವ[...] ದೊಂದನ್ನು ಬಿಟ್ಟು ಏನೆಲ್ಲಾ ಮಾಡಬೇಕೋ ಅದನ[...] ಮಾಡಿದರು. ಆರೆಸ್ಸೆಸ್ಸಿನ ಕೆಂಗಣ್ಣಿಗೆ ಗುರಿಯಾಗಿ ಬಿಜೆಪಿಯ[...] ಅಧ್ಯಕ್ಷ ಸ್ಥಾನವನ್ನೂ ತೊರೆದರು. ಅದು ಕೊನೆಗೆ ಅಡ್ವಾ[...] ಮತ್ತು ಆರೆಸ್ಸೆಸ್ ನಡುವಿನ ಬೀದಿಜಗಳವಾಗುವ ಹಂ[...] ತಲುಪಿತ್ತು. ಅಡ್ವಾನಿ ಮಧ್ಯಮ ವರ್ಗವನ್ನೂ ಪ್ರಭಾವಿಸಲಾ[...] ಲಿಲ್ಲ, ತನ್ನದೇ ಎನ್‌ಡಿಎ ಮೈತ್ರಿಕೂಟದ ಮಿತ್ರ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗಲಿ[...] ಎಂಬುದು ಕಳೆದ ಲೋಕಸಭ[...] ಚುನಾವಣೆಯಲ್ಲಿ ಸಾಬೀತಾಯಿತು.

ಲೋಕಸಭಾ ಚುನಾವಣೆಯ ಸಮಯ[...] ದಲ್ಲೇ ರಾಷ್ಟ್ರಮಟ್ಟದಲ್ಲಿ ಬಿಜೆಪಿ ಅಧ್ಯ[...] ರಾಜನಾಥ್ ಸಿಂಗ್ ಮತ್ತು ಪಕ್ಷದ ಮಿದುಳ[...] ಎಂದೇ ಪರಿಗಣಿತವಾಗಿರುವ ಅರುಣ್ ಜೇಟ್ಲಿ ನಡುವಿದ್ದ ಮುಸುಕಿನ ಗುದ್ದಾ[...] ಒಂದು ಹಂತಕ್ಕೆ ಅಗುಸಿಬಾಗಿಲಿಗೆ ಬಂದು ನಿಂತಿತ್ತು. ಆ ಜಗಳವಿನ್ನೂ ಶಮನವಾಗಿಲ್ಲ[...] ಯಾವಾಗ ಸ್ಫೋಟಗೊಳ್ಳುತ್ತೋ ಗೊತ್ತಿಲ್ಲ[...] ಲೋಕಸಭಾ ಚುನಾವಣೆಗಳು ಮುಗಿದ ಮೇಲೆ, ಬಿಜೆ[...] ಮತ್ತು ಅದರ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಛಿದ್ರವಾ[...] ಮೇಲೆ, ಅಡ್ವಾನಿಯ ಪ್ರಧಾನಿ ಕನಸು ಭಗ್ನವಾದ ಮೇ[...] ಬಿಜೆಪಿಯೊಳಗಿನ ಈ ಕಿತ್ತಾಟ ತಾರಕಕ್ಕೇರಿತು. ಇದ[...] ಜಸ್ವಂತ್ ಸಿಂಗ್ ಪಕ್ಷದ ಕಾರ್ಯವೈಖರಿಯನ್ನು ಬಹಿರಂ[...] ವಾಗಿ ವಿಮರ್ಶೆ ಮಾಡಿದ್ದರು. ಅದೆಲ್ಲದಕ್ಕೆ ಉತ್ತರವೆಂಬಂ[...] ಈಗ ತಲೆದಂಡ ತೆತ್ತಿದ್ದಾರೆ.

ದಶಕಗಳ ಕಾಲ ಬಿಜೆಪಿಯಲ್ಲಿ ದುಡಿದ ಜಸ್ವಂತ್ ಅವರನ್ನು ಹೀಗೆ ಏಕಾಏಕಿ ಅವಮಾನಕಾರವಾ[...] ಹೊರದಬ್ಬಿದ್ದು ಪಕ್ಷದೊಳಗೇ ದೊಡ್ಡ ಮಟ್ಟ[...] ಅಸಮಾಧಾನಕ್ಕೆ ಕಾರಣವಾಗಿದೆ. ಪಕ್ಷದ ಹಿರಿಯ ಸಿದ್ಧಾಂ[...] ಅರುಣ್ ಶೌರಿ ಕೂಡ ಇದರಿಂದ ಕೆಂಡಾಮಂಡ[...] ವಾಗಿದ್ದಾರೆ. ಪಕ್ಷದ ನಾಯಕತ್ವ ಕನಿಷ್ಠ ಭಿನ್ನಾಭಿಪ್ರಾಯಗಳನ್ನು ಸಹಿಸಿಕೊಳ್ಳದಷ್ಟು ಸರ್ವಾಧಿಕಾರಿಯಾಗಿದೆ ಎಂದೂ, ಅದ[...] ಉಡಾಯಿಸಬೇಕೆಂದೂ, ಆರೆಸ್ಸೆಸ್ ಪಕ್ಷವನ್ನು ತನ್ನ ತೆಕ್[...] ತೆಗೆದುಕೊಳ್ಳಬೇಕೆಂದೂ ಬಡಬಡಾಯಿಸಿದ್ದಾ[...] ಇದರೊಂದಿಗೆ ಬಿಜೆಪಿಯೊಳಗಿನ ಒಳಜಗಳವೀ[...] ಬೀದಿಜಗಳವಾಗಿಬಿಟ್ಟಿದೆ. ಇನ್ನೊಂದೆಡೆಗೆ ಆರೆಸ್ಸೆ[...] ನಾಯಕರು ಅಡ್ವಾನಿ, ರಾಜನಾಥ್ ಸಿಂಗ್, ಅರುಣ್[...]

▶▶

...ದ ಅನಂತ್ ಕುಮಾರ್ ಹೆಸರು ಬಿಜೆಪಿ ಅಧ್ಯಕ್ಷ ...ಗೆ ಕೇಳಿಬರುತ್ತಿರುವ ಹಿನ್ನೆಲೆಯಲ್ಲೂ ಹಾಲಿ ಬಿಜೆಪಿಗಳ ...ನಾಯಕತ ಇದೆ. ಅಲ್ಲೀಗ ವಾಜಪೇಯಿ-ಅಡ್ವಾಣಿಗಳ ... ಮುಗಿದಿದೆ. ಪಕ್ಷದ ಮುಂದಿನ ನಾಯಕರ್ಯಾರು ... ವಿಷಯ ನಿರ್ಧಾರವಾಗಬೇಕಿರುವ ಸಮಯದಲ್ಲೇ ...ನೇ ಸಾಲಿನ ಹಿರಿಯ ನಾಯಕರುಗಳು ಬೀದಿ ...ಕ್ಕೆ ಚಾಲೂ ನೀಡುತ್ತಿದ್ದಾರೆ. ಜಸ್ವಂತ್ ಸಿಂಗ್, ಅರುಣ್ ... ಅರುಣ್ ಜೈಟ್ಲಿ, ಸುಷ್ಮಾ ಸ್ವರಾಜ್ ಮುಂತಾದ ...ಗಳ ಗದ್ದಿ ಏರಿದ ಪ್ರಭಾವಿ ನಾಯಕರುಗಳ ಕರಂಹರ ...ಲವೇ ಅನಂತ್ ಕುಮಾರ್‌ಗೆ ಅವಕಾಶದ ಹೆಬ್ಬಾಗಿಲು ...ಯುವಂತೆ ಮಾಡುತ್ತಿದೆ. ಆದರೆ ಭಾರತೀಯ ...ಕಾರಣದ ಇತಿಹಾಸದಲ್ಲಿ ದಕ್ಷಿಣ ಭಾರತೀಯ ...ಕನೊಬ್ಬ ರಾಷ್ಟ್ರಮಟ್ಟದ ಪಕ್ಷದ ಚುಕ್ಕಾಣಿ ಹಿಡಿದು ...ಸ್ವಡೆಸಿ ಯಶಸ್ವಿಯಾದ ಉದಾಹರಣೆಗಳಿಲ್ಲ. ವೆಂಕಯ್ಯ ...ಡು, ಬಂಗಾರು ಲಕ್ಷ್ಮಣ್ ತರಹದ ಕಾಂಜೀಪಿಂಜೀ ...ರ್‌ಗಳು ಕೆಲಕಾಲ ಮೆರೆದಾದರೂ ಅವರಿಗೆ ಅಂತಹ ...ಕ್ಷದ ಬಲ, ವರ್ಚಸ್ಸು ಇರಲೇ ಇಲ್ಲ. ವಿಷಯ ...ರುವಾಗ ನಾಳೆ ಅನಂತ್ ಕುಮಾರ್ ಬಿಜೆಪಿ

ಅಧ್ಯಕ್ಷರಾದರೂ ಫಲಿತಾಂಶ ಇದೇ ಆಗುತ್ತದೆ. ಆದರೆ RSSನ ಮುಖ್ಯಸ್ಥರಿಗೆ ಯಶಸ್ಸು, ಫಲಿತಾಂಶಗಳಿಗಿಂತ RSS ನಿಷ್ಠಾವಂತನೊಬ್ಬ ಪಕ್ಷದ ಅಧ್ಯಕ್ಷನಾಗಲಿ ಎಂಬ ಇರಾದೆಯಿದ್ದಂತಿದೆ. ಆದರೆ ಅನಂತ್ ಅಡ್ವಾಣಿಯ ಶಿಷ್ಯನಾಗಿರುವ ಕಾರಣ ಅಡ್ವಾಣಿಯ ವಿರೋಧ ಪಕ್ಷದ ನಾಯಕನ ಸ್ಥಾನ ಬಿಟ್ಟರೆ ಮಾತ್ರ ಅನಂತೂವನ್ನು RSSನವರು ಅಧ್ಯಕ್ಷಗಾದಿಗೆ ತರುತ್ತಾರೆ. ಬಿಜೆಪಿಯ ಇತ್ತೀಚಿನ ವಿಳಂಬೀಳು ಗಮನಿಸಿರುವವರಿಗೆ ಅರ್ಥವಾಗಿರುವುದೇನೆಂದರೆ ಬಿಜೆಪಿ ಹಿಂದೂ ಸಿದ್ಧಾಂತ ಮಾತನಾಡಿದಷ್ಟೂ ಅದರ ಓಟ್‌ಬ್ಯಾಂಕ್ ಕರಗುವುದು ಹೆಚ್ಚಾಗುತ್ತಿದೆ. ಇನ್ನು ಅನಂತ್‌ಕುಮಾರ್‌ಗಾಗಲಿ, ಬೇರೆ ಯಾರೇ ಎರಡನೇ ಸಾಲಿನ ಲೀಡರ್‌ಗಳಾಗಲಿ ಕುಸಿದುಬೀಳುತ್ತಿರುವ ಬಿಜೆಪಿ ಸೌಧವನ್ನು ಮತ್ತೆ ಕಟ್ಟಬಲ್ಲರೆಂದು ಯಾರಿಗೂ ಅನಿಸುತ್ತಿಲ್ಲ.

ಅಲ್ಲಿನ ಒಳಜಗಳದ ತೀವ್ರತೆ ಅಷ್ಟಿದೆ. ನಾಳೆ ಅನಂತೂ ಬಿಜೆಪಿ ಅಧ್ಯಕ್ಷರಾದರೆ ಅಥವಾ ಆಗದಿದ್ದರೂ ಕೂಡ ಆ ವಿದ್ಯಮಾನದಲ್ಲೂ ಈಗಿನ ಒಳಜಗಳದ ಪ್ರಭಾವ ಇದ್ದೇ ಇರುತ್ತದೆ.


...ಗಳಂಥ ಬಿಜೆಪಿಯ ಮುದಿ ತಲೆ ಗಳನ್ನು, ತಮ್ಮ ...ತನ್ನು ಕೇಳದ ಉಢಾಳರನ್ನು ಕೆಳಗಿಳಿಸಿ ತಮ್ಮ ...ಯಂತೆ ವರ್ತಿಸುವ ಬಾಲಂಗೋಚಿ ಯುವಕ ರನ್ನು ...ಕತ್ವದಲ್ಲಿ ಪ್ರತಿಷ್ಠಾಪಿಸಲು ಹವಣಿಸುತ್ತಿದ್ದಾರೆ. ಅದು ...ಯ್ತೊಂದು ಬಿಜೆಪಿ-ಆರೆಸ್ಸೆಸ್ ಮಹಾಸಮರಕ್ಕೆ ...ವಾಗಬಹುದು.

...ಬಿಜೆಪಿ ಪರಿಸ್ಥಿತಿ ಎಷ್ಟೊಂದು ದಾರುಣವಾಗಿದೆ ...ವರೆ ಕೇವಲ ರಾಷ್ಟ್ರಮಟ್ಟದ ನಾಯಕರುಗಳಲ್ಲಿ ...ಷವಲ್ಲ ಬಿಜೆಪಿ ತುಸು ಶಕ್ತಿ ಹೊಂದಿರುವ ಎಲ್ಲಾ ...ಗಳಲ್ಲೂ ಕಿತ್ತಾಟ, ಒಳಜಗಳ, ಬಂಡಾಯಗಳು ಭುಗಿಲೆ... ಉತ್ತರಾಂಚಲ್‌ನಲ್ಲಿ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ...ರುವ ಬಿ.ಸಿ.ಖಂಡೂರಿ ವಿರುದ್ಧ ಮಾಜಿ ಮುಖ್ಯ...ತ್ರಿ ಹಾಗೂ ಬಿಜೆಪಿಯ ಹಿರಿಯ ರಾಜ ಕಾರಣಿ ...ತ್ ಸಿಂಗ್ ಕೋಶಿಯಾರಿಯವರು ...ಕಸಭಾ ಚುನಾವಣೆಗಳು ಮುಗಿಯು...ತೆಯೇ ಬಂಡಾಯದ ಬಾವುಟ ಹಾರಿಸಿ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರೂ ಲೋಕಸಭಾ ಚುನಾವಣೆಯಲ್ಲಿ ಒಂದೇ ...ಬ ಸೀಟು ಗಳಿಸಲು ವಿಫಲವಾಗಿದ್ದಕ್ಕೆ ...ಮಂತ್ರಿ ಖಂಡೂರಿಯೇ ನೇರ ಹೊಣೆ ...ಎನ್ನುತ್ತಾ ಅವರನ್ನು ಅಧಿಕಾರದಿಂದ ಇಳಿ...ಸಕ್ಕೆ ಗಲಾಟೆ ಎಬ್ಬಿಸಿದ್ದರು. ರಾಷ್ಟ್ರ ನಾಯಕರು ...ಜಗಳ ಬಿಡಿಸುವುದಕ್ಕೆ ಒಂದಿಷ್ಟು ...ತ್ನಪಟ್ಟರಾದರೂ ಅದು ಸಫಲವಾಗಿಲ್ಲ. ... ಹೊತ್ತಿಗೆ ರಾಷ್ಟ್ರನಾಯಕರಲ್ಲೇ ಕಿತ್ತಾಟ ...ಭವಾಗುವುದರೊಂದಿಗೆ ಉತ್ತರಾಂಚಲ ... ಬಿಕ್ಕಟ್ಟು ತಾರಕಕ್ಕೇರಿತು. ಅದಿನ್ನೂ ಒಳ...ಗೇ ಹೊಗೆಯಾಡುತ್ತಿದೆ.

...ನ್ನು ಬಿಜೆಪಿಯ ಭದ್ರನೆಲೆಯಾಗಿರುವ ...ರಾತ್‌ನಲ್ಲೂ ಪರಿಸ್ಥಿತಿ ಇದಕ್ಕಿಂತ ...ಗಿಯೇನೂ ಇಲ್ಲ. 2004ರ ಲೋಕಸಭಾ ...ವಣೆಯಲ್ಲಿ 21 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ...ಬಾರಿ ಕೇವಲ 14 ಸ್ಥಾನಗಳನ್ನಷ್ಟೇ ಗೆದ್ದಿದೆ. ... ಮುಂದಿಟ್ಟುಕೊಂಡು ಅತ್ಯಂತ ಕಳಪೆ ...ನ ತೋರಿದ ಮೋದಿಯ ವಿರುದ್ಧವೂ ...ಯುದ ಕಹಳೆ ಮೊಳಗುತ್ತಿತ್ತು. ಪಕ್ಷದ 127 ಎಮ್ಮೆಲ್ಲೆಗಳಲ್ಲಿ ಸುಮಾರು ಅರ್ಧದಷ್ಟು ಎಮ್ಮೆಲ್ಲೆ ಸೋಲಂಕಿ ನೇತೃತ್ವದಲ್ಲಿ ಮೋದಿಯ ...ದ್ಧ ಬಹಿರಂಗ ಸಮರಕ್ಕಿಳಿದಿದ್ದಾರೆ. ಮೋದಿಯನ್ನು ... ಮಂತ್ರಿ ಸ್ಥಾನದಿಂದ ಕೆಳಗಿಳಿಸುವವರೆಗೂ ತಮ್ಮ ...ಾಯ ವನ್ನು ಮುಂದುವರೆಸುವುದಾಗಿ ...ಟ್ಟಿದ್ದಾರೆ. ಈ ವಿಚಾರದಲ್ಲಿ ರಾಷ್ಟ್ರ ನಾಯಕತ್ವವೂ ...ವಾಗಿದ್ದು ಒಂದು ಬಣ ಸೋಲಂಕಿಯ ಪರವಹಿಂಸಿದರೆ ...ಂದು ಬಣ ಮೋದಿ ಹಿಂದೆ ನಿಂತಿದೆ. ಸದ್ಯಕ್ಕೆ ... ಶಮನವಾದಂತೆ ಕಾಣುತ್ತಿದೆಯಾದರೂ ಒಳಗೆ ...ಯನ್ನೂ ಆರಿಲ್ಲ.

...ನ್ನು ಒಳಜಗಳದಲ್ಲಿ ರಾಜಸ್ತಾನ್ ಬಿಜೆಪಿಯೇನೂ ...ಯಿಲ್ಲ, ಉಳಿದೆಲ್ಲ ರಾಜ್ಯಗಳಿಗಿಂತ ಮೊದಲೇ ...ನ್ ಬಿಜೆಪಿಯಲ್ಲಿ ಬಂಡಾಯ ಭುಗಿಲೆದ್ದಿತ್ತು, ಕಳೆದ ...ಸಭಾ ಚುನಾವಣೆಯಲ್ಲಿ ವಸುಂಧರಾ ರಾಜೇ ...ತ್ವದ ರಾಜ್ಯ ಬಿಜೆಪಿ ಘಟಕ ಹೀನಾಯವಾಗಿ [illegible] ರಾಜೇ ವಿರುದ್ಧ ಬಂಡಾಯ ...ದ್ದಿತ್ತು, ಆಮೇಲೆ ಲೋಕಸಭಾ ಚುನಾವಣೆಯ ...ದಲ್ಲಿ [illegible] ಹಿರಿಯ ಬಿಜೆಪಿ ನಾಯಕ ಹಾಗೂ ... ಉಪರಾಷ್ಟ್ರಪತಿ ಭೈರೋನ್ ಸಿಂಗ್ ಶೇಖಾವತ್ [illegible] ನಾನೇ ಎಲ್ಲರಿಗಿಂತ ಸೀನಿಯರ್. ಬಿಜೆಪಿ ...ಕ್ಕೆ [illegible] ನಾನೇಕೆ ಸ್ಪರ್ಧಾಳುವಾಗಬಾರದು?' ... ಬಹಿರಂಗವಾಗಿ ಸವಾಲು ಹಾಕುವ ಮೂಲಕ [illegible] ಅಧ್ಯಾಯ [illegible] ... ಈಗ ವಸುಂಧರಾ ರಾಜೆ ವಿರೋಧ ಪಕ್ಷದ







ನಾಯಕಿಯ ಸ್ಥಾನ ಬಿಟ್ಟುಕೊಡಬೇಕೆಂದು ರಾಜ್ಯ, ರಾಷ್ಟ್ರ ಮಟ್ಟದ ಬಿಜೆಪಿ ನಾಯಕರು ಆಕೆಯ ಮೇಲೆ ಒತ್ತಡ ಹೇರುತ್ತಿದ್ದರೆ ಅದಕ್ಕೆ ಅವಳು ಕ್ಯಾರೆ ಎನ್ನುತ್ತಿಲ್ಲ. ಹೀಗಾಗಿ, ಸದ್ಯದಲ್ಲಿ ವಸುಂಧರೆಯೂ ತಲೆದಂಡ ಕೊಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹಾಗೇನಾದರೂ ಮಾಡಿದರೆ ವಸುಂಧರಾ ರಾಜೆ ತನ್ನೊಂದಿಗಿರುವ ಎಮ್ಮೆಲ್ಲೆಗಳನ್ನು ಕಟ್ಟಿಕೊಂಡು ಹೊಸ ಪಕ್ಷ ರಚಿಸಿಕೊಂಡರೂ ಆಶ್ಚರ್ಯವಿಲ್ಲ. ಅದರ ಅರಿವು ಬಿಜೆಪಿ ನಾಯಕರಿಗೂ ಇದ್ದೇ ಇದೆ. ಈಗಾಗಲೇ ಜಸ್ವಂತ್‌ಸಿಂಗ್ ಅವರ ಉಚ್ಚಾಟನೆಯಿಂದ ಉಲ್ಬಣಗೊಂಡಿರುವ ಬಿಕ್ಕಟ್ಟನ್ನು ಶಮನ ಮಾಡುವುದರಲ್ಲೇ ರಾಷ್ಟ್ರನಾಯಕರು ಸುಸ್ತಾಗಿರುವುದರಿಂದ ಸದ್ಯಕ್ಕೆ ವಸುಂಧರಾ ರಾಜೆಯ ಕುರ್ಚಿಗೆ ಕೈ ಹಾಕುವ ದುಸ್ಸಾಹಸ ಮಾಡುತ್ತಿಲ್ಲ. ಅಂದಮಾತ್ರಕ್ಕೆ ರಾಜಸ್ತಾನದಲ್ಲಿ ಒಳಜಗಳ ಶಮನವಾಗಿದೆಯೆಂದೇನೂ ಅಲ್ಲ. ಯಾವ ಕ್ಷಣದಲ್ಲಿ ಬೇಕಾದರೂ ಮತ್ತೆ ಭುಗಿಲೇಳಬಹುದು.

ಒರಿಸ್ಸಾದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೀನಾಯವಾಗಿ ಸೋಲುಂಡ ಕಾರಣ ಅಲ್ಲೂ ಬಂಡಾಯದ ಬಿಸಿ ಏರಿತು. ಒಟ್ಟು 147 ವಿಧಾನಸಭಾ ಸ್ಥಾನಗಳಲ್ಲಿ 145 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಇಳಿಸಿದ್ದು ಅವರಲ್ಲಿ ಗೆದ್ದವರು ಕೇವಲ 13 ಜನ. ಇನ್ನೂ ಅವಮಾನಕಾರಿ ಸಂಗತಿಯೆಂದರೆ 88 ಕ್ಯಾಂಡಿಡೇಟ್‌ಗಳು ಠೇವಣಿಯನ್ನೂ ಕಳೆದುಕೊಂಡರೆ ಲೋಕಸಭೆಗೆ ನಿಂತಿದ್ದ ಎಲ್ಲಾ ಕ್ಯಾಂಡಿಡೇಟ್‌ಗಳು ಹೀನಾಯವಾಗಿ ಸೋಲುಂಡರು. ಫಲಿತಾಂಶಗಳು ಹೊರಬೀಳುತ್ತಿದ್ದಂತೆ ರಾಷ್ಟ್ರ ನಾಯಕರು ರಾಜ್ಯ ನಾಯಕರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರೆ ರಾಜ್ಯ ನಾಯಕರು ಬಿಜೆಡಿಯೊಂದಿಗೆ ಮೈತ್ರಿ ಮುರಿದುಕೊಂಡದ್ದು, ಚುನಾವಣೆಯ ಸಿದ್ಧತೆಗೆ ಸಾಕಷ್ಟು ಸಮಯ ನೀಡದಿದ್ದುದು ರಾಷ್ಟ್ರನಾಯಕರ ತಪ್ಪು ಎಂದು ತಿರುಗೇಟು ನೀಡಿದರು. ಅಂದು ಶುರುವಾದ ರಾಜ್ಯ-ರಾಷ್ಟ್ರ ನಾಯಕರ ನಡುವಿನ ಕಿತ್ತಾಟ ಇನ್ನೂ ನಿಂತಿಲ್ಲ. ಅಷ್ಟೇ ಅಲ್ಲ ರಾಜ್ಯದೊಳಗೇ ಬಿಜೆಪಿಯ ಮಾಜಿ ಮಂತ್ರಿ ಜಯನಾರಾಯಣ್ ಮಿಶ್ರ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ಸುರೇಶ್ ಪೂಜಾರಿ ನಡುವೆಯೂ ಗುದ್ದಾಟ ಪ್ರಾರಂಭವಾಗಿದ್ದು ರಾಜ್ಯ ನಾಯಕತ್ವವನ್ನು ಬದಲಿಸಬೇಕೆಂಬ ಕೂಗು ದಟ್ಟವಾಗಿ ಕೇಳಿಬರುತ್ತಿದೆ. ಇನ್ನೊಂದೆಡೆಗೆ ಮಾಜಿ ಎಮ್ಮೆಲ್ಲೆ ಭರತ್ ಪಾಯಿಕ್ ಆದಿಯಾಗಿ ಹಲವಾರು ಬಿಜೆಪಿ ನಾಯಕರು ರಾಜ್ಯ ನಾಯಕತ್ವದ ವಿರುದ್ಧ ಬಂಡಾಯವೆದ್ದು ಬೇರೆ ಬೇರೆ ಪಕ್ಷಗಳಿಗೆ ತಂಡೋಪತಂಡವಾಗಿ ವಲಸೆ ಹೋಗಿ ಪಕ್ಷವನ್ನು ಮತ್ತಷ್ಟು ದುರ್ಬಲಗೊಳಿಸಿದ್ದಾರೆ.

ಇನ್ನು ಕರ್ನಾಟಕದಲ್ಲಿ ಯಡಿಯೂರಪ್ಪನ ವಿರುದ್ಧ ಒಂದು ಕಡೆಯಿಂದ ಕೆ.ಎಸ್.ಈಶ್ವರಪ್ಪ, ಮತ್ತೊಂದು ಕಡೆಯಿಂದ ರೆಡ್ಡಿ ಬ್ರದರ್ಸ್, ಮಗದೊಂದು ಕಡೆಯಿಂದ ಅನಂತಕುಮಾರ್ ಅಮರಿಕೊಂಡು ದೊಡ್ಡ ದಾಂಧಲೆಯನ್ನೇ ಎಬ್ಬಿಸಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಕರ್ನಾಟಕ ಬಿಜೆಪಿ ಜಗಳವನ್ನು ಕುರಿತು ಬರೆಯುತ್ತಾ ಹೋದರೆ ಅದೇ ಒಂದು ಉದ್ಗ್ರಂಥವಾಗುತ್ತದೆ.

ಸಾರಾಂಶದಲ್ಲಿ ಹೇಳುವುದಾದರೆ ಅರಳಿದ ಕಮಲದ ದಳಗಳು ಒಂದೊಂದಾಗಿ ಉದುರಿಬೀಳುತ್ತಿವೆ. ಕೆಲವಂತೂ ಅಕಾಲಿಕ ಗರ್ಭಪಾತದಂತೆ ಕಳಚಿ ಬೀಳುತ್ತಿವೆ. ಭವಿಷ್ಯದಲ್ಲಿ ಇನ್ನಷ್ಟು ತಲೆಗಳು ಉರುಳುವ ಸಾಧ್ಯತೆ ಜಾಸ್ತಿಯಿದೆ. ಸದ್ಯಕ್ಕೆ ಬಿಜೆಪಿ ಚೇತರಿಸಿಕೊಳ್ಳುವ ಲಕ್ಷಣಗಳು ಕಾಣುತ್ತಿಲ್ಲ. ಅದೊಂದು ರೀತಿಯಲ್ಲಿ ಭರತಖಂಡದ ಶಾಂತಿ-ಸೌಹಾರ್ದಪ್ರಿಯ ಜನಸಮುದಾಯಕ್ಕೆ ಒಳ್ಳೆಯದೆ ಬಿಡಿ.

ಶ್ರೀಲಂಕಾ ತಮಿಳರಿಗೆ ಕಂಡಲ್ಲಿ ಗುಂಡು!



ಈ ಕುರಿತು ಹೆಚ್ಚು ಬರೆಯುವ ಅಗತ್ಯವೇ ಇಲ್ಲ. ಇಲ್ಲಿರುವ ಫೋಟೊಗಳೇ ಎಲ್ಲಾ ಕತೆ ಹೇಳುತ್ತವೆ. ಶ್ರೀಲಂಕಾದ ಮಹಿಂದ ರಾಜಪಕ್ಸೆಯ ಸರ್ಕಾರಿ ಸೈನಿಕರು ಕಣ್ಣಿಗೆ ಬೀಳುವ ಪ್ರತಿ ತಮಿಳು ಯುವಕರನ್ನು ಸೆರೆ ಹಿಡಿದು, ನಿರ್ಜನ ಪ್ರದೇಶಕ್ಕೆ ಎಳೆದೊಯ್ದು, ಕಣ್ಣಿಗೆ ಬಟ್ಟೆ ಕಟ್ಟಿ, ಕೈಗಳನ್ನು ಕಟ್ಟಿ ಹಾಕಿ, ನೆಲಕ್ಕೆ ಕೆಡವಿ ಗುಂಡಿಟ್ಟು ಕೊಂದು ಬಿಸಾಡುತ್ತಿದ್ದಾರೆ. ಹಾಗೆ ಹತ್ಯೆಯಾದವರ ಶವಗಳು ಏನಾದವೆಂಬುದೇ ಗೊತ್ತಾಗುತ್ತಿಲ್ಲ.

ಶ್ರೀಲಂಕಾದಲ್ಲಿರುವ ತಮಿಳು ನಿರಾಶ್ರಿತರ ಶಿಬಿರಗಳಿಂದ ಪ್ರತಿದಿನ 50ರಿಂದ 300 ಯುವಕರು ಇದೇ ರೀತಿ 'ನಾಪತ್ತೆಯಾಗಿ' ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ಭಯೋತ್ಪಾದನೆ ಅಂದರೆ ಏನು? ಭಯೋತ್ಪಾದಕರೆಂದರೆ ಯಾರೆಂಬುದು ಈಗ ಗೊತ್ತಾಗುವುದಿಲ್ಲವೆ?

ಕಳೆದ ಜನವರಿಯಲ್ಲಿ ಸೆರೆ ಹಿಡಿಯಲಾದ ಈ ಭಯಾನಕ ದೃಶ್ಯಗಳ ವೀಡಿಯೋ http://www.youtube.com/watch?v=gOpyfUR5uR0 URL ನಲ್ಲಿ ಲಭ್ಯವಿದೆ. ಅದರಲ್ಲಿ ಅಮಾಯಕ ತಮಿಳು ಯುವಕರನ್ನು ಬೆತ್ತಲೆಗೊಳಿಸಿ ನಿರ್ದಾಕ್ಷಿಣ್ಯವಾಗಿ ಕೊಲ್ಲುತ್ತಿರುವ ಸೈನಿಕರು ಕಾಣಿಸುತ್ತಾರಲ್ಲದೆ, ಹಾಗೆ ಗುಂಡು ಹಾರಿಸಿ ಕೊಲ್ಲುವಾಗಲೂ ಅವರೆಲ್ಲ ಸಿಂಹಳೀಯ ಭಾಷೆಯಲ್ಲಿ ಮಾತನಾಡುತ್ತಿರುವುದು ಮತ್ತು ಆಟವಾಡುವ ಯುವಕರಂತೆ ನಗುತ್ತಿರುವುದು ಸ್ಪಷ್ಟವಾಗಿ ಕೇಳಿಸುತ್ತದೆ. ಅಷ್ಟೇ ಅಲ್ಲ, ಇದೇ ವೀಡಿಯೋದಲ್ಲಿ ಹೀಗೆ ಬೆತ್ತಲಾಗಿ ಬಿದ್ದಿರುವ ಹತ್ತಾರು ಜನರ ಶವಗಳೂ ಕಾಣಿಸುತ್ತವೆ.


ಈ ವೀಡಿಯೋ ಅನ್ನು ಈಗ ಇಂಗ್ಲೆಂಡಿನಲ್ಲಿ ನೆಲೆಸಿರುವ ಶ್ರೀಲಂಕಾ ಮೂಲದ ತಮಿಳು ಮತ್ತು ಸಿಂಹಳೀಯ ಪತ್ರಕರ್ತರು ಹೊರಗೆಡವಿದ್ದು ಶ್ರೀಲಂಕಾ ಸರ್ಕಾರ ನಡೆಸುತ್ತಿರುವ ಈ ಮಾರಣಹೋಮದ ವಿರುದ್ಧ ಅಂತರರಾಷ್ಟ್ರೀಯ ತನಿಖೆ ನಡೆಯಬೇಕೆಂದು ಒತ್ತಾಯಿಸುತ್ತಿದ್ದಾರೆ.

ಆದರೆ ರಾಜಪಕ್ಸೆಯ ಸರ್ಕಾರ ಮಾತ್ರ ಈ ಭೀಭತ್ಸ ವೀಡಿಯೋ ನಿಜವಾದದ್ದಲ್ಲ ಎಂದು ಭಂಡ ವಾದ ಮಾಡುತ್ತಿದೆ.





ಹಾವೇರಿ ಕಾಗಿನೆಲೆ ಕರ್ಮಕಾಂಡ
ಬಡವರ ಮೇಲೆ ಬಿಜೆಪಿ ಗೂಂಡಾಗಿರಿ








ಕನಕದಾಸರ ಕರ್ಮಭೂಮಿ ಕಾಗಿನೆಲೆಯನ್ನು ಅಭಿವೃದ್ಧಿಗೊಳಿಸುವ ಭರಾಟೆಯಲ್ಲಿ ಅಲ್ಲಿನ ಬಡಕುಟುಂಬಗಳನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಇತ್ತೀಚೆಗಷ್ಟೇ 28 ಕುಟುಂಬಗಳನ್ನು ಏಕಾಏಕಿ ಒಕ್ಕಲೆಬ್ಬಿಸಿ ಜನವಸತಿಯೇ ಇರದ ಕಾಗಿನೆಲೆ ಗುಡ್ಡಕ್ಕೆ ಅಟ್ಟಲಾಗಿದೆ. ಆಯ್ತು, ಕಾಗಿನೆಲೆ ಅಭಿವೃದ್ಧಿ ಮಾಡಲಿ, ಆದರೆ ಒಕ್ಕಲೆಬ್ಬಿಸುವ ಮುನ್ನ ಪುನರ್‌ವಸತಿಯ ಸೌಲಭ್ಯ ಕಲ್ಪಿಸುವ ಕನಿಷ್ಠ ಮಾನವೀಯತೆಯೂ ಇಲ್ಲವಾಗಿದೆ ಈ ಬಿಜೆಪಿ ಸರ್ಕಾರಕ್ಕೆ. ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಸಿ.ಎಂ. ಉದಾಸಿಗೆ ಇಂಥದ್ದು ಕಣ್ಣಿಗೆ ಕಾಣುವುದಿಲ್ಲ, ಏಕೆಂದರೆ ಕಣ್ಣುಗಳಿಗೆ ಹಣದ ಪೊರೆ ಆವರಿಸಿಬಿಟ್ಟಿದೆ. ದೇವಸ್ಥಾನಗಳ ಜೀರ್ಣೋದ್ಧಾರ ಕೆಲಸದಲ್ಲಿ 'ಎಕ್ಸ್‌ಪರ್ಟ್' ಎಂಬ ಬಿರುದು ಗಳಿಸಲು ಆತುರರಾಗಿರುವಂತೆ ಕಾಣುತ್ತಿರುವ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಅಧಿಕಾರಿ ಶಿವಾನಂದ ಜಾಮದಾರ ಸಾಹೇಬರಿಗೆ ಬಡವರ ಧ್ವನಿ ಕೇಳುವುದೇ ಇಲ್ಲ. ಹೀಗಾಗಿ ಕಾಗಿನೆಲೆ ಗುಡ್ಡದ ಕಾಡಿಗೆ ಅಟ್ಟಲ್ಪಟ್ಟ ಬಡವರ ಕೂಗು ಸದ್ಯಕ್ಕಿಲ್ಲಿ ಅರಣ್ಯರೋದನವಾಗುತ್ತದೆ.









ಶೈವಪರಂಪರೆಯ ಪರ ಹೋರಾಡಿ ಸಾಮರಸ್ಯ ಮೂಡಿಸಿದ ಕನಕನ ನೆಲದಲ್ಲಿಂದು ವೈದಿಕಶಾಹಿ ಬಿಜೆಪಿ ನಡೆಸುತ್ತಿರುವ ಗೂಂಡಾಗಿರಿ ಇದು. ಕುರುಬ ಜನಾಂಗದ ಮತಬ್ಯಾಂಕ್ ಒಲವು ಪಡೆಯಲೆಂದು ಸಚಿವ ಈಶ್ವರಪ್ಪ ಸಿ.ಎಂ. ಯಡಿಯೂರಪ್ಪ ಪ್ರದರ್ಶಿಸುತ್ತಿರುವ ಆತುರದಿಂದಾಗಿ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಆಡಿದ್ದೇ ಆಟ ಎನ್ನುವಂತಾಗಿಬಿಟ್ಟಿದೆ. ಆದೀಗ ಇಲ್ಲಿನ ಜನರ ಪಾಲಿಗೆ ಗೂಂಡಾ ಪ್ರಾಧಿಕಾರವಾಗಿ ಕಾಣುತ್ತಿದೆ.

ಧರ್ಮಸಿಂಗ್ ಅಧಿಕಾರಾವಧಿಯಲ್ಲಿ ಸಿದ್ದರಾಮಯ್ಯ ವಿಶೇಷ ಆಸಕ್ತಿ ವಹಿಸಿ ಕನಕದಾಸರ ನೆನಪು ಇತಿಹಾಸಗಳು ಅಜರಾಮರವಾಗಿ ಉಳಿಯಲಿ ಎಂಬ ಆಶಯದಿಂದ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಚಾಲನೆ ಕೊಟ್ಟರು. ಕಾಗಿನೆಲೆ ಅಭಿವೃದ್ಧಿಗಾಗಿ ಮನೆ ಕಳೆದುಕೊಳ್ಳಲಿರುವ ಎಲ್ಲ ಬಡಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿ, ಕನಕದಾಸರ ಸಮಾಧಿ ಸ್ಥಳವನ್ನು ಐಕ್ಯಮಂಟಪವನ್ನಾಗಿ ಪರಿವರ್ತಿಸುವುದು ಸಿದ್ದರಾಮಯ್ಯನವರ ಗುರಿಯಾಗಿತ್ತು, ಪರ್ಯಾಯ ವಸತಿ ವ್ಯವಸ್ಥೆಯ ನಂತರವೇ ಅಲ್ಲಿ ಮುಂದಿನ ಅಭಿವೃದ್ಧಿ ಕಾರ್ಯ ಎಂಬ ಅವರ ಯೋಜನೆಗೆ ಜನ ಬೆಂಬಲವೂ ಸಿಕ್ಕಿತ್ತು, ಆದರೆ ಮುಂದೆ ಧರಂ ಸರ್ಕಾರ ನೆಲಕ್ಕುರುಳಿದಾಗ ಸಿದ್ದರಾಮಯ್ಯರ ಯೋಚನೆ, ಯೋಜನೆಗಳೂ ಮಣ್ಣುಪಾಲಾದವು.

ಮುಂದೆ ಜೆಡಿಎಸ್-ಬಿಜೆಪಿ ಆಡಳಿತದ ಅವಧಿಯಲ್ಲಿ ಹೇಗಾದರೂ ಸರಿ ತಾನು ಕುರುಬರ ನಾಯಕ ಅನ್ನಿಸಿಕೊಳ್ಳಬೇಕು ಎಂದು ಹಗಲು ರಾತ್ರಿ ಹಲುಬುವ ಕೆ.ಎಸ್.ಈಶ್ವರಪ್ಪ ಕಾಗಿನೆಲೆ ಅಭಿವೃದ್ಧಿಯ ಕಡೆ ಕಣ್ಣುಹಾಕಿದರು. ಆಗಲೇ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಮತ್ತೆ ಚಾಲನೆ ದೊರಕಿತು. ಉಸ್ತುವಾರಿ ಮಂತ್ರಿ ಉದಾಸಿಯ ಜಾತಿ ಪ್ರೇಮದ ಕಾರಣಕ್ಕಾಗಿಯೇ ಏನೋ ಈ ಪ್ರಾಧಿಕಾರದ ವಿಶೇಷ ಅಧಿಕಾರಿಯಾಗಿ ವಕ್ಕರಿಸಿದರು ಐಎಎಸ್ ಶಿವಾನಂದ ಜಾಮದಾರ್. ಮೈಮನಗಳಿಗೆ ಸೊಕ್ಕನ್ನೇ ಸುತ್ತಿಕೊಂಡಿರುವ ರಾಕ್ಷಸ ಕೆ. ರೇವಣ್ಣಪ್ಪ ಎಂಬಾತ ಆಯುಕ್ತನಾಗಿ ನೇಮಕಗೊಂಡ. ತರಾತುರಿಯಲ್ಲಿ ಬಿಲ್ಡಿಂಗ್‌ಗಳು ಏಳಬೇಕು ಎನ್ನುವ ಪಾಲಿಸಿ ರೂಪಿಸಿಕೊಂಡ ಪ್ರಾಧಿಕಾರಕ್ಕೆ ಮಾನವೀಯತೆಯ ಗಾಳಿಯೂ ತಾಕದಂತಾಗಿದ್ದರ ಫಲವೇ ಬಡಕುಟುಂಬಗಳ ಎತ್ತಂಗಡಿ.

ಈಗ ಪುನರ್‌ವಸತಿಯ ಸೌಲಭ್ಯವಿಲ್ಲದೇ ಎತ್ತಂಗಡಿಯಾಗಿ, ಕಾಗಿನೆಲೆಯಿಂದ 2 ಕಿ.ಮೀ. ದೂರದ ಗುಡ್ಡದಲ್ಲಿ ಕುಡಿಯುವ ನೀರೂ ಲಭ್ಯವಿಲ್ಲದೇ ಒದ್ದಾಡುತ್ತಿರುವ ಕುಟುಂಬಗಳಲ್ಲಿ ಬಹುತೇಕ ಕುಟುಂಬಗಳು ಮುಸ್ಲಿಮರವು. ಇನ್ನುಳಿದಂತೆ ಹಿಂದುಳಿದ ವರ್ಗಗಳ ಕುಟುಂಬಗಳು ಇಲ್ಲಿವೆ. ಇವರೆಲ್ಲ ಅಂದು ದುಡಿದು ಅಂದಿನ ಅನ್ನ ಸಂಪಾದಿಸುವವರು. ಇಂತಹ ಕಡುಬಡವರನ್ನು ಬೀದಿಪಾಲು ಮಾಡಿ ಕಾಗಿನೆಲೆ ಅಭಿವೃದ್ಧಿ ಮಾಡಿದರೆ ಕನಕದಾಸರೂ ಮೆಚ್ಚಲಾರರು.

ಹಕ್ಕುಪತ್ರಕ್ಕೂ ಬೆಲೆಯಿಲ್ಲ

ಈಗ ಎತ್ತಂಗಡಿಯಾಗಿರುವ ಕುಟುಂಬಗಳಿಗೆ 1992ರಲ್ಲಿ ಬಂಗಾರಪ್ಪ ಸರ್ಕಾರವು ಆಶ್ರಯ ಯೋಜನೆಯಡಿ ಮನೆಗಳನ್ನು ನಿರ್ಮಿಸಿಕೊಟ್ಟು, ಹಕ್ಕುಪತ್ರಗಳನ್ನು ನೀಡಿತ್ತು. ಇಲ್ಲಿಯವರೆಗೆ ತಲೆಮೇಲೊಂದು ಸೂರು ಇದೆ ಎಂಬ ಧೈರ್ಯದಲ್ಲಿ ಬದುಕುತ್ತಿದ್ದ ಈ ಕುಟುಂಬಗಳೀಗ ಒಮ್ಮಿಂದೊಮ್ಮೆಲೇ ಬೀದಿಗೆ ಬೀಳುವಂತೆ ಮಾಡಿದೆ ಕಾಗಿನೆಲೆ ಪ್ರಾಧಿಕಾರ. ಅಷ್ಟಕ್ಕೂ ಈ ಜಾಗದಲ್ಲೇನೂ ಕನಕದಾಸರಿಗೆ ಸಂಬಂಧಿಸಿದ ಪ್ರಮುಖ ಐತಿಹ್ಯಗಳೂ ಇಲ್ಲ, ಇಲ್ಲೊಂದು ಪಾಳುಬಿದ್ದ ಗುಡಿಯಿದೆ. ಆದೀಗ ಹೆಚ್ಚೂಕಡಿಮೆ ನೆಲಸಮವಾಗಿದ್ದು ಅಲ್ಲಿ ಕಾಣುವುದು ಬರೀ ಮಣ್ಣಿನ ದಿಣ್ಣೆ. ಜಾಮದಾರರ ಸಂಶೋಧನೆ ಪ್ರಕಾರ ಅದು ಚನ್ನಕೇಶವ ದೇವಾಲಯವಂತೆ. ಆಯ್ತು ಅದನ್ನಿವರು ಐತಿಹಾಸಿಕ ಸ್ಮಾರಕ ಮಾಡಲಿ, ಆದರೆ ಅವರು ಬಡವರನ್ನು ಬಿಸಿಲಲ್ಲಿ ನಿಲ್ಲಿಸಿ ಈ ಕೆಲಸಗಳನ್ನು ಮಾಡುತ್ತಿರುವುದೇಕೆ? ಅವರಿಗೆ ಪುನರ್‌ವಸತಿ ಸೌಲಭ್ಯ ನೀಡುವವರೆಗೂ ಕಾಯ್ದಿದ್ದರೆ ಕನಕದಾಸರು ಶಾಪ ಕೊಡುತ್ತಿದ್ದರಾ?

ಪ್ರಾಧಿಕಾರ ದಿಢೀರನೆ 'ಜಾಗ ಖಾಲಿ ಮಾಡಿ' ಎಂಬ ನೋಟೀಸ್ ಕೊಟ್ಟ ಕೂಡಲೇ ಈ ಕುಟುಂಬಗಳು ಬೆಚ್ಚಿಬಿದ್ದಿದ್ದವು. ಆಗ ಇವರ ಪ್ರತಿಭಟನೆಗೆ ಕಾಂಗ್ರೆಸ್ಸಿನ ಸಲೀಂ ಅಹ್ಮದ್, ಮಾಜಿ ಮಂತ್ರಿ ಶಿವಣ್ಣನವರ್ ಬೆಂಬಲ ನೀಡಿದ್ದರು. ಆದರೆ ಹಠಕ್ಕೆ ಬಿದ್ದ ಬಿಜೆಪಿಗಳು ಬುಲ್ಡೋಜರ್‌ಗಳಿಂದ ಬಡವರ ಮನೆಗಳನ್ನು ನೆಲಸಮ ಮಾಡಿಬಿಟ್ಟರು. ಪ್ರಾಧಿಕಾರದ ಆಯುಕ್ತ ರೇವಣ್ಣಪ್ಪನಿಗೆ ಅರ್ಜೆಂಟಾಗಿ ಕಾಗಿನೆಲೆ ಅಭಿವೃದ್ಧಿ ಆಗಬೇಕು. ಅಂದರೆ ತಾನೇ ಇವನ ಕಿಸೆ ತುಂಬುವುದು?

ಪ್ರಾಧಿಕಾರದ ಕಚೇರಿ ನಿರ್ಮಾಣಕ್ಕೆಂದು ಕಳೆದ ವರ್ಷವೂ ಕಾಗಿನೆಲೆ ಗ್ರಾಮದ ಹೊರವಲಯದಲ್ಲಿ ವಾಸವಾಗಿದ್ದ 65 ಕುಟುಂಬಗಳನ್ನು ಎತ್ತಂಗಡಿ ಮಾಡಿದ್ದರು ಜಾಮದಾರ್ ಸಾಹೇಬರು. ಈಗ ಮತ್ತೆ 28 ಕುಟುಂಬಗಳಿಗೆ 'ಗತಿ' ಕಾಣಿಸಿದ್ದಾರೆ. ಇಂಥದ್ದೆಲ್ಲ ಗೊತ್ತೇ ಇಲ್ಲ ಎನ್ನುವಂತೆ ತಿರುಗುತ್ತಿದ್ದಾನೆ ಶಾಸಕ ಸುರೇಶಗೌಡ ಪಾಟೀಲ್. ಈಗ ಮೊದಲ ಹಂತವಾಗಿ ಮೊನ್ನೆ ಸುರಿದ ಮಳೆಗೆ ಕಾಮಗಾರಿ ಹಂತದಲ್ಲಿದ್ದ ಸಭಾಭವನ ಕುಸಿದುಹೋಗಿದೆ. ಅಷ್ಟು ಕಳಪೆ ಕಾಮಗಾರಿ ಇಲ್ಲಿ ನಡೆದಿದೆ. ಮಹಾದ್ವಾರ, ಕನಕ ಗದ್ದುಗೆ, ದ್ವಿಮುಖ ರಸ್ತೆ, ಆಡಳಿತ ಕಚೇರಿ ಎಂದು ಐದು ಕಾಮಗಾರಿಗಳನ್ನು ಆರಂಭಿಸಿದ್ದಾರೆ. ಈಗಾಗಲೇ ನೆಲೆ ಕಳೆದುಕೊಂಡ ಕುಟುಂಬಗಳ ಸಂಖ್ಯೆ 93ಕ್ಕೆ ಏರಿದೆ. ಬರಲಿರುವ ದಿನಗಳಲ್ಲಿ ಕಾಗಿನೆಲೆಯ ಸುತ್ತಮುತ್ತ ಜನವಸತಿಯೇ ಇಲ್ಲವಾಗಬಹುದು. ಏಕೆಂದರೆ ಎತ್ತಂಗಡಿ ಮಾಡುವುದರಲ್ಲೇ ವಿಕೃತ ಖುಷಿ ಅನುಭವಿಸುತ್ತಿದೆ ಪ್ರಾಧಿಕಾರ.

ಮಗನನ್ನು ಎಂ.ಪಿ. ಮಾಡಲು ಹರಸಾಹಸ ಮಾಡುವ ಮಂತ್ರಿ ಸಿ.ಎಂ.ಉದಾಸಿಗೆ ತನಗೆ, ತನ್ಮಗನಿಗೆ ಓಟು ಕೊಟ್ಟವರ ಗೋಳು ಮಾತ್ರ ಕೇಳಿಸುವುದಿಲ್ಲ.

● ಹುರುಳಿಕುಪ್ಪಿ ವಿನಯ್

ಕುಣಿಗಲ್‌ನಲ್ಲೊಬ್ಬ 'ನಾತ' ಬಾಯಿಯ ಸರ್ಕಲ್ ಇನ್ಸ್‌ಪೆಕ್ಟರ್!

ಬುದ್ಧಿವಂತರು ತಾವು ಮೋಸ ಹೋಗುವುದಿಲ್ಲ ಎಂಬುದಕ್ಕೆ "ನಾವು ಕುಣಿಗಲ್‌ನಿಂದ ಬಂದಿಲ್ಲ" ಎಂದು ಮೂದಲಿಸುವ ರೂಢಿಗತ ಮಾತೊಂದಿದೆ. ಕುಣಿಗಲ್‌ನ ಜನ ಮೋಸ ಹೋಗುವ ದಡ್ಡರೇನಲ್ಲ, ಹಾಗೆ ಮೋಸ ಹೋಗದ ಜನರಿಗೆ ದಾಸವಾಳದ ಹೂ ಇಡಲು ವಕ್ಕರಿಸಿಕೊಂಡವನೇ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಕೆ. ಶೇಖರ್. ಈ ಮಹಾಶಯ ಕುಣಿಗಲ್‌ಗೆ ವಕ್ಕರಿಸಿ ಎರಡು ವರ್ಷಗಳೇ ಕಳೆದಿವೆ. ಆದರೆ ಈತನ ಆಟಾಟೋಪ 'ದೊಡ್ಡ ಕುಣಿಗಲ್ ಕೆರೆ'ಗೂ ಮಿಗಿಲು. ಮುದ್ದು ಮೊಗದ ಬುದ್ದು ಥರಾ ಕಾಣುವ ಇನ್ಸ್‌ಪೆಕ್ಟರ್ ಶೇಖರ್ ಹಾಲುಗಲ್ಲದ ಅಮಾಯಕನಂತೆ ಕಂಡುಬರುವುದು ಅವನ ತಪ್ಪಲ್ಲ, ಸದ್ಯ ಕುಣಿಗಲ್‌ನ ಜನ ಬಿ.ಕೆ. ಶೇಖರ್‌ನನ್ನು 'ಬಿ.ಪಿ' ಶೇಖರ್ ಎಂದೇ ಕರೆಯುತ್ತಿದ್ದಾರೆ. ಕಾರಣ ಕೋಪ, ದರ್ಪ, ದಾರ್ಷ್ಟ್ಯ, ಗರ್ವ, ದುರಹಂಕಾರ ಎಲ್ಲವನ್ನೂ ಮೀರಿನಿಂತ ಮಹಾಘೋರ-ಚೋರ.



ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಹೋಬಳಿಯ ಇಪ್ಪಾಡಿ ಗ್ರಾಮದ ವಿ. ಶಿವಣ್ಣ ಎಂಬುವವರು ತಮ್ಮ ಸ್ವಯಾರ್ಜಿತವಾದ ಆಸ್ತಿಯನ್ನು ಸೋದರ ಮಾವ ನಂಜಯ್ಯನವರ ಮಗ ನಾರಾಯಣಯ್ಯ ಎಂಬುವವರಿಗೆ 5-7-1993ರಲ್ಲಿ ಸರ್ವೆ ನಂ. 297/6ರಲ್ಲಿನ 1.34 ಗುಂಟೆ ಜಮೀನನ್ನು ವಿಲ್ ಯಾ ಮರಣ ಶಾಸನ ಪತ್ರ ಮಾಡಿಸಿದ್ದಾರೆ. ವಿ. ಶಿವಣ್ಣನವರ ಕಾಲಾ ನಂತರ ನಾರಾಯಣಯ್ಯನಿಗೆ ಸೇರಬೇಕಾದ ಜಮೀನನ್ನು ಶಿವಣ್ಣರ ಎರಡನೇ ಪತ್ನಿ ಗಂಗಮ್ಮ ಮತ್ತು ಮಕ್ಕಳು ಫೋರ್ಜರಿ ಮಾಡಿ ಸರ್ವೆ ನಂ. 297/6ರ 1.34 ಗುಂಟೆ ಜಮೀನನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ. ಈ ಸಂಬಂಧ ನಾರಾಯಣಯ್ಯ ಮತ್ತವರ ಮಗ ದೇವರಾಜ ವಿಲ್ ಪತ್ರದೊಂದಿಗೆ ಪೊಲೀಸ್ ಠಾಣೆಗೆ ಹೋದರೆ 'ನಾತ' ಬಾಯಿಯ ಇನ್ಸ್‌ಪೆಕ್ಟರ್ ಶೇಖರ್, ಬಾಯಿಗೆ ಬಂದಂತೆ ಬೈದು ಅವರುಗಳನ್ನು ಇಡೀ ದಿನ ಠಾಣೆಯಲ್ಲೇ ಇರಿಸಿ ಮಾನಸಿಕ ಹಿಂಸೆ ನೀಡಿದ್ದಾನೆ. ಮೊನ್ನೆ ಮೊನ್ನೆಯಷ್ಟೆ ಮುಂಗಾರು ಬಿತ್ತನೆ ಸಮಯದಲ್ಲಿ ಜಮೀನು ಉಳುಮೆ ಮಾಡಲು ಹೋದರೆ ಗಂಗಮ್ಮ ಮತ್ತು ಮಕ್ಕಳು ನಾರಾಯಣಯ್ಯ ಮತ್ತು ಮಗ ದೇವರಾಜರಿಗೆ ಬೆದರಿಸಿದ್ದಲ್ಲದೆ ಹಲ್ಲೆ ಮಾಡಲು ಪ್ರಯತ್ನಿಸಿದ್ದನ್ನು ಕಂಪ್ಲೇಂಟ್ ಕೊಡಲು ಠಾಣೆಯ ಮೆಟ್ಟಲು ಹತ್ತಿದರೆ ಮತ್ತೆ ಇಡೀ ದಿನ ಠಾಣೆಯಲ್ಲೇ ಇರಿಸಿ ಮಾನಸಿಕ ಕಿರುಕುಳ ನೀಡಿದ್ದಾನೆ.

ಇದರಿಂದ ಬೇಸತ್ತ ನಾರಾಯಣಯ್ಯರ ಮಗ ದೇವರಾಜ, ಜಿಲ್ಲೆಯ ಡಿವೈಎಸ್‌ಪಿ ಪ್ರಭಾಕರ್‌ರ ಬಳಿ ಮೊರೆ ಇಟ್ಟಿದ್ದಾರೆ. ಇದು ರೆವಿನ್ಯೂಗೆ ಸಂಬಂಧಿಸಿದ ವಿಚಾರವಾದ್ದರಿಂದ ನೀವು ತಹಶೀಲ್ದಾರರ ಬಳಿ ನಿವೇದಿಸಿಕೊಳ್ಳಿ ಎಂಬ ಸಲಹೆಯನ್ನಿತ್ತಿದ್ದಾರೆ. ಅದರಂತೆ ನಾರಾಯಣಯ್ಯ ಮತ್ತು ದೇವರಾಜ ನಿವೇದಿಸಿಕೊಂಡಿದ್ದಾರೆ. ತಹಶೀಲ್ದಾರರು ಆ ಗ್ರಾಮಕ್ಕೆ ಸಂಬಂಧಿಸಿದ ಗ್ರಾಮ ಲೆಕ್ಕಿಗನನ್ನು ಕರೆಸಿ ಈ ವಿಷಯವಾಗಿ ಗ್ರಾಮವಾಸಿಗಳ ಹೇಳಿಕೆಯನ್ನೂ ಪಡೆಯುವಂತೆ ಸೂಚಿಸಿದ್ದಾರೆ. ನಾರಾಯಣಯ್ಯರ ಈ ಸಮಸ್ಯೆ ಅಂಥಾ ದೊಡ್ಡದ್ದೇನಾಗಿರಲಿಲ್ಲ, ಇವರ ಮೇಲೆ ಹಲ್ಲೆ ಪ್ರಯತ್ನ ನಡೆದಾಗಲೂ ರಕ್ಷಣೆ ನೀಡದಿರುವುದು ಇನ್ಸ್‌ಪೆಕ್ಟರ್ ಶೇಖರ್‌ನ ಅಮಾನವೀಯತೆಗೊಂದು ಉದಾಹರಣೆಯಷ್ಟೆ.

ಠಾಣೆಗೆ ಹೊಸಬರೇನಾದರೂ ಬಂದರೆ ಹುಚ್ಚಪ್ಪ ಎಂಬ ಎ.ಎಸ್.ಐ.ನನ್ನು ಕರೆಯುತ್ತಾನೆ. ಆತ ಬಂದು, ಬಂದವರನ್ನೊಮ್ಮೆ ನೋಡಿ ಶೇಖರ್ ಕಡೆ ತಿರುಗಿ 'ಸರ್ ಆಯ್ತು' ಎಂದರೆ ಸಾಕು; ಬಂದವರಿಗೆ ರಾಜಾತಿಥ್ಯ. ಅದೇ ಹುಚ್ಚಪ್ಪ 'ಸರ್ ಇಲ್ಲ' ಎಂದು ಬಿಟ್ಟರೆ 'ಏಯ್ ಯಾರೋ ನಿಮ್ಮನ್ನು ಒಳಗೆ ಬಿಟ್ಟಿದ್ದು ಬೂಟ್‌ನಲ್ಲಿ ಒದಿತೀನಿ ಬೋಳಿ ಮಕ್ಳ, ಕೇಸ್ ಹಾಕಿ, ಬಟ್ಟೆ ಬಿಚ್ಚಿ ಒಳಗೆ ಕೂರುಸ್ತೀನಿ...' ಮುಂತಾಗಿ ಹೀನಾಮಾನವಾಗಿ ಮಾತಾಡಿ ಬಂಧವರಿಗೆ ನಡುಕ ಉಂಟು ಮಾಡಿ ಹುಚ್ಚಪ್ಪನನ್ನು ಕರೆದು 'ಅದೇನ್ ನೋಡ್ರಿ' ಅಂತ ಹೇಳಿ ವ್ಯವಹಾರ ಕುದುರಿಸುವ ಪಾಖಂಡಿ ಈತ.

ಇನ್ಸ್‌ಪೆಕ್ಟರ್ ಶೇಖರ್ ಇಡೀ ತಾಲ್ಲೂಕನ್ನೇ ಬಡಿದು ಬಾಯಿಗೆ ಹಾಕಿಕೊಳ್ಳಲು ಶಪಥ ಮಾಡಿರುವಂತಿದೆ. ಖಾಸಗಿ ಬಸ್‌ನವರಿಂದ ಹಿಡಿದು ಎಲ್.ಪಿ.ಜಿ. ಗ್ಯಾಸ್ ಪಾಯಿಂಟ್‌ನವರಿಂದ ಬಿಟ್ಟೂಬಿಡದೆ ಗೆಬರುವ ಈತನ ಮಾಸಿಕ ಮೇಲ್ಸಂಪಾದನೆ ಲಕ್ಷ ದಾಟುವುದೆಂಬುದು ಇವನ ಆಪ್ತರು ನೀಡುವ ಲೆಕ್ಕಾಚಾರ. ಕುಣಿಗಲ್‌ನ ಜನ ಸದ್ಯ ಈ ಪೀಡೆ ಯಾವಾಗ ತೊಲಗುವುದೋ ಎಂದು ಕಾತರದಿಂದ ಕಾಯುತ್ತಿದ್ದಾರೆ. ಈ ವಿಚಾರ ಡಿವೈಎಸ್ಪಿ ಪ್ರಭಾಕರ್‌ರಿಗೆ ಗೊತ್ತಿಲ್ಲವೋ ಅಥವಾ ಗೊತ್ತಿದ್ದರೂ ಸುಮ್ಮನಿರುವುದ್ಯಾಕೆ? ಇಂಥಾ ಮಹಾ ಭ್ರಷ್ಟ, ದುಷ್ಟ ಇನ್ಸ್‌ಪೆಕ್ಟರ್ ಶೇಖರ್‌ನನ್ನು ಗೃಹ ಸಚಿವರು ಈ ಕೂಡಲೇ ನೀರು ನೆರಳಿಲ್ಲದ ಕಡೆ ಎತ್ತಿ ಒಗಾಯಿಸಬೇಕಾಗಿದೆ.

● ಮಂಜುನಾಥ್ ನಿಲಸೋಗೆ

ಹಗಲುಗುಡುಕ ಎ.ಎಸ್.ಐ ಹುಚ್ಚಪ್ಪ!

[illegible]



ಧಾರವಾಡದ ಮುರುಘಾಮಠದಲ್ಲಿ ಕಳ್ಳರ ಸಂತೆ!

ಸಂತೇಲಿ ಉಂಡೋನೇ ಜಾಣನಂತೆ!!

ಸ್ವಾಮಿ ಬುಳು ಬುಳು ಅಳುತ್ತಿದ್ದಾನೆ ಟಿವಿ ...ಮರಾಗಳ ಮುಂದೆ. ಮುಸಿ ಮುಸಿ ನಗುತ್ತಲೇ ಮಠಕ್ಕೆ ... ಹಾಕಿದ ಪುಢಾರಿಗಳು ಆಟ ಶುರು ಮಾಡಿದ್ದಾರೆ. ...ವರೆ ಮೇಲ್ನೋಟಕ್ಕೆ ಇದು ಖಾವಿ ವರ್ಸಸ್ ...ದಿ! ಆದರೆ ಅಖಾಡದಲ್ಲಿರುವ ಎಲ್ಲ ಗುಂಪು ... ಕಣ್ಣು ಮಾತ್ರ ಮಠದ ಆಸ್ತಿಯ ಮೇಲೇ!

...: ಸಿರಿಗೆರೆ ಮಠವಾಯ್ತು, ಮೂರುಸಾವಿರ ...ಠವೂ ಆಯ್ತು. ಈಗ ಧಾರವಾಡದ ...ರುಘಾಮಠದ ಪಾಳಿ.



...: ಮುರುಘಾಮಠದ ಸದ್ಯದ ಸ್ವಾಮಿಯ ...ಹಿಂದೆ ಬಿದ್ದಿದೆ ಮಾಜಿ ಶಾಸಕ ವಿನಯ್ ...ಲಕರ್ಣಿಯ ಗ್ಯಾಂಗು. "ಶಿವಯೋಗಿಸ್ವಾಮಿ ...ಠದ ಆಸ್ತಿಯನ್ನು ಬೇಕಾಬಿಟ್ಟಿ ಮಾರಿ ರೊಕ್ಕ ...ಡದಾನ, ಅದಕ್ಕ ಲೆಕ್ಕ ಕೊಡ್ಲಿ, ಮಠದಿಂದ ...ಟುಮೂಟೆ ಕಟ್ಟಿ ರೈಟ್ ಹೇಳ್ಲಿ" ಎಂಬುದು ...ನಯ್ ಗುಂಪಿನ ತಕರಾರು. ಪಕ್ಕಾ ಕಳ್ಳನೇ ...ರುವ ಸ್ವಾಮಿ ನೋಡಲಿಕ್ಕೆ ಸಾದು ತರಹ ...ದ್ದಾನೆ, ಪೇಪರು, ಟಿವಿಯವರ ಮುಂದೆ ...ಂ' ಎಂದು ರಾಗ ತೆಗೆದು ಅನುಕಂಪ ...ಸಲು ನೋಡುತ್ತಾನೆ. ಆದರೆ ತೆರೆಯ ಹಿಂದೆ ಈತನೂ ... ರಾಜಕೀಯ ನಡೆಸಿದ್ದಾನೆ. ಈತನ ಬೆಂಬಲಕ್ಕೂ ...ದು ಪುಢಾರಿ ಗುಂಪು ನಿಂತೇ ಇದೆ. ಒಟ್ಟಿನಲ್ಲೀಗ ...ರುಘಾಮಠದಲ್ಲಿ ಕಳ್ಳರ ಸಂತೆ!



ವಿನಯ್ ಕುಲಕರ್ಣಿ

... ಧಾರವಾಡ ಭಾಗದಲ್ಲಿ ವಿದ್ಯಾದಾಸೋಹದ ಮೂಲಕ ...ಮಾಜೋದ್ಧಾರದಲ್ಲಿ ತೊಡಗಿಕೊಂಡು ಬಂದಿದ್ದ ಮುರುಘಾ ...ಠ ಇತ್ತೀಚಿನ ದಶಕಗಳಲ್ಲಿ ರೊಕ್ಕ ಮಾಡುವವರ ...ಟ್ಟಯಾಗತೊಡಗಿದೆ. ಸೇವಾ ಮನೋಭಾವವಿರದ ಕಳ್ಳ ...ಮಿಗಳು ಲೋಕಲ್ ಪುಢಾರಿಗಳ ಜೊತೆ ಶಾಮೀಲಾಗಿ ...ಠವನ್ನು ಹಳ್ಳ ಹಿಡಿಸುತ್ತ ...ದಿದ್ದಾರೆ. ಅದರ ಮುಂದು ...ದ ಭಾಗವಾಗಿ ಈಗ ತಿಕ್ಕಾಟ ...ರುವಾಗಿದೆ.

... ಮುರುಘಾಮಠದಲ್ಲೀಗ ...ತಿ ಗುಂಪುಗಳದ್ದೇ ಹಾರಾಟ. ...ಹಿರೇಮಠ, ಶಿವು ಹಿರೇ...ಠ ನೇತೃತ್ವದಲ್ಲಿ ಜಂಗಮರ ...ಪಿದೆ. ಪಂಚಮಸಾಲಿಗಳ ...ಪು ಡಿವೈಡ್ ಆಗಿ, ಒಂದು ...ಕ್ಕೆ ಕಾಂಗ್ರೆಸ್ಸಿನ ವಿನಯ್ ಕುಲಕರ್ಣಿ ಲೀಡರು, ...ನ್ನೊಂದಕ್ಕೆ ಬಿಜೆಪಿಯ ಚಂದ್ರಕಾಂತ್ ಬೆಲ್ಲದ ಲೀಡರು. ...ಸಾದರು, ಬಣಜಿಗರದು ಮಗದೊಂದು ಗುಂಪು. ... ಹಿರೇಮಠರ ಜಂಗಮ ಗುಂಪು ತೆರೆಮರೆಯಲ್ಲಿ ...ಯೋಗಿಸ್ವಾಮಿಯ ಹಿಂದೆ ನಿಂತಿದೆ.



... ಈ ಎಲ್ಲ ಕಿತ್ತಾಟಗಳಿಗೆ ಮೂಲ ಮಠದ ಅಪಾರ ...ಮಾಣದ ಆಸ್ತಿ. ಧಾರವಾಡ, ಗದಗ, ರಾಮದುರ್ಗ, ...ನಹಳ್ಳಿ, ಬೈಲಹೊಂಗಲ ಮುಂತಾದ ಕಡೆ ಸಾಕಷ್ಟು ...ಮಿ ಇದೆ. ಹನ್ನೆರಡು ವರ್ಷಗಳ ಹಿಂದೆ ಈ ಮಠಕ್ಕೆ ...ದು ಝಾಂಡಾ ಹಾರಿಸಿದ ಶಿವಯೋಗಿ ಮೆಲ್ಲಮೆಲ್ಲಗೆ ...ಠದ ಆಸ್ತಿಯನ್ನು ಕರಗಿಸಿದ್ದಾನೆ. ಧಾರವಾಡದಲ್ಲಿ 90 ... ಭೂಮಿಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ...ಸಿಕೊಂಡಿದ್ದಾನೆ. ಗದಗಿನಲ್ಲಿ ಬಸ್‌ಸ್ಟ್ಯಾಂಡ್ ಸಮೀಪದ ... ಎಕರೆ ಭೂಮಿಯನ್ನು ಕೇವಲ 4.50 ಲಕ್ಷಕ್ಕೆ ಸೇಲ್ ಮಾಡಿದ್ದಾನೆ. ರಾಮದುರ್ಗ, ಬಸವಕಲ್ಯಾಣದ ಆಸ್ತಿಗಳಲ್ಲೂ ಸ್ವಲ್ಪ ಮಾರಾಟವಾಗಿ ಹೋಗಿದೆ. "ಈ ಮಾರಾಟದಿಂದ ಬಂದ ರೊಕ್ಕ ಎಲ್ಯಪಾ ಸ್ವಾಮಿ? ಬ್ಯಾಂಕ್‌ನ್ಯಾಗೂ ರೊಕ್ಕ ಇಲ್ಲ, ಅದ್ನೆಲ್ಲ ಏನ್ ಮಾಡಿದ್ಯಪಾ?" ಎಂದು ವಿನಯ್ ಗುಂಪು ಕೇಳಲಾರಂಭಿಸಿದ್ದೆ ತಡ ಸ್ವಾಮಿ ತೊದಲತೊಡಗಿದ್ದಾನೆ. "ಆಸ್ತಿ ಮಾರಿದ ರೊಕ್ಕದಾಗ ದಾಸೋಹಕ್ಕ, ಮಠದ ಅಭಿವೃದ್ಧಿಗೆ ಮತ್ತ ನನ್ನ ಚಿಕಿತ್ಸೆಗೆ ಖರ್ಚು ಮಾಡೇನಿ" ಎಂದು ಉಡಾಫೆಯ ಉತ್ತರ ನೀಡತೊಡಗಿದ್ದಾನೆ. ಆಗ ವಿನಯನ ಗುಂಪು ಧರಣಿ ಮಾಡಿ, ಟ್ರಸ್ಟ್‌ನ ಏಕೈಕ ಟ್ರಸ್ಟಿಯಾಗಿದ್ದ ಸ್ವಾಮಿಯನ್ನು ಆ ಸ್ಥಾನದಿಂದ ಕಿತ್ತು ಹಾಕಿದೆ. ಸ್ವಾಮಿಯ ಆಸ್ತಿ ಹಗರಣ, ಮೂಗು ಬೊಟ್ಟು ವ್ಯಾಮೋಹ ಇತ್ಯಾದಿ ವಿಷಯಗಳನ್ನು ಭಕ್ತರ ಮುಂದೆ ಇಡುವುದಾಗಿ ಧಮಕಿ ಹಾಕಿದೆ. ಇದಾಗಿದ್ದೆ ತಡ ಹೆದರಿದ ಸ್ವಾಮಿ ಸಬ್ ರಿಜಿಸ್ಟ್ರಾರ್ ಆಫೀಸ್‌ಗೆ ಹೋದವನೇ ಹೊಸ ಟ್ರಸ್ಟ್ ನೋಂದಣಿ ಮಾಡಿ, ತನ್ನನ್ನು ಅಧ್ಯಕ್ಷನನ್ನಾಗಿ, ವಿನಯನನ್ನು ಕಾರ್ಯಾಧ್ಯಕ್ಷನನ್ನಾಗಿ ಮಾಡಿ, ವಿನಯ್ ಗುಂಪಿನ ದೊಡ್ಡವಾಡ, ಹಂಪಣ್ಣನವರ್, ಪಟ್ಟಣಶೆಟ್ಟಿ, ಅಗಡಿ ಮುಂತಾದ 21 ಜನರನ್ನು ಸದಸ್ಯರನ್ನಾಗಿ ನೇಮಕ ಮಾಡಿದ್ದಾನೆ.

ಇಲ್ಲಿವರೆಗೆ ಸ್ವಾಮಿಯನ್ನು ಹಿರೇಮಠ, ಗುರುರಾಜ ಹುಣಸಿಮರದರ ಗುಂಪು ನಿಯಂತ್ರಿಸುತ್ತಿತ್ತು. ವಿನಯ್ ಕುಲಕರ್ಣಿ ಎಂಟ್ರಿ ಹೊಡೆದ ಕೂಡಲೇ ಈ ಗುಂಪು ಹಿಂದೆ ಸರಿಯಿತು. ಆದರೆ ಹಿಂದಿನಿಂದಲೇ ಸ್ವಾಮಿಗೆ ಪಂಪ್ ಹಾಕತೊಡಗಿತು. ಇದರಿಂದ ಉಬ್ಬಿದ ಸ್ವಾಮಿ ತನ್ನನ್ನು ಬೆದರಿಸಿ ಹೊಸ ಟ್ರಸ್ಟ್ ಮಾಡಿಸಿಕೊಂಡಿದ್ದಾರೆ ಎಂದು ಹೊಸ ರಾಗ ತೆಗೆದಿದ್ದಾನೆ. ವಿನಯ್ ವಿರುದ್ಧ ಪೊಲೀಸ್ ಕಂಪ್ಲೇಂಟ್ ಕೊಡುವ ಯತ್ನವನ್ನೂ ಮಾಡಿರುವ ಸ್ವಾಮಿ ವಿನಯ್‌ನಿಂದ ತನಗೆ ಜೀವ ಬೆದರಿಕೆ ಇದೆ ಎಂದು ಬೊಬ್ಬೆ ಹೊಡೆಯುತ್ತಿದ್ದಾನೆ.

ವಿನಯ್‌ನ ಅಜ್ಜ ಈ ಮಠಕ್ಕೆ 74 ಎಕರೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದಾರೆ. ಆಗಿನಿಂದಲೂ ವಿನಯ್ ಕುಟುಂಬಕ್ಕೆ ಈ ಮಠದ ಸಂಪರ್ಕವಿದೆ. ಈಗ ಇಲಕಲ್ ಮಠವೊಂದರಲ್ಲಿ ಸ್ವಾಮಿಯಾಗಿರುವ ವ್ಯಕ್ತಿಯೊಬ್ಬನನ್ನು ಮುರುಘಾಮಠಕ್ಕೆ ತಂದು ತನ್ನ ಅಧಿಪತ್ಯ ಸ್ಥಾಪಿಸುವುದು ವಿನಯ್ ಪ್ಲಾನು.

ಸದ್ಯ ವಿದೇಶ ಪ್ರವಾಸದಲ್ಲಿರುವ ಜಗದೀಶ ಶೆಟ್ಟರ್, ಶಾಸಕಿ ಸೀಮಾ ಮಸೂತಿ ಬಂದ ಮೇಲೆ ಬೆಲ್ಲದ ಗುಂಪೂ ಅಖಾಡಕ್ಕೆ ಇಳಿಯಲಿದೆ. ಹಿಂದೆ ಮೃತ್ಯುಂಜಯ ಮಹಾಂತ ಸ್ವಾಮಿಗಳಿದ್ದಾಗ ಸಮಾಜಸೇವೆಗೆ ಹೆಸರಾಗಿದ್ದ ಮಠದಲ್ಲಿ ಇಂದು ಕಳ್ಳರ ಸಂತೆ ನೆರೆದಿದೆ. ಸಂತೇಲಿ ಉಂಡವನೇ ಜಾಣ ಎನ್ನುವಂತಾಗಿದೆ. ಮಠದ ಭಕ್ತರು ಈಗಲಾದರೂ ಎಚ್ಚೆತ್ತುಕೊಂಡು ಮಠ ಉಳಿಸಲು ಮುಂದಾಗಲಿ.

● ಹುಬ್ಬಳ್ಳಿಯಾಂವ


...ಷ್ಟೀಕರಣ

... ಜುಲೈ 12, 2006ರ ಸಂಚಿಕೆಯಲ್ಲಿ ಶಿವಮೊಗ್ಗದ ಡಿಸಿಸಿ ಬ್ಯಾಂಕಿನ ಅಧ್ಯಕ್ಷ ... ಗೌಡರನ್ನು ಕುರಿತು ?ಡಿಸಿಸಿ ಬ್ಯಾಂಕ್ ... ಒಂದು ವರದಿ ಪ್ರಕಟವಾಗಿತ್ತು ... ಗೌಡರು ಭ್ರಷ್ಟರೆಂದೂ, ... ರಾಜಕಾರಣ ಮಾಡುತ್ತಾರೆಂದೂ [illegible] ... ಮನನೊಂದಿದ್ದು, ಅದಕ್ಕೆ ನಾವು ಈ ಮೂಲಕ [illegible] – ಸಂ

ದಾವಣಗೆರೆ : ಅಜ್ಜಿಹಳ್ಳಿ ಕೊಲೆಗಳಿಗೆ ಪೊಲೀಸರೇ ಹೊಣೆ



ಚನ್ನಗಿರಿ ತಾಲ್ಲೂಕಿನಲ್ಲಿ ಕೊಲೆ, ಸುಲಿಗೆ ದೌರ್ಜನ್ಯಗಳನ್ನು ಮಾಡಿಯೂ ಯಾವುದೇ ಕೇಸುಗಳು ದಾಖಲಾಗದಂತೆ ಸಲೀಸಾಗಿ ಬಚಾವ್ ಆಗಬೇಕೆಂದರೆ ಇಲ್ಲಿನ ಪೊಲೀಸರಿಗೆ ಅವರು ತಿನ್ನುವಷ್ಟು ಅಮೇಧ್ಯವನ್ನು ತುರುಕಿದರೆ ಸಾಕು. ಇವರು ಕೊಲೆಗಳನ್ನು ಆತ್ಮಹತ್ಯೆಗಳನ್ನಾಗಿಯೂ, ಸುಲಿಗೆಗಳನ್ನು ಸಾರ್ವಜನಿಕ ಕೆಲಸಗಳನ್ನಾಗಿಯೂ, ದೌರ್ಜನ್ಯಗಳನ್ನು ದೇಶಸೇವೆಯನ್ನಾಗಿಯೂ ಮಾರ್ಪಡಿಸಿಬಿಡುತ್ತಾರೆ. ಇಲ್ಲಿನ ಪೊಲೀಸ್ ಠಾಣೆಯಲ್ಲಿ ರಾರಾಜಿಸುತ್ತಿರುವ 'ಕಾನೂನನ್ನು ಗೌರವಿಸುವವರನ್ನು ನಾವು ಗೌರವಿಸುತ್ತೇವೆ' ಎನ್ನುವ ವಾಕ್ಯ ವಿಕಾರವಾಗಿ ಕಾಣಿಸುತ್ತಿದೆ. ಏಕೆಂದರೆ ಈಗ್ಗೆ ಎರಡು ವರ್ಷಗಳ ಕೆಳಗೆ ಅಜ್ಜಿಹಳ್ಳಿಯಲ್ಲಿ ಅಪ್ಸರ ಟೆಕ್ಸ್‌ಟೈಲ್‌ನ ಮಾಲೀಕ ಪ್ರವೀಣ್ ಕುಮಾರ್ ತನ್ನ ಗೂಂಡಾಗಳೊಂದಿಗೆ ದಲಿತ ಜಯಪ್ಪನಿಗೆ ಸೇರಿದ್ದ 2 ಎಕರೆ ಅಡಿಕೆ ತೋಟವನ್ನು ಹಾಡುಹಗಲೇ ಕಡಿಸಿ ಹಾಕಿದ್ದ. ಪ್ರವೀಣ್ ಕುಮಾರ್ ಜೈನ್‌ನ ಮೇಲೆ ಚನ್ನಗಿರಿ ಪೊಲೀಸರು ಯಾವುದೇ ಮೊಕದ್ದಮೆಯನ್ನು ದಾಖಲು ಮಾಡಲಿಲ್ಲ. ಇದೇ ವರ್ಷಾರಂಭದಲ್ಲಿ 9ನೇ ತರಗತಿ ಓದುತ್ತಿದ್ದ ಸಾರಥಿ ಗ್ರಾಮದ ದಲಿತ ಹುಡುಗ ನಾಗರಾಜ ಮೊಣಕಾಲಿನಷ್ಟು ಉದ್ದವಿರದ ನೀರಿನಲ್ಲಿ ಕೊಲೆಯಾಗಿ ಬಿದ್ದಿದ್ದ. ಇದನ್ನು ಪೊಲೀಸರು ಆತ್ಮಹತ್ಯೆಯೆಂದು ದಾಖಲಿಸಿದ್ದಾರೆ. ಹೆಬ್ಬಳಗೆರೆಯ 'ನಕಲಿ ಚಿನ್ನದ ಬಿಸ್ಕತ್ತು' ಸುಲಿಗೆಕೋರರಿಂದ ಮತ್ತು ಓಸಿ ಬಿದ್ದರುಗಳಿಂದ ಲಂಚ ಪಡೆದು ಅವರ ಸುಲಿಗೆಗೆ ನಿರಂತರ ಪ್ರೋತ್ಸಾಹ ನೀಡುತ್ತಿದ್ದಾರೆ. ಪೊಲೀಸರ ಇಂತವೇ ಹಲವು ಹತ್ತು ದುಷ್ಕೃತ್ಯಗಳನ್ನು ಇಲ್ಲಿ ದಾಖಲಿಸಬಹುದು. ಚನ್ನಗಿರಿ ಪೊಲೀಸರ ಹೊಣೆಗೇಡಿತನದಿಂದಾಗಿಯೇ ಆ. 20 ರಂದು ಚನ್ನಗಿರಿಗೆ 4 ಕಿ.ಮೀ. ದೂರವಿರುವ ಅಜ್ಜಿಹಳ್ಳಿಯಲ್ಲಿ ಒಂದರ ನಂತರ ಮತ್ತೊಂದು ಕೊಲೆಗಳು ನಡೆದು ಹೋಗಿವೆ.



ಅದು ನಡೆದದ್ದು ಹೀಗೆ...

ಅಜ್ಜಿಹಳ್ಳಿ ರಾಮಪ್ಪ ಬಹಳ ವರ್ಷಗಳಿಂದಲೂ ಮಾನಸಿಕವಾಗಿ ಖಿನ್ನನಾಗಿರುತ್ತಿದ್ದ, ಜೊತೆಗೆ ಕೂಲಿನಾಲಿ ಮಾಡಿಕೊಂಡು ಅವರಿವರ ತೋಟಗಳನ್ನು ಕಾಯ್ದು ಜೀವನ ಸಾಗಿಸುತ್ತಿದ್ದ. ಇವನು ಈಗ್ಗೆ 3 ತಿಂಗಳ ಕೆಳಗೆ ಅದೇ ಗ್ರಾಮದ ಗೋವಿಂದಪ್ಪನ ತಲೆಯನ್ನು ಕುಡುಗೋಲಿನಿಂದ ಕೊಚ್ಚಿ ಗಂಭೀರವಾಗಿ ಗಾಯಗೊಳಿಸಿದ್ದ. ಪೊಲೀಸರು ಅಂದೇ ಅವನನ್ನು ಬಂಧಿಸಿ, ಸೂಕ್ತ ತನಿಖೆ ನಡೆಸಿ ಜೈಲಿಗಟ್ಟಿದ್ದರೆ ಮಾನಸಿಕ ರೋಗಿ ರಾಮಪ್ಪ ಇಂದು ತನ್ನ ಸಂಬಂಧಿ ಮೂಡ್ಲಪ್ಪನನ್ನು ಕೊಲ್ಲುವುದು ತಪ್ಪಿ ತಾನು ಕೂಡ ಜನರಿಂದ ಹೊಡೆತ ತಿಂದು ಸಾಯುವುದು ತಪ್ಪುತ್ತಿತ್ತು. ಆದರೆ ರಾಮಪ್ಪನನ್ನು ಬಂಧಿಸಿದ ಪೊಲೀಸರು ಯಾರ ಪ್ರಭಾವದಿಂದಲೋ ಏನೋ ಮರುದಿನವೇ ಅವನ ಮೇಲೆ ಯಾವ ಕೇಸು ದಾಖಲಿಸದೇ ಬಿಟ್ಟು ಕಳುಹಿಸಿದ್ದರು. ಅಂದಿನಿಂದ ಮೊನ್ನೆಯವರೆಗೂ ಈತ ಯಾರದೋ ತೋಟ ಕಾಯುವ ಕೆಲಸದಲ್ಲಿ ನಿರತನಾಗಿದ್ದ. ಆದರೆ ಯಾವುದೇ ಆಧಾರಗಳಿಲ್ಲದಿದ್ದರೂ ರಾಮಪ್ಪನಿಗೆ ಬುದ್ಧಿಮಾಂದ್ಯನೆಂಬ ಅರ್ಹತಾಪತ್ರವನ್ನು ಅಂದು ಪೊಲೀಸರೇ ನೀಡಿಬಿಟ್ಟಿದ್ದರು.



ಆ. 20ರ ಬೆಳಿಗ್ಗೆ 7-30ರ ಹೊತ್ತಿನಲ್ಲಿ ವೃದ್ಧ ಮೂಡ್ಲಪ್ಪ 10 ಕಿ.ಗ್ರಾಂ. ಗೊಬ್ಬರವನ್ನು ಹೊತ್ತು ಹೊಲಕ್ಕೆ ಹೋಗುತ್ತಿದ್ದ ಸಂದರ್ಭದಲ್ಲಿ ಹಿಂದಿನಿಂದ ಬಂದ ರಾಮಪ್ಪ ಕುಡಗೋಲಿನಿಂದ ಮೂಡ್ಲಪ್ಪನ ಕುತ್ತಿಗೆಗೆ ಹೊಡೆದಿದ್ದಾನೆ. ನಂತರ ರುಂಡವನ್ನು ಕತ್ತರಿಸಿಕೊಂಡು ಅಜ್ಜಿಹಳ್ಳಿಗೆ ಬಂದು ರುಂಡವನ್ನು ಕೈಯಲ್ಲಿ ಹಿಡಿದು ಆಡಿಸುತ್ತಾ ಊರ ತುಂಬಾ ಓಡಾಡಿ ಭೀಭತ್ಸವನ್ನು ಸೃಷ್ಟಿಸಿದ್ದಾನೆ. 8-00 ಗಂಟೆ ಹೊತ್ತಿಗೆ ಅಲ್ಲಿನ ಜನರು ಚನ್ನಗಿರಿ ಪೊಲೀಸ್ ಠಾಣೆಗೆ ದೂರವಾಣಿ ಕರೆ ಮಾಡಿ ಈ ವಿಷಯವನ್ನು ತಿಳಿಸಿದ್ದಾರೆ. ಕುರು ಗೋಲು ಕಸಿದುಕೊಳ್ಳಲು ಹೋದವರನ್ನೇ ರಾಮಪ್ಪ ಕತ್ತರಿಸಲು ಮುಂದಾಗಿದ್ದಾನೆ. 11-00 ಗಂಟೆಯವರೆಗೂ ಪೊಲೀಸರ ಬರುವಿಕೆಯನ್ನು ಕಾಯ್ದು ಮುಂದೆ ಆಗಬಹುದಾದ ಅನಾಹುತವನ್ನು ಮನಗಂಡ ಅಜ್ಜಿಹಳ್ಳಿಯ ಜನರು ತಾಳ್ಮೆ ಕಳೆದುಕೊಂಡು ರಾಮಪ್ಪನನ್ನು ಕಲ್ಲು, ಬಡಿಗೆಗಳಿಂದ ಹೊಡೆದು ಸಾಯಿಸಿದ್ದಾರೆ.

12-00 ಗಂಟೆಗೆ ಬಂದ ಪೊಲೀಸರು.

ಅದೇ ದಿನ 11-00 ಗಂಟೆಗೆ ಚನ್ನಗಿರಿಯ ನೆಮ್ಮದಿ ಕೇಂದ್ರದಲ್ಲಿ ಪಡಿತರ ಚೀಟಿಯ ಭಾವಚಿತ್ರ ತೆಗೆಸಿಕೊಳ್ಳಲು ನಿಂತಿದ್ದ ಹಿರೇಮಳಲಿ ಗ್ರಾಮದ ಹೆಣ್ಣುಮಕ್ಕಳ ಮೇಲೆ ವಿನಾಕಾರಣ ಲಾಠಿ ಪ್ರಹಾರ ಮಾಡಿ ಎ.ಎಸ್.ಐ. ತಿಮ್ಮೇಶ ತನ್ನ ತಿಮಿರನ್ನು ಪ್ರದರ್ಶಿಸಿದ್ದಾನೆ. ಇದರಿಂದಾಗಿ ರೊಚ್ಚಿಗೆದ್ದ ಹೆಣ್ಣುಮಕ್ಕಳು ಅವನನ್ನು ಅಟ್ಟಾಡಿಸಿಕೊಂಡು ಹೊಡೆಯಲಾರಂಭಿಸಿದಾಗ ಪಿ.ಎಸ್.ಐ. ರಮೇಶ್ ತನ್ನ ಪಿಸ್ತೂಲ್‌ನಿಂದ ಗುಂಡು ಹಾರಿಸುತ್ತೇನೆಂದು ಬೆದರಿಸಿದಾಗ ಅವನಿಗೂ ನಾಲ್ಕು ಇಕ್ಕಿದ್ದಾರೆ. ನಂತರ ಪೊಲೀಸರೆಲ್ಲಾ ಠಾಣೆಗೆ ಓಡಿಹೋಗಿ ಬಾಗಿಲು ಮುಚ್ಚಿಕೊಂಡಿದ್ದಾರೆ. ಸಾವಿರಾರು ಹೆಣ್ಣುಮಕ್ಕಳು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾರಂಭಿಸಿದ್ದಾರೆ. ಇದೆಲ್ಲಾ ನಡೆದಿದ್ದು ಮೂಡ್ಲಪ್ಪನ ಕೊಲೆಯ ಸುದ್ದಿ ಮುಟ್ಟಿದ ಮೂರು ತಾಸಿನ ನಂತರದಲ್ಲಷ್ಟೇ. ರೊಚ್ಚಿಗೆದ್ದ ಜನರಿಂದ ರಕ್ಷಣೆ ಪಡೆದುಕೊಳ್ಳಲು ರಿಸರ್ವ್ ಪೊಲೀಸರನ್ನು ಕರೆಸಿಕೊಂಡ ನಂತರ 12-00 ಗಂಟೆಯ ಹೊತ್ತಿಗೆ ಅಜ್ಜಿಹಳ್ಳಿಗೆ ಹೋದಾಗ ಅಲ್ಲೂ ಕೂಡ ಪೊಲೀಸರಿಗೆ ತೀವ್ರ ಪ್ರತಿಭಟನೆಯ ಸ್ವಾಗತ ಸಿಕ್ಕಿದೆ. ಜನರು ಪೊಲೀಸ್ ಜೀಪಿನ



ಮೇಲೆ ಕಲ್ಲುಗಳಿಂದ ದಾಳಿ ಮಾಡಿ ಜೀಪಿನ ಟೈರುಗಳನ್ನು ಸುಟ್ಟು ಹಾಕಿ ಪ್ರತಿಭಟಿಸಿದ್ದಾರೆ. ಒಟ್ಟಾರೆ ಎರಡು ಜೀವಗಳು ಬಲಿ ಯಾಗಿರುವುದು ಪೊಲೀಸರ ನಿರ್ಲಕ್ಷ್ಯದಿಂದಲೇ ಎನ್ನುವುದು ಎಲ್ಲಾ ರೀತಿಯಿಂದಲೂ ಸ್ಪಷ್ಟವಾಗುತ್ತಿದೆ. ಇಲ್ಲಿನ ವ್ಯಂಗ್ಯ ವೇನೆಂದರೆ 'ಬುದ್ಧಿಮಾಂದ್ಯನಿಂದ ವೃದ್ಧನ ಹತ್ಯೆ ರೊಚ್ಚಿಗೆದ್ದ ಜನರಿಂದ ಬುದ್ಧಿಮಾಂದ್ಯನ ಹತ್ಯೆ' ಎಂದು ಪೊಲೀಸರು ಹಾಗೂ ಮಾಧ್ಯಮದವರು ವರದಿ ನೀಡಿ ಕೈತೊಳೆದು ಕೊಂಡು ಬಿಟ್ಟಿದ್ದಾರೆ.

ಆದರೆ ಕೊಲೆಯ ಸುದ್ದಿ ಮುಟ್ಟಿದ ಮೂರು ಗಂಟೆಯವರೆಗೂ ಪೊಲೀಸರು ಏನು ಮಾಡುತ್ತಿದ್ದರು? ಯಾವ್ಯಾವ ಗಲ್ಲಿ-ಗಟಾರಗಳಲ್ಲಿ ಅಮೇಧ್ಯ ತಿನ್ನುತ್ತಾ ತಿರುಗುತ್ತಿದ್ದರು? ಹೆಬ್ಬಳಗೆರೆಯ ನಕಲಿ ಬಂಗಾರದ ಬಿಸ್ಕಟ್ ಸುಲಿಗೆಕೋರರ ಹತ್ತಿರ ಮಿಂಚಿನ ವೇಗದಲ್ಲಿ ಧಾವಿಸುವ ಇವರು ಅಮಾಯಕ ಮೂಡ್ಲಪ್ಪನ ಕೊಲೆ ನಡೆದ ಸುದ್ದಿ ತಿಳಿದು ಮೂರು ಗಂಟೆಯವರೆಗೂ ಕೇವಲ 4 ಕಿ.ಮೀ. ದೂರದ ಅಜ್ಜಿಹಳ್ಳಿಗೆ ತಕ್ಷಣ ಏಕೆ ಬರಲಿಲ್ಲ? ಒಂದೇ ದಿನದಲ್ಲಿ ಚನ್ನಗಿರಿ ಮತ್ತು ಅಜ್ಜಿಹಳ್ಳಿ ಗಳಲ್ಲಿ ಪೊಲೀಸರ ಬೇಜವಾಬ್ದಾರಿ ವರ್ತನೆಗಳ ... ಜನರು ತೀವ್ರವಾಗಿ ಪ್ರತಿಭಟಿಸಿರುವ ಅಸಲಿ ಕಾರಣಗಳೇನು? ಈ ಎಲ್ಲಾ ಪ್ರಶ್ನೆಗಳಿಗೆ ಜಿಲ್ಲಾ ಎಸ್.ಪಿ. ಸಂದೀಪ್ ಪಾಟೀಲ್ ಉತ್ತರ [illegible].

● ಚಂದ್ರಶೇಖರ ತೋರಣಘಟ್ಟ

ಇದು ಕೇವಲ 'ಸ್ಕಾರ್ಫ್' ವಿವಾದ ಅಲ್ಲ 'ಸ್ಕಾರ್ಫ್' ವಿವಾದದ ಹಿಂದಿರುವ ಷಡ್ಯಂತ್ರ



ವಿಶೇಷ ಲೇಖನ

● ಸುರೇಶ್‌ಭಟ್ ಬಾಕ್ರಬೈಲು

ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿನಿಯರು "ಬುರ್ಖಾ" ಅಥವಾ "ಸ್ಕಾರ್ಫ್" ಧರಿಸಿ ಕಾಲೇಜಿಗೆ ಬರಬಾರದೆಂದು ಬಂಟ್ವಾಳದ ಎಸ್‌ವಿಎಸ್ ಮತ್ತು ಉಪ್ಪಿನಂಗಡಿಯ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ತೀರಾ ಇತ್ತೀಚೆಗೆ ತಾಕೀತು ಮಾಡಿರುವುದನ್ನು ಕೇವಲ ಈ ಒಂದು ಘಟನೆಗೆ ಸೀಮಿತವಾಗಿ ಪರಿಗಣಿಸಲಾಗುವುದಿಲ್ಲ ಮತ್ತು ಹಾಗೆ ನೋಡುವುದು ಸರಿಯೂ ಅಲ್ಲ. ಇಲ್ಲಿ ಬಹಳ ಮಹತ್ವದ ಸಾಂವಿಧಾನಿಕ ಹಕ್ಕು ಹಾಗೂ ಕರ್ತವ್ಯಗಳು ಮತ್ತು ಮಾನವಹಕ್ಕುಗಳ ಪ್ರಶ್ನೆಗಳಿವೆ. ಭಾರತ 1950ರಲ್ಲಿ ತನ್ನದೇ ಆದ ಒಂದು ಅತ್ಯುತ್ತಮ ಸಂವಿಧಾನವನ್ನು ಅಂಗೀಕರಿಸಿದೆ. ಮಾತ್ರವಲ್ಲ ವಿಶ್ವಸಂಸ್ಥೆಯ 'ಸಾರ್ವತ್ರಿಕ ಮಾನವಹಕ್ಕುಗಳ ಘೋಷಣೆ 1948' ಮತ್ತು 'ಅಂತಾರಾಷ್ಟ್ರೀಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಒಡಂಬಡಿಕೆ 1966'ಗಳಿಗೂ ಭಾರತ ಸಹಿಹಾಕಿದೆ ಎಂಬುದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬೇಕಾಗುತ್ತದೆ.

ಭಾರತದ ಸಂವಿಧಾನ ಭಾರತದ ಪ್ರಜೆಗಳಿಗೆ ಕೆಲವು ನಿರ್ದಿಷ್ಟ ಮೂಲಭೂತ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಕೊಡಮಾಡಿದೆ. ಮೂಲಭೂತ ಹಕ್ಕುಗಳ ಕಲಮು 29 ಹೇಳುತ್ತದೆ:

(1) ಭಾರತದ ಸರಹದ್ದಿನೊಳಗೆ ವಾಸಿಸುತ್ತಾ ತನ್ನದೇ ಆದ ಒಂದು ನಿರ್ದಿಷ್ಟ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿರುವ ಪ್ರಜೆಗಳ ಯಾವುದೇ ವರ್ಗಕ್ಕೆ ಅವುಗಳನ್ನು ಕಾಪಾಡಿಕೊಂಡು ಬರುವ ಹಕ್ಕು ಇದೆ.

(2) ಪ್ರಭುತ್ವದಿಂದ ನಡೆಸಲ್ಪಡುವ ಅಥವಾ ಅನುದಾನ ಪಡೆಯುತ್ತಿರುವ ಯಾವುದೇ ಶಿಕ್ಷಣಸಂಸ್ಥೆ ಕೇವಲ ಧರ್ಮ, ಜನಾಂಗ, ಜಾತಿ, ಭಾಷೆಯ ಆಧಾರದಲ್ಲಿ ಯಾವುದೇ ಪ್ರಜೆಗೆ ಪ್ರವೇಶ ನಿರಾಕರಿಸಕೂಡದು.

ಕಲಮು 51-ಎ ಯಲ್ಲಿ ಮೂಲಭೂತ ಕರ್ತವ್ಯಗಳೇನೆಂದು ಹೇಳಲಾಗಿದೆ. ಇದರಲ್ಲಿ 11 ಅಂಶಗಳಿದ್ದು ಈಗ ಪ್ರಸ್ತುತವಾಗಿರುವ ಮೂರು ಅಂಶಗಳು ಹೀಗಿವೆ:

a) ಸಂವಿಧಾನಕ್ಕೆ ಬದ್ಧತೆ ತೋರಿಸುವುದು ಮತ್ತು ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಹಾಗೂ ರಾಷ್ಟ್ರಗೀತೆಯನ್ನು ಗೌರವಿಸುವುದು.

e) ಧಾರ್ಮಿಕ, ಭಾಷಿಕ, ಪ್ರಾದೇಶಿಕ ಅಥವಾ ವರ್ಗೀಯ ವೈವಿಧ್ಯತೆಗಳನ್ನು ಮೀರಿನಿಂತು ಭಾರತ'ದ ಎಲ್ಲ ಜನರಲ್ಲಿ ಸೌಹಾರ್ದ ಮತ್ತು ಸೋದರತೆಯ ಭಾವನೆಯನ್ನು ಬೆಳೆಸುವುದು; ಮಹಿಳೆಯರ ಗೌರವಕ್ಕೆ ಕುಂದು ತರಬಲ್ಲ ಚಟುವಟಿಕೆಗಳನ್ನು ತ್ಯಜಿಸುವುದು.

f) ನಮ್ಮ ಶ್ರೀಮಂತ ಬಹುಸಂಸ್ಕೃತಿಯ ಪರಂಪರೆಗೆ ಮಹತ್ವ ನೀಡುತ್ತ ಅದನ್ನು ಸಂರಕ್ಷಿಸುವುದು.

ಸಂವಿಧಾನದಲ್ಲಿ ನಿರೂಪಿಸಲಾಗಿರುವ ಈ ಮೂಲಭೂತ ಕರ್ತವ್ಯಗಳು ಪ್ರಜೆಗಳಿಗೆ ಮಾತ್ರವಲ್ಲ ಪ್ರಭುತ್ವಕ್ಕೂ ಅನ್ವಯವಾಗುತ್ತವೆಯೆಂದು ಸುಪ್ರೀಂಕೋರ್ಟು ಸ್ಪಷ್ಟವಾಗಿ ಹೇಳಿದೆ. ಆದುದರಿಂದ ಪ್ರಭುತ್ವದ ಅಂಗಗಳಾಗಿರುವ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ವಿಶ್ವವಿದ್ಯಾನಿಲಯ, ಕಾಲೇಜು ಶಿಕ್ಷಣ ಇಲಾಖೆ, ಅನುದಾನಿತ ಕಾಲೇಜುಗಳು ಇತ್ಯಾದಿಗಳೆಲ್ಲವೂ ಇದರ ವ್ಯಾಪ್ತಿಯಲ್ಲಿ ಬರುತ್ತವೆ.



ಪ್ರಸಕ್ತ ಸಂದರ್ಭದಲ್ಲಿ ಓರ್ವ ಭಾರತೀಯ ಪ್ರಜೆಯ ಸಾಂವಿಧಾನಿಕ ಮತ್ತು ಮಾನವಹಕ್ಕು ಎರಡೂ ಉಲ್ಲಂಘಿಸಲ್ಪಟ್ಟಿರುವುದು ಸ್ಪಷ್ಟವಾಗಿದೆ. ಸರಕಾರದಿಂದ ಅನುದಾನ ಪಡೆಯುತ್ತಿರುವ ಶಿಕ್ಷಣಸಂಸ್ಥೆಗಳು ಮೂಲಭೂತವಾದಿ ಸಂಘಟನೆ/ಗಳ ಬೆದರಿಕೆಗೆ ತಲೆಬಾಗಿ ಮೌಖಿಕವಾಗಿ ನೀಡಿರುವ ಈ ಆದೇಶದ ಸಿಂಧುತ್ವ ಪ್ರಶ್ನಾರ್ಹವಾಗಿದೆ. ಇದು ಮೇಲೆ ಹೇಳಿರುವ ಸಾಂವಿಧಾನಿಕ ಮೌಲ್ಯಗಳು ಮತ್ತು ಮಾನವಹಕ್ಕುಗಳ ಉಲ್ಲಂಘನೆಯಾಗಿದೆ. ಪ್ರೌಢ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಲಿಯುತ್ತಿರುವ ಶಿಕ್ಷಣಸಂಸ್ಥೆಗಳಲ್ಲಿ ಸಮವಸ್ತ್ರ ಧರಿಸುವ ನಿಯಮವನ್ನು ಕಡ್ಡಾಯವಾಗಿ ವಿಧಿಸುವುದಕ್ಕೆ ಯಾವ ಸಮರ್ಥನೆಯೂ ಇಲ್ಲ. ಆಡಳಿತ ಮಂಡಳಿಗಾಗಲಿ, ಶಿಕ್ಷಕ ರಕ್ಷಕ ಸಂಘಗಳಿಗಾಗಲಿ ಸಾಂವಿಧಾನಿಕ ಮೌಲ್ಯಗಳಿಗೆ ಚ್ಯುತಿಯಾಗುವಂತಹ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದಿಲ್ಲ. ಈ ವಿಷಯದಲ್ಲಿ ಅನಧಿಕೃತ ಸಂಘಟನೆಗಳಿಗೆ ಹಸ್ತಕ್ಷೇಪ ಮಾಡುವ ಅಧಿಕಾರವನ್ನು ಸಂವಿಧಾನ ಕೊಟ್ಟಿಲ್ಲ. ಇಂತಹ ನೈತಿಕ ಸಂಘಟನೆಗಳು ಶಿಕ್ಷಣಸಂಸ್ಥೆಯ ಆಡಳಿತ ಮಂಡಳಿ ಅಥವಾ/ಮತ್ತು ಪ್ರಾಂಶುಪಾಲರ ಅಥವಾ/ಮತ್ತು ಶಿಕ್ಷಕ ರಕ್ಷಕ ಸಂಘದ ಮೇಲೆ ಒತ್ತಡ ಹೇರುವುದು ಸಂಪೂರ್ಣವಾಗಿ ಕಾನೂನುಬಾಹಿರವಾಗುತ್ತದೆ. ಇಂತಹ ನಿರ್ಣಯಗಳನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸಬಹುದಾಗಿದೆ. ತಮಗಿಷ್ಟ ಬಂದ ಆದರೆ ಸಭ್ಯತೆಯ ಎಲ್ಲೆ ಮೀರದ ಬಟ್ಟೆಗಳನ್ನು ಧರಿಸುವ ಹಕ್ಕು ಪ್ರತಿಯೊಬ್ಬ ಪ್ರೌಢ ವಿದ್ಯಾರ್ಥಿ/ ವಿದ್ಯಾರ್ಥಿನಿಗೂ ಇದ್ದೇ ಇದೆ. ಭಾರತದ ಯುವಪೀಳಿಗೆ ದೇಶದ ಶ್ರೀಮಂತ ಬಹುಸಂಸ್ಕೃತಿಯ ಪರಂಪರೆಗೆ ಮಹತ್ವ ನೀಡುತ್ತ ಅದನ್ನು ಸಂರಕ್ಷಿಸುವ ಸಾಂವಿಧಾನಿಕ ಕರ್ತವ್ಯವನ್ನು ಪಾಲಿಸುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ.

ಶಿಕ್ಷಣಸಂಸ್ಥೆಗಳ ನೀತಿಸಂಹಿತೆಯಲ್ಲಿ ಇಷ್ಟು ವರ್ಷಗಳ ಕಾಲ ಇಲ್ಲದ ಸಮವಸ್ತ್ರ ಧರಿಸುವ ನಿಯಮ ಇತ್ತೀಚೆಗೆ ಏಕಾಏಕಿಯಾಗಿ ಕಾಣಿಸಿಕೊಳ್ಳುವುದರ ಹಿಂದಿನ ಉದ್ದೇಶಗಳನ್ನು ನಾವು ಗುರುತಿಸಬೇಕಾಗುತ್ತದೆ. ಕರಾವಳಿಯ ಕೋಟ್ಯಧಿಪತಿ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಕೂಡ 'ಕ್ಲಾಸ್‌ರೂಂಗಳಲ್ಲಿ ಸಮವಸ್ತ್ರ ತೊಡುವುದರಿಂದ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯನ್ನು ಪ್ರತಿಫಲಿಸಿದಂತಾಗುತ್ತದೆ' ಎಂದು ಆಗಸ್ಟ್ 19ರಂದು ಪತ್ರಿಕಾಭವನದಲ್ಲಿ ಹೇಳಿದರೆನ್ನಲಾಗಿದೆ. ಹಾಗಾದರೆ ಇದೇ ವಾದಸರಣಿಯನ್ನು ಮುಂದುವರಿಸಿ ಭಾರತದ ಸಮಸ್ತ ಪ್ರಜೆಗಳ ಉಡುಪುಗಳಿಗೂ ಅನ್ವಯಿಸಬಹುದಲ್ಲವೇ? ಅದು ಜನರ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯನ್ನು ತೋರಿಸುವುದೇ? ವಾದಸರಣಿಯನ್ನು ಆಹಾರಕ್ರಮ ಅಥವಾ ಮತ್ತಿತರ ಸಾಮಾಜಿಕ ಚಟುವಟಿಕೆಗಳಿಗೂ ವಿಸ್ತರಿಸಬಹುದಲ್ಲವೇ?

ಹೆಗ್ಗಡೆಯವರು ಯಾರ ಪರವಾಗಿದ್ದಾರೆ ಮತ್ತು ಯಾರ ಪರವಾಗಿ ಮಾತಾಡುತ್ತಿದ್ದಾರೆಂಬುದು ನಮಗೆಲ್ಲರಿಗೂ ಗೊತ್ತೇ ಇದೆ. ಹಿಟ್ಲರ್, ಮುಸೊಲಿನಿಯಂತಹ ಸರ್ವಾಧಿಕಾರಿಗಳು ಕೂಡ ಸಮವಸ್ತ್ರ ತೊಡಿಸಿದ್ದು ತಮ್ಮ ಖಾಸಗಿ ಪಡೆಗಳಿಗೆ.

(ಅ)ನೈತಿಕ ಪೊಲೀಸ್ ಕೆಲಸ ಮಾಡುತ್ತಿರುವ ಮೂಲಭೂತವಾದಿ ಸಂಘಟನೆಗಳು ಜನರಿಂದ ಕೆಲವು ಸತ್ಯಗಳನ್ನು ಮರೆಮಾಚಿ ಅವರನ್ನು ಮೌಢ್ಯ ಮತ್ತು ಅಜ್ಞಾನಗಳ ಕೂಪಕ್ಕೆ ತಳ್ಳಿ ಅಸತ್ಯಗಳನ್ನು ಸತ್ಯವೆಂದು ನಂಬಿಸುತ್ತಿರುವುದನ್ನು ಕಂಡಾಗ ಬೇಸರವಾಗುತ್ತಿದೆ. ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ ಮುಂತಾದ ರಾಜ್ಯಗಳಲ್ಲಿರುವ ಅನೇಕ ಹಿಂದೂ ಸಮುದಾಯಗಳಲ್ಲಿ ಸ್ತ್ರೀಯರು 'ಗೂಂಘಟ್' ಧರಿಸುವುದು ಕಡ್ಡಾಯವಾಗಿದೆ. ಸುತ್ತಿದ ಸೀರೆಯನ್ನು ತಲೆ ಮೇಲಕ್ಕೆ ತಂದು ಪೂರ್ತಿ ಮುಖವನ್ನು ಮುಚ್ಚುವ ಈ 'ಗೂಂಘಟ್' ಮತ್ತು 'ಬುರ್ಖಾ', 'ಶಿರವಸ್ತ್ರ', 'ಸ್ಕಾರ್ಫ್' ಇವೆಲ್ಲವುಗಳ ನಡುವೆ ಇರುವ ವ್ಯತ್ಯಾಸ ಕೇವಲ ಭಾಷಿಕ, ಆದರೆ ಉದ್ದೇಶ ಒಂದೆ.

ಸುಮಾರು ಪಬ್ ದಾಳಿಯಿಂದ ಆರಂಭವಾಗಿರುವ ಕರಾವಳಿಯ (ಅ)ನೈತಿಕ ಪೊಲೀಸ್‌ಗಳ ಕಾರ್ಯಾಚರಣೆ ಮುಂದುವರಿದು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಮೇಲಿನ ಹಲ್ಲೆ ಮುಂತಾದ ಘಟನೆಗಳು ಇಲ್ಲಿ ದಿನನಿತ್ಯವೆಂಬಂತೆ ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಇತ್ತೀಚಿನ 'ಸ್ಕಾರ್ಫ್' ನಿಷೇಧ ನೈತಿಕ ಪೊಲೀಸ್ ಕಾರ್ಯಾಚರಣೆಯ ಇನ್ನೊಂದು ಆಯಾಮವೆ ಹೊರತು ಇನ್ನೇನೂ ಅಲ್ಲ. ಪಬ್ ದಾಳಿ, ಬಸ್ ದಾಳಿಗಳೆಲ್ಲ ಬೀದಿ ಮಟ್ಟದ್ದಾದರೆ ಇದು ಮೇಲ್ಮಟ್ಟದ್ದು. ಅಲ್ಪಸಂಖ್ಯಾತರು ಎರಡನೆ ದರ್ಜೆಯ ಪ್ರಜೆಗಳಾಗಿ ಇರಬೇಕೆಂಬ ಮೂಲಭೂತವಾದಿಗಳ ಆಶಯ ಇದರ ಹಿಂದಿದೆ. ಇತ್ತೀಚಿನ ಕೆಲವು ವರ್ಷಗಳಿಂದ ಮುಸ್ಲಿಮರು ಅದರಲ್ಲೂ ವಿಶೇಷವಾಗಿ ಮುಸ್ಲಿಂ ಯುವತಿಯರು ಶೈಕ್ಷಣಿಕ ವಲಯದಲ್ಲಿ ಹೆಚ್ಚೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದು ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾಗಿದೆ. ಒಂದೆಡೆ ಮದ್ರಸಾ ಶಿಕ್ಷಣ ಮೂಲಭೂತವಾದಿಗಳನ್ನು ಸೃಷ್ಟಿಸುತ್ತದೆ ಎಂದು ದೂರುವ ಇದೇ ಶಕ್ತಿಗಳು ಹೆಚ್ಚೆಚ್ಚು ಮದ್ರಸಾಗಳಿಗೆ ಅನುಮತಿ ನೀಡುತ್ತವೆ ಮತ್ತು ಹೆಚ್ಚುವರಿ ಶಿಕ್ಷಣಸಂಸ್ಥೆಗಳನ್ನು ಆರಂಭಿಸಲು ಅನುಮತಿ ನಿರಾಕರಿಸುತ್ತವೆ. ಮುಸ್ಲಿಮರು ಕಲಿಯುವ ಹಕ್ಕನ್ನು ಕಸಿದು ಸಮುದಾಯವನ್ನು ಇನ್ನಷ್ಟು ಹಿಂದುಳಿದವರಾಗಿ ಇರಿಸುವ ಹುನ್ನಾರದ ಭಾಗವಾಗಿ 'ಸ್ಕಾರ್ಫ್' ವಿವಾದ ತಲೆಯೆತ್ತಿದೆ. ತಾಲಿಬಾನ್‌ಗೂ ಇಲ್ಲಿನ ಮೂಲಭೂತವಾದಿಗಳಿಗೂ ಏನು ವ್ಯತ್ಯಾಸ?

(ಅ)ನೈತಿಕ ಪೊಲೀಸ್ ಕಾರ್ಯಾಚರಣೆ, ಧಾರ್ಮಿಕಕ್ಷೇತ್ರಗಳ ಅಪವಿತ್ರೀಕರಣ ಮುಂತಾದವುಗಳ ಹಿಂದೆ ಇಲ್ಲಿನ ಸಮಾಜವನ್ನು ಗುಜರಾತ್ ಮಾದರಿಯಲ್ಲಿ ಧ್ರುವೀಕರಿಸುವ ಹುನ್ನಾರ ಅಡಗಿದೆ. ಚರ್ಚ್‌ಗಳ ಮೇಲಿನ ದಾಳಿಯಾಗಲಿ, ಪಬ್ ದಾಳಿಯಾಗಲಿ, ಮುಸ್ಲಿಂ ವಿದ್ಯಾರ್ಥಿಗಳ ಮೇಲಿನ ಹಲ್ಲೆಯಾಗಲಿ, ಪ್ರಾರ್ಥನಾಸ್ಥಳಗಳನ್ನು ಅಪವಿತ್ರಗೊಳಿಸುವ ಕೃತ್ಯಗಳಾಗಲಿ ಇವೆಲ್ಲವೂ ಕರಾವಳಿಯ ಜಿಲ್ಲೆಗಳನ್ನು 'ಗುಜರಾತ್' ಆಗಿಸುವ ಒಂದು ವ್ಯವಸ್ಥಿತ ಸಂಚಿನ ಭಾಗಗಳಾಗಿವೆ. ಗುಜರಾತ್‌ನಲ್ಲಿ 90ರ ದಶಕಗಳಿಂದ ಆರಂಭವಾದ ಅಲ್ಪಸಂಖ್ಯಾತರನ್ನು ಬಗ್ಗುಬಡಿಯುವ ಅಭಿಯಾನಗಳನ್ನು ಕರಾವಳಿಯ ಘಟನೆಗಳಿಗೆ ಹೋಲಿಸಬೇಕು. ಕರಾವಳಿಯಲ್ಲಿ ನಡೆಯುತ್ತಿರುವುದೆಲ್ಲ 'ಗುಜರಾತ್' ಪ್ರಯೋಗದ ಅಂಶವಾಗಿದೆ ಎಂಬುದು ಆಗ ಸ್ಪಷ್ಟವಾಗುತ್ತದೆ.

ಇಂತಹ ಸಂವಿಧಾನ ವಿರೋಧಿ ಷಡ್ಯಂತ್ರಗಳನ್ನು ರೂಪಿಸುವ ಸಂಘಟನೆಗಳಿಗೆ ಸೂಕ್ತ ಶಿಕ್ಷೆಯಾಗದಿರುವುದೇ ಅವು ಈ ರೀತಿಯಾಗಿ ವಿಜೃಂಭಿಸುತ್ತಿರುವುದಕ್ಕೆ ಕಾರಣ. ಇದನ್ನು ತಿಳಿಯಲು ಸಿಬಿಐ ತನಿಖೆಯ ಅಗತ್ಯವಿಲ್ಲ. ಇಂತಹ ಸಂಘಟನೆಗಳು ಯಾವುವೆಂದು ಜಿಲ್ಲಾಡಳಿತಕ್ಕೂ ಗೊತ್ತಿದೆ. ಬೇಹುಗಾರಿಕಾ ಇಲಾಖೆಗೂ ಗೊತ್ತಿದೆ. ಪೊಲೀಸ್ ಇಲಾಖೆಗೂ ಗೊತ್ತಿದೆ. ಅಂಗೈ ಮೇಲಿನ ಹುಣ್ಣಿಗೆ ಕನ್ನಡಿ ಬೇಕಾಗಿಲ್ಲ. ಮೂಲಭೂತವಾದಿ ಸಂಘಟನೆಗಳ ಪ್ರಮುಖರ ವಿರುದ್ಧ ಕಠಿಣ ಕ್ರಮ ಕೈಗೊಂಡರೆ ಮಾತ್ರ ಇಂತಹ ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸಾಧ್ಯ. ಕೆಲವು ಬಾಡಿಗೆಯ ಕಾಲಾಳುಗಳನ್ನು ಬಂಧಿಸುವ ನಾಟಕವಾಡುವುದು, ಅವರು ಜಾಮೀನಿನ ಆಧಾರದಲ್ಲಿ ಬಿಡುಗಡೆಯಾಗುವುದೆಲ್ಲ ಕೇವಲ ಕಣ್ಣೊರೆಸುವ ತಂತ್ರ. ಇಷ್ಟು ದುಡ್ಡು ಕೊಟ್ಟರೆ ಜೈಲಿಗೆ ಹೋಗಲು ಸಿದ್ಧರಿರುವ ಪ್ರತ್ಯೇಕ ಜೈಲುಹಕ್ಕಿಗಳೂ ಇದ್ದಾರೆಂಬುದು ಸರ್ವವಿದಿತ.

ಕರಾವಳಿ ಜಿಲ್ಲೆಗಳು ಒಂದು ಊಹಿಸಲೂ ಅಸಾಧ್ಯವಾದ ಭಯಾನಕ ಸಾಮಾಜಿಕ ಕ್ಷೋಭೆಯ ದಾರಿಯಲ್ಲಿ ಸಾಗುತ್ತಿರುವುದು ಜಿಲ್ಲಾಡಳಿತಕ್ಕೆ ಮತ್ತು ಪೊಲೀಸರಿಗೆ ಗೊತ್ತಾಗದಿರುವುದು ಅಥವಾ ಗೊತ್ತಾದರೂ ನಿಷ್ಕ್ರಿಯರಾಗಿರುವುದು ಪ್ರಜ್ಞಾವಂತ ನಾಗರಿಕರಲ್ಲಿ ಕಳವಳ ಉಂಟುಮಾಡುತ್ತಿದೆ. ಜಿಲ್ಲೆಯಲ್ಲಿ ಸಂವಿಧಾನ, ಶಾಂತಿ, ಸೌಹಾರ್ದ, ಜಾತ್ಯತೀತತೆ, ಕಾನೂನು, ಸುವ್ಯವಸ್ಥೆಗಳಿಗೆ ಏನಾದರೂ ಬೆಲೆ ಇದೆಯೇ ಎಂದು ಪ್ರಶ್ನಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ. ಈ ದುಷ್ಟ ಸಮಾಜ ವಿರೋಧಿ ಶಕ್ತಿಗಳು ಯಾರ ಭಯವೂ ಇಲ್ಲದೆ ತಮ್ಮ ಕಾನೂನುಬಾಹಿರ ಚಟುವಟಿಕೆಗಳನ್ನು ಮುಂದುವರಿಸುತ್ತಿರುವುದಾದರೂ ಹೇಗೆ? ಈ ಕುರಿತು ಸಂಬಂಧಪಟ್ಟವರಿಗೆ ನೀಡಿರುವ ಅಸಂಖ್ಯಾತ ದೂರುಗಳಿಂದ ಚಿಕ್ಕಾಸಿನ ಪ್ರಯೋಜನವೂ ಆಗಿರುವಂತಿಲ್ಲ. ರಾಜ್ಯದ ಪೊಲೀಸ್ ಮಹಾನಿರ್ದೇಶಕರು ಮೊಸಳೆ ಕಣ್ಣೀರು ಸುರಿಸುವುದಕ್ಕಷ್ಟೆ ಸೀಮಿತವಾಗಿದ್ದಾರೆ. ಇಂಗ್ಲಿಷ್‌ನಲ್ಲಿ "Charity begins at home" ಎನ್ನುವ ಮಾತೊಂದಿದೆ. ಅಂದರೆ ಸಮಾಜದಲ್ಲಿ ಏನನ್ನು ಸಾಧಿಸಬೇಕಿದ್ದರೂ ಅದನ್ನು ಮನೆಯಿಂದ ಆರಂಭಿಸಬೇಕು.

ಕರಾವಳಿ ಜಿಲ್ಲೆಗಳ ಗರಿಷ್ಠ ಪೊಲೀಸ್ ಠಾಣೆಗಳಲ್ಲಿ ಹಿಂದೂ ದೇವತೆಗಳ ಫೋಟೊಗಳನ್ನು ಇರಿಸಿರುವುದನ್ನೂ, ಗಂಧ, ಪುಷ್ಪ, ಧೂಪಾರ್ಚನೆ ಮತ್ತು ಪ್ರತಿ ಶುಕ್ರವಾರ ವಿದ್ಯುಕ್ತ ಪೂಜೆಗಳು ನಡೆಯುತ್ತಿರುವುದನ್ನೂ ಕಾಣಬಹುದು. ಇದು ಜಾತ್ಯತೀತ ಭಾರತದ ಠಾಣೆಯೋ ಅಥವಾ "ಹಿಂದೂ ರಾಷ್ಟ್ರ"ದ ಠಾಣೆಯೋ ಎಂದು ಮೈಚಿವುಟಿಕೊಳ್ಳುವಂತಹ ಪರಿಸ್ಥಿತಿ ಇಲ್ಲಿದೆ. ಜಿಲ್ಲಾಡಳಿತದ ಕಚೇರಿ ಸೇರಿದಂತೆ ಎಲ್ಲಾ ಸರಕಾರಿ ಕಚೇರಿಗಳಲ್ಲಿ ಕೂಡಾ ಇದೇ ತೆರನಾದ ಆಚರಣೆಗಳು ಸಾಮಾನ್ಯವಾಗಿಬಿಟ್ಟಿವೆ. ಇದೆಲ್ಲವೂ ಜನರಿಗೆ ಯಾವ ಸಂದೇಶವನ್ನು ನೀಡುತ್ತಿದೆ ಎಂಬುದರ ಕುರಿತು ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಕೊಂಚ ಯೋಚಿಸುವ ಸಮಯ ಬಂದಿದೆ. ಜಾತ್ಯತೀತತೆಯ ಮೌಲ್ಯಕ್ಕೆ ವಿರುದ್ಧವಾಗಿರುವ ಇಂತಹ ಆಚರಣೆಗಳನ್ನೆಲ್ಲ ನಿಲ್ಲಿಸಿದಾಗ ಕರಾವಳಿ ಜಿಲ್ಲೆಗಳಲ್ಲಿ ಕೋಮು ಸೌಹಾರ್ದತೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಅದೊಂದು ದಿಟ್ಟ ಹಾಗೂ ಪ್ರಥಮ ಹೆಜ್ಜೆಯಾಗಬಹುದು. ಉತ್ತಮ ಆಡಳಿತ ಮತ್ತು ಕಾನೂನುಪಾಲನೆಯ ಸೇವೆಗಳನ್ನು ಪ್ರಜೆಗಳಿಗೆ ಒದಗಿಸುವ ಸಲುವಾಗಿ ಪ್ರಜೆಗಳಿಂದಲೆ ಚುನಾಯಿತವಾದ ಸರಕಾರದಿಂದ ನೇಮಿಸಲ್ಪಟ್ಟವರು ತಮ್ಮ ಗಮನವನ್ನು ಇತ್ತ ಹರಿಸಲೇಬೇಕಲ್ಲವೇ? ಇದಕ್ಕೆ ಯಾವ ದೂರಾಗಲಿ ದೊಣ್ಣೆನಾಯಕನ ಅಪ್ಪಣೆಯಾಗಲಿ ಬೇಕೇ? ನಮಗೆ ಬೇಕಾಗಿರುವುದು ಭಾರತದ ಬ್ಯೂರೊಕ್ರಸಿಯ ಸುಪರಿಚಿತ ವಿಳಂಬನೀತಿಯ ಭಾಷೆಯಲ್ಲ. ಸಂಬಂಧಪಟ್ಟವರು ದುಷ್ಟ ಶಕ್ತಿಗಳಿಗೆ ಮಣಿಯದೆ ಸಂವಿಧಾನಬದ್ಧತೆ, ನೈತಿಕ ಸ್ಥೈರ್ಯ ಮತ್ತು ಇಚ್ಛಾಶಕ್ತಿಯಿಂದ ತಮ್ಮ ಕರ್ತವ್ಯ ನಿಭಾಯಿಸಿದರೆ ಏನನ್ನೂ ಸಾಧಿಸಬಹುದು.

ಬ್ರಿಟಿಷರ ಕಾಲದ ಮಹಾಹತುಶಾಹಿ ಮೌಲ್ಯಗಳಿಗೆ ಅನುಗುಣವಾಗಿ ರೂಪಿತವಾಗಿರುವ ಭಾರತದ ಅಧಿಕಾರಶಾಹಿ ಸ್ವಾತಂತ್ರ್ಯಾನಂತರದಲ್ಲಿ ಸಂವಿಧಾನದ ಮೌಲ್ಯ ಹಾಗೂ ಆಶಯಗಳಿಗೆ ಸೂಕ್ತವಾಗಿ ಸ್ಪಂದಿಸಿಯೇ ಇಲ್ಲ. ಐಎಎಸ್, ಐಪಿಎಸ್ ಪದವೀಧರರ ನಡುವಿನಲ್ಲಿ ಸರ್ವಿಸ್ ಅಂದರೆ ಸೇವಾ ಮನೋಭಾವ ಇರುವವರು ಕೇವಲ ಬೆರಳೆಣಿಕೆಯಷ್ಟು ಮಂದಿ ಎಂಬುದಕ್ಕೆ ಭಾರತದ ಸಂವಿಧಾನ ಮತ್ತು ವಿವಿಧ ಸಮುದಾಯಗಳಿಗೆ ಬಂದೊದಗಿರುವ ದುಃಸ್ಥಿತಿ ನಮ್ಮ ಕಣ್ಣಮುಂದೆ ಸಾಕ್ಷಿಯಾಗಿ ನಿಂತಿದೆ. ಕೆಲವೇ ಕೆಲವರನ್ನು ಹೊರತುಪಡಿಸಿದರೆ ಅಧಿಕಾರಿವರ್ಗ ಜನಸಾಮಾನ್ಯರಿಂದ ದೂರವಾಗಿದ್ದಾರೆ ಎಂಬ ಭಾವನೆ ಸಾರ್ವತ್ರಿಕ ವಾಗಿದೆ. ಸಂವಿಧಾನದ ಮೌಲ್ಯಗಳನ್ನು ಕಾಪಾಡಲು ಸಾಧ್ಯವಾಗದ ಅಧಿಕಾರಿಗಳು ನಮಗೆ ಬೇಕೇ? ಇಂದು ಭಾರತದಾದ್ಯಂತ ಅತ್ಯಧಿಕ ಸಂಖ್ಯೆಯಲ್ಲಿ ಬೇಕಾಗಿರುವುದು ಸಂವಿಧಾನವನ್ನು ಗೌರವಿಸುವ ಧೀಮಂತ ಅಧಿಕಾರಿಗಳು. ಆರ್.ಬಿ. ಶ್ರೀಕುಮಾರ್ ಮತ್ತು ರಾಹುಲ್ ಶರ್ಮರಂತಹ ಐಪಿಎಸ್ ಅಧಿಕಾರಿಗಳು. 2002ರಲ್ಲಿ ಗೋಧ್ರಾ ದುರಂತದಲ್ಲಿ ಸುಟ್ಟುಹೋಗಿದ್ದ ರೈಲ್ವೆ ಬೋಗಿಯನ್ನು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಅಹಮದಾಬಾದ್‌ಗೆ ಒಯ್ದು ಪ್ರದರ್ಶಿಸಲು ಬಯಸಿದಾಗ ಆತನಿಗೆ ಸೆಡ್ಡುಹೊಡೆದು ಅನುಮತಿ ನಿರಾಕರಿಸಿದ ಅಹಮದಾಬಾದ್ ಜಿಲ್ಲಾಧಿಕಾರಿ ಜಯಂತಿ ರವಿ ಮತ್ತು ಜೆ.ಎಸ್.ಬಾಣಾರಂತಹ ಐಎಎಸ್ ಅಧಿಕಾರಿಗಳು.

ಗಣೇಶ ಚೌತಿ-ಉಡುಪಿ ಸ್ಟೈಲ್

ಪುರುಷೋತ್ತಮ ಅಡ್ವೆ ಉಡುಪಿಯ ತರುಣ ...ದ. ಚಿತ್ರ ರಚನೆಯ ಜೊತೆಗೆ ಹೆರಿಟೇಜ್ ಕಟ್ಟಡಗಳ ...ಣೆಯಲ್ಲಿಯೂ ತನ್ನನ್ನು ತೊಡಗಿಸಿಕೊಂಡಿರುವ ಅಡ್ವೆ ...ವೃತ್ತಿ ಕಲಾವಿದ. ಅವರು ಹಲವು "ಒನ್‌ಮ್ಯಾನ್" ಕಲಾಪ್ರದರ್ಶನಗಳನ್ನು ನೀಡಿದ್ದಾರೆ.

ಜಯವಂತ್ ಮಣಿಪಾಲದ ಕೆ.ಎಂ.ಸಿ.ಯಲ್ಲಿ ...ಟಿಸ್ಟ್ ಹವ್ಯಾಸಿ ಕಲಾವಿದ. ಅನೇಕ ವರ್ಷಗಳಿಂದ ...ಲೆಯಲ್ಲಿ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವವರು. ...ಚಿತ್ರಗಳ ಅನೇಕ ಪ್ರದರ್ಶನಗಳು ನಡೆದಿವೆ.

...ಇಬ್ಬರು ಕಲಾವಿದರು ಕಳೆದ ವಾರ 'ಸನಾತನ ...ಎಂಬ ಹಿಂದೂ ಧರ್ಮ ಸಂರಕ್ಷಣೆಯ ಉದ್ದೇಶವುಳ್ಳ ...ನೆಯೊಂದರ ಬೆದರಿಕೆಗೆ ತಲೆಬಾಗಿ ಉಡುಪಿಯಲ್ಲಿ ...ರಡು ಬಾರಿ ತಮ್ಮ ಕಲಾಕೃತಿಗಳ ಪ್ರದರ್ಶನದ ...ನ್ನು ಬದಲಿಸಬೇಕಾಗಿ ಬಂತು. ವಿಶ್ವೇಶ್ವರ ಪರ್ಕಳ ...ಪಿಯ ಇನ್ನೋರ್ವ ವೃತ್ತಿನಿರತ ಕಲಾವಿದ. ಇವರು ... ಚಿತ್ರ ಕಲಾಶಾಲೆಯನ್ನು ನಡೆಸುತ್ತಿದ್ದು, ಅವರ ...ರ್ಷಗಳ ಕಲಾಪ್ರದರ್ಶನವನ್ನು ...ಪಿಯ ಹೋಟೆಲೊಂದರ ...ಗಣದಲ್ಲಿ ಏರ್ಪಡಿಸಿದ್ದರು. ...ನ ಸಂಸ್ಥೆಯವರ ಒತ್ತಡಕ್ಕೆ ...ಮ ಹೋಟೆಲಿನವರು ಆ ಪ್ರದ...ವನ್ನು ಸಹ ಕಡೆಯ ಗಳಿಗೆಯಲ್ಲಿ ...ಪಡಿಸಿದರು. ಲೋಕಖ್ಯಾತ ...ದ ಎಂ.ಎಫ್. ಹುಸೇನ್ ತನ್ನ ...ಳ ಪ್ರದರ್ಶನ ಹಾಗಿರಲಿ, ದೇಶ...ಗೆ ಕಾಲಿಡಲೂ-ಹೆದರಿಕೊಂಡು ...ಮರೆಸಿಕೊಂಡಿರುವಾಗ ಉಡು... ಕಲಾವಿದರೇನು ಮಹಾ ... ಉಪೇಕ್ಷಿಸಬೇಡಿ. ಈ ಕಲಾವಿ... ಹುಸೇನರಷ್ಟು ಹೆಸರು ಮಾಡದೆ ...ಹುದು. ಆದರೆ ಉಡುಪಿಗೆ ...ದ ರೋಗ ಖಂಡಿತ ಉಪೇಕ್ಷಿಸುವಂತಹದ್ದಲ್ಲ.



ಕಲಾಪ್ರದರ್ಶನವನ್ನು ವೀಕ್ಷಿಸುತ್ತಿರುವ ಶಿರೂರು ಸ್ವಾಮಿ...

...ಮೇಲೆ ಹೆಸರಿಸಿದ ಮೂವರು ಕಲಾವಿದರೂ ತಮ್ಮ ...ಪ್ರದರ್ಶನವನ್ನು ಗಣೇಶ ಚೌತಿಯ ಸಂದರ್ಭದಲ್ಲಿ ...ಡಿಸಿದ್ದರು. ಅವರ ಪ್ರದರ್ಶನದ ಥೀಮ್ ಕೂಡ ...ಶನ ವೈವಿಧ್ಯಮಯ ಅಭಿವ್ಯಕ್ತಿ ಆಗಿತ್ತು. ಎಂ.ಎಫ್. ...ನ್ ಮುಸ್ಲಿಮ್‌ನಾಗಿ (ಮತ್ತು ಆದ್ದರಿಂದ) ಹಿಂದೂ ...ತೆಗಳನ್ನು ನಗ್ನವಾಗಿ ಚಿತ್ರಿಸಿದರು ಎಂದು ಭಜರಂಗದಳ ...ವ ಸಂಘಟನೆಗಳು ಅವರ ವಿರುದ್ಧ ತಮ್ಮ ಗೂಂಡಾಗಿರಿಯನ್ನು ಸಮರ್ಥಿಸಿಕೊಳ್ಳುತ್ತವೆ. ದೇವತೆಗಳನ್ನು ನಗ್ನವಾಗಿ ಚಿತ್ರಿಸುವುದು ಭಾರತದಲ್ಲಿ ಹೊಸತೇನೂ ಅಲ್ಲ. ಹುಸೇನರಿಗೆ ಹಿಂದೂಗಳ ಬಗ್ಗೆಯಾಗಲೀ ಹಿಂದೂ ದೇವತೆಗಳ ಬಗ್ಗೆಯಾಗಲೀ ದ್ವೇಷವೂ ಇಲ್ಲ; ಅಗೌರವವೂ ಇಲ್ಲ; ಅವರ ಚಿತ್ರಗಳ ನಗ್ನತೆ, ಫೋಟೋಗಳಲ್ಲಿ ಕಾಣಿಸುವಂತಹ ವಾಸ್ತವಿಕ ನಗ್ನತೆಯೂ ಅಲ್ಲ. ಆದರೆ ಭಜರಂಗದಳದವರಿಗೆ ಇದನ್ನೆಲ್ಲ ವಿವರಿಸಿ ಪ್ರಯೋಜನವಿಲ್ಲ. "ಸಂಸ್ಕೃತಿ" ಎಂಬ ಶಬ್ದ ಕಿವಿಗೆ ಬಿದ್ದರೆ ಸಾಕು, ಹಿಟ್ಲರ್‌ನ ಮಂತ್ರಿ ಗೋಹೆರಿಂಗ್ ಪಿಸ್ತೂಲು ಎತ್ತಿಕೊಳ್ಳುವ ಹಾಗೆ ಭಜರಂಗಿಗಳು "ಕಲೆ" ಎಂದ ತಕ್ಷಣ ಬಡಿಗೆ ಕೈಗೆ ತೆಗೆದುಕೊಳ್ಳುತ್ತಾರೆ. ಹುಸೇನ್ ಓರ್ವ ಮುಸ್ಲಿಮ್ ಹಾಗೂ ಕಲಾವಿದನಾಗಿರುವುದರಿಂದ ಭಜರಂಗಿಗಳಿಗೆ ಅವರನ್ನು ದ್ವೇಷಿಸಲು ಎರಡೆರಡು ಕಾರಣಗಳು! ಹುಸೇನರನ್ನು ಕಂಡರೆ ಮುಸ್ಲಿಮ್ ಮೂಲಭೂತವಾದಿಗಳಿಗೂ ಅಷ್ಟಕ್ಕಷ್ಟೆ. 'ಕಲೆ ಎಂದರೆ ಅವರು ಚಾಕು ಎತ್ತಿಕೊಳ್ಳುವ ಪೈಕಿ. ಆದರೆ ಉಡುಪಿಯ ಅಡ್ವೆ, ಜಯವಂತ್ ಮತ್ತು ವಿಶ್ವೇಶ್ವರ, ಅವರ ಹೆಸರುಗಳೇ ಸೂಚಿಸುವಂತೆ ಹಿಂದೂಗಳು. ಆದಾಗ್ಯೂ ಅವರ ಚಿತ್ರ ಕಲಾಪ್ರದರ್ಶನವನ್ನು ಯಾಕೆ ಒಂದು ಹಿಂದೂ ಸಂಘಟನೆ ವಿರೋಧಿಸಿತು? ಈ ಮೂವರು ಕಲಾವಿದರೂ ಜನಪ್ರಿಯವಾಗಿರುವ ಗಣೇಶನ ಕ್ಯಾಲೆಂಡರ್ ಮಾದರಿಯ ಚಿತ್ರಣದ ಬದಲು ಭಾರತದ ಶಿಷ್ಟ ಹಾಗೂ ಜಾನಪದ ಪರಂಪರೆಗಳ ಗಣೇಶನ ವೈವಿಧ್ಯಮಯ ಅಭಿವ್ಯಕ್ತಿಯ ಸ್ಫೂರ್ತಿ ಪಡೆದು ತಮ್ಮ ಚಿತ್ರಗಳನ್ನು ರಚಿಸಿದ್ದರು. ಇದನ್ನು ಗ್ರಹಿಸಲು ಅವಶ್ಯವಾಗಿರುವ ಭಾರತೀಯ ಪರಂಪರೆಯ ತಿಳಿವಳಿಕೆಯಾಗಲೀ, ತಮಗೆ ಅರ್ಥವಾಗದ್ದನ್ನು ಸಹಿಸಿಕೊಳ್ಳುವ ಔದಾರ್ಯವಾಗಲೀ ಈ ಸನಾತನವಾದಿ ಹಿಂದೂ ಧರ್ಮ ಸಂರಕ್ಷಕರಿಗೆ ಇರಲಿಲ್ಲ!

ಈ ಮೂವರು ಕಲಾವಿದರಲ್ಲಿ ಅಡ್ವೆ ಮತ್ತು ಜಯವಂತ್ ಸನಾತನವಾದಿಗಳನ್ನು ಮುಖಾಮುಖಿಯಾಗಿ ಎದುರಿಸಿದವರು. ಅವರು ತಮ್ಮ ಪ್ರದರ್ಶನವನ್ನು ತಾ. 21.8.09 ರಿಂದ ಮೂರುದಿನ ಮಣಿಪಾಲದ ವ್ಯಾಲಿವ್ಯೂ ಹೋಟೆಲಿನ ಸಭಾಂಗಣದಲ್ಲಿ ಏರ್ಪಡಿಸಿದ್ದರು. ಅಡ್ವೆಯವರ ಆರು ಹಾಗೂ ಜಯವಂತರ ಏಳು ವರ್ಣಚಿತ್ರಗಳು ಪ್ರದರ್ಶನಗೊಳ್ಳಲಿದ್ದವು. ಈ ಚಿತ್ರಗಳಲ್ಲಿ ಗಣೇಶನಾಣೆಗೂ



ತನ್ನ ಕಲಾಕೃತಿಯನ್ನು ತೋರಿಸುತ್ತಿರುವ ಅಡ್ವೆ.........

ಯಾವ ಚಿತ್ರವೂ ಭಕ್ತಾದಿಗಳ ಮನ ನೋಯಿಸುವಂತಹವಾಗಿರಲಿಲ್ಲ. ಆದರೆ ಪ್ರದರ್ಶನ ಉದ್ಘಾಟನೆ ಆಗುವ ಮೊದಲೇ ಬೆಳಿಗ್ಗೆ 10 ಗಂಟೆಯ ಸುಮಾರಿಗೆ, ಸನಾತನ ಸಂಸ್ಥೆಯ ಸುಮಾರು 40 ಮಂದಿ -ಇಬ್ಬರನ್ನು ಹೊರತುಪಡಿಸಿ ಉಳಿದ ಎಲ್ಲರೂ ತರುಣರು-ಸಭಾಂಗಣದ ಒಳನುಗ್ಗಿ ಕಲಾವಿದರ ವಿರುದ್ಧ ಕೂಗಾಡತೊಡಗಿದರು. ಪ್ರದರ್ಶನದಲ್ಲಿ ಇರಿಸಿದ ಚಿತ್ರಗಳು ಸಂಪ್ರದಾಯಕ್ಕೆ ವ್ಯತಿರಿಕ್ತವಾಗಿವೆ ಎಂಬುದು ಅವರ ಆರೋಪವಾಗಿತ್ತು. ಅಡ್ವೆ ತನ್ನ ವರ್ಣಚಿತ್ರಗಳ ಮೂಲ ಮಾದರಿಗಳನ್ನು ಮುದ್ಗಲ ಪುರಾಣ ಮತ್ತು ರೂಪಲಕ್ಷಣ ಸಂಗ್ರಹ ಎಂಬ ಎರಡು ಪ್ರಾಚೀನ ಲಾಕ್ಷಣಿಕ ಗ್ರಂಥಗಳಿಂದ ಪಡೆದುಕೊಂಡಿದ್ದರು. ಜಯವಂತರ ವರ್ಣಚಿತ್ರಗಳು ಕೂಡ ಪರಂಪರಾಗತ ಭಾರತೀಯ ಚಿತ್ರಕಲೆಯ ಪ್ರಸ್ತುತಿಗಳನ್ನೇ ಆಧರಿಸಿದ್ದವು. ಇಬ್ಬರು ಕಲಾವಿದರೂ, ಪ್ರತಿಭಟನಾಕಾರರಿಗೆ ಇದನ್ನು ತಾಳ್ಮೆಯಿಂದ ವಿವರಿಸಿದರು. ಆದರೆ "ಧರ್ಮದ್ರೋಹಿಗಳ ವಿರುದ್ಧ ಹೋರಾಟ, ಸನಾತನಧರ್ಮ ರಕ್ಷಣೆ ಹಾಗೂ ಈಶ್ವರೀ ರಾಜ್ಯದ ಸ್ಥಾಪನೆಗೆ ಕಟಿಬದ್ಧರಾಗಿರುವ (ಹಾಗೆಂದು ಸನಾತನ ಸಂಸ್ಥೆಯ ಲೆಟರ್‌ಹೆಡ್‌ನಲ್ಲಿ ನಮೂದಿಸಲಾಗಿದೆ) ತರುಣರಿಗೆ ಕಲಾವಿದರ ವಿವರಣೆಗಳನ್ನು ಆಲಿಸುವ ವ್ಯವಧಾನವಿರಲಿಲ್ಲ. ಸನಾತನ ಸಂಸ್ಥೆಯ ಸ್ಥಳೀಯ ನೇತಾರ ಅಡ್ವೆಯವರಿಗೆ ಗಣೇಶನ ಒಂದು ಕ್ಯಾಲೆಂಡರ್ ಚಿತ್ರ ತೋರಿಸಿ, ನಿಮ್ಮ ಯಾವ ಚಿತ್ರವೂ ಇದರ ಹಾಗೆ ಯಾಕೆ ಇಲ್ಲ ಎಂದು ಕೇಳಿದನಂತೆ. "ಗಣೇಶ ಮತ್ತು ಇತರ ದೇವದೇವತೆಗಳನ್ನು ಆಧುನಿಕರಿಗೆ ಅಸಹ್ಯ ಎಂದು ಕಾಣಬಹುದಾದ ರೀತಿಯಲ್ಲಿ ಚಿತ್ರಿಸಿದ ತಾಂತ್ರಿಕ, ಜಾನಪದ ಮತ್ತು ಇನ್ನೂ ಹಲವು ಬಗೆಯ ಪ್ರಾಚೀನ ಭಾರತೀಯ ಚಿತ್ರಗಳು ನನ್ನ ಸಂಗ್ರಹದಲ್ಲಿ ಇವೆ. ಅವನ್ನೆಲ್ಲ ಈ ಹುಡುಗರು ನೋಡಿದರೆ ಏನನ್ನುತ್ತಿದ್ದರೋ" ಎಂದು ಅಡ್ವೆ ಈ ಘಟನೆಯ ನಂತರ ನನ್ನ ಬಳಿ ಮಾತಾಡುತ್ತ ಉದ್ಗರಿಸಿದರು!

ಸನಾತನ ಸಂಸ್ಥೆಯವರ ಪ್ರತಿಭಟನೆಗೆ ಮಣಿದು, ಅಡ್ವೆ ಮತ್ತು ಜಯವಂತ್ ತಮ್ಮ ಪ್ರದರ್ಶನವನ್ನು ಉಡುಪಿಯ ದೃಶ್ಯ ಆರ್ಟ್ ಗ್ಯಾಲರಿಗೆ ಸ್ಥಳಾಂತರಿಸಿದರು. ಇದು ಉಡುಪಿಯ ಏಕೈಕ ಸುಸಜ್ಜಿತ ಆರ್ಟ್ ಗ್ಯಾಲರಿ; ಇದರ ಒತ್ತಿಗೇ ಇರುವ ದೃಶ್ಯ ಸ್ಕೂಲ್ ಆಫ್ ಆರ್ಟ್ಸ್ ಉಡುಪಿಯ ಹೆಮ್ಮೆಯ ಚಿತ್ರಕಲಾ ಶಿಕ್ಷಣ ಸಂಸ್ಥೆ. ಇದನ್ನು ನಡೆಸುತ್ತಿರುವ ಯು. ರಮೇಶ ರಾವ್ ಸ್ವತಃ ರಾಷ್ಟ್ರೀಯ ಖ್ಯಾತಿಯ ಕಲಾವಿದ. ಆದಾಗ್ಯೂ ಸನಾತನ ಸಂಸ್ಥೆಯವರು ರಮೇಶ ರಾವ್ ಅವರಿಗೂ ಪ್ರತಿಭಟನೆಯ ಬೆದರಿಕೆ ಹಾಕಿದ್ದರಿಂದ ಕೊನೆಗೆ ಉಡುಪಿಯ ಎಂಟು ಮಠಗಳಲ್ಲಿ ಒಂದಾಗಿರುವ ಶಿರೂರು ಮಠದ ಸ್ವಾಮಿಗಳ ಅಭಯದ ಮೇರೆಗೆ ಈ ಪ್ರದರ್ಶನ ಮಠದ ಆವರಣದಲ್ಲಿ ನಿರ್ವಿಘ್ನವಾಗಿ ನಡೆಯಿತು! ಶಿರೂರು ಸ್ವಾಮಿಗಳು ಹಿಂದುತ್ವದ ಸಂಘಟನೆಗಳ ಜೊತೆ ನಿಕಟವಾಗಿ ತಮ್ಮನ್ನು ಗುರುತಿಸಿಕೊಂಡಿರುವವರು; ಈಗ ಅವರೇ ಕಲಾವಿದರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಎತ್ತಿ ಹಿಡಿಯುತ್ತಿದ್ದಾರೆ! ಅದೇ ವೇಳೆಗೆ ಸನಾತನ ಧರ್ಮದ ಸ್ವಘೋಷಿತ ಸಂರಕ್ಷಕರಿಗೆ ಒಂದು ಅಗ್ಗದ ಕ್ಯಾಲೆಂಡರ್ ಚಿತ್ರ, ಭಾರತೀಯ ಪರಂಪರೆಗೆ ದೃಷ್ಟಾಂತವಾಗುತ್ತದೆ! ಉಡುಪಿಯ ಕಲಾವಿದರು ಎದುರಿಸಬೇಕಾಗಿ ಬಂದ ದಾರುಣ ವ್ಯಂಗ್ಯ ಮತ್ತು ವಿಪರ್ಯಾಸಗಳ ಈ ಸನ್ನಿವೇಶ, ದಿ. ಎ.ಕೆ. ರಾಮಾನುಜನ್‌ರ ಪ್ರಬಂಧ "ತ್ರೀಹಂಡ್ರೆಡ್ ರಾಮಾಯಣಾಸ್"ದ ಪ್ರತಿಗಳನ್ನು ಎಬಿವಿಪಿಯ ತರುಣರು ದೆಹಲಿಯಲ್ಲಿ ಸಾರ್ವಜನಿಕವಾಗಿ ಸುಟ್ಟು ಪ್ರತಿಭಟಿಸಿದ್ದನ್ನು ನೆನಪಿಸುತ್ತದೆ. ಈ ಎರಡು ಘಟನೆಗಳೂ ಹಿಂದುತ್ವದ ನಿಜ ಸ್ವರೂಪವನ್ನು ಬಯಲು ಮಾಡುತ್ತವೆ. ಹಿಂದುತ್ವವೆಂದರೆ, ಹಿಂದೂಯೇತರರ ಕುರಿತ ದ್ವೇಷ ಮಾತ್ರವಲ್ಲ, ಪರಂಪರೆಯ ವಿಭಿನ್ನ ಬಗೆಯ ಓದು ಮತ್ತು ಅರ್ಥೈಸುವಿಕೆಗಳ ಕುರಿತ ಅತೀವ ಅಸಹನೆ ಕೂಡ ಹಿಂದುತ್ವದ ಸ್ವಭಾವದಲ್ಲೇ ಇದೆ. ಈ ಅಸಹನೆ, ಹಿಂದೂಗಳು ಮತ್ತು ಹಿಂದೂ ಏತರರ ನಡುವೆ ಬೇಧ ಎಣಿಸುವುದಿಲ್ಲ.

● ಜಿ. ರಾಜಶೇಖರ

ರಾಮುಭಕ್ತರ ಕಿವಿಗೆ ಕಮಲದ ಹೂ!

ಆರೆಸ್ಸೆಸ್ ಬ್ಯಾಂಕ್ ದಿವಾಳಿ

...ಇಷ್ಟು ದಿನ ಎನ್.ಆರ್.ಐ.ಗಳ ಹಣವನ್ನು ...ತಾಯಿಸುತ್ತದೆ ಎನ್ನುವ ಆರೋಪ ಹೊತ್ತಿದ್ದ ...ಸ್ ಈಗ ಸಹಕಾರಿ ಬ್ಯಾಂಕಿನಲ್ಲೂ ಲೂಟಿ ...ಸುವ ಮೂಲಕ ತನ್ನ ಫಾಲೋವರ್ಸ್ ಕಿವಿಗಳಿಗೆ ...ಸ ಮುಡಿಸಿದೆ! ಅದು ಅಂತಿಂಥ ಹೂವಲ್ಲ ...ಮು ಕೋಟಿಗಳ ಕಮಲದ ಹೂ!

...ಇದು ಬೆಂಗಳೂರಿನ ...ಜನಗರದಲ್ಲಿ ಹೆಡ್ಡಾಫೀಸ್ ...ದಿರುವ ದೀಪಕ್ ...ರಿ ಬ್ಯಾಂಕ್‌ನ ...ಕೋರತನ ಕತೆ. 1969 ...ಆರೆಸ್ಸೆಸ್ಸಿಗರಿಂದಲೇ ...ಟ್ಟು, ಸಂಘ ...ರದ 'ರಾಮಭಕ್ತ'ರನ್ನೇ ...ಕರನ್ನಾಗಿ ಹೊಂದಿರುವ ಈ ...ಗೆ ಆ ಕಾರಣಕ್ಕಾಗೇ ...ಸ್ ಬ್ಯಾಂಕ್ ಎಂಬ ಹೆಸರೂ ಇದೆ. ...ಟಕ್ಕೆ ಭಾರೀ ಲಾಭ ...ತ್ತಿದೆ ಎಂಬಂತೆ ಪ್ರಚಾರ ...ಕೊಳ್ಳುತ್ತಿದ್ದ ಈ ಬ್ಯಾಂಕ್ ತನ್ನ ...ಕರು, ಠೇವಣಿದಾರರನ್ನು ಕತ್ತಲಲ್ಲಿ ...ಟ್ಟೇ ಬಂದಿತ್ತು. ಇದನ್ನು ...ಸ್ ಸತ್ಸಂಗ' ಅಂತಲೂ ...ಬಹುದು. ಹೊರಗಡೆ ಥಳುಕು ...ಜು, ಒಳಗಡೆ ಬರೀ ಗಲೀಜು ... ಸೂತ್ರದಡಿ ಕೆಲಸ ಮಾಡಿದ ...ನೇಜ್‌ಮೆಂಟು ರಿಸರ್ವ್‌ಬ್ಯಾಂಕ್ ...ಆಡಿಟರುಗಳ ಕೈಗೆ ಸಿಕ್ಕಿಬಿದ್ದಿತ್ತು. ...ಕೋಟಿ ಲೂಟಿ ಹಾದಿಗಳನ್ನು ...ಸ ಬ್ಯಾಂಕಿನ ಮ್ಯಾನೇಜ್‌ಮೆಂಟು ಹಾದಿಯ ...ಕ, ಚಿತ್ರಹಿಂಸೆ, ರಕ್ಷಕರ ಸಂಬಳ ...ವನ್ನಾಗಿಯಾಗಿ

ಬೋಗಸ್ ಬಿಲ್‌ಗಳನ್ನು ಸೃಷ್ಟಿಸಿ ಎರಡು ಕೋಟಿ ಐವತ್ತು ಲಕ್ಷ ರೂ.ಗಳನ್ನು ಗಬಕ್ ಅಂತಾ ತಿಂದ್ಹಾಕಿ ರಾಮಭಜನೆಯಲ್ಲಿ ಮುಳುಗಿದ್ದ ಗ್ರಾಹಕರ ತಲೆಗೆ ಗೊತ್ತೇ ಆಗದಂತೆ ಕಲರ್ ಕಲರ್ ಟೋಪಿ ಹಾಕಿತ್ತು. ಬ್ಯಾಂಕಿನ ಅಧ್ಯಕ್ಷ ಕೃಷ್ಣಮೂರ್ತಿ ಮತ್ತು ನಿರ್ದೇಶಕ ಮಂಡಳಿಯ ಸದಸ್ಯರೆಲ್ಲ ಸೇರಿ ಈ ಹಣ ನುಂಗಿದ್ದಾರೆ ಎಂದು ಪತ್ತೆ ಮಾಡಿದ ಆರ್.ಬಿ.ಐ. ತನಿಖೆ ನಡೆಸುವಂತೆ ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ ಆದೇಶ ಹೊರಡಿಸಿತ್ತು. ಆಗ ಚಡ್ಡಿಗಳ ಮತ್ತೊಂದು ಲೂಟಿಯೂ ಪತ್ತೆಯಾಯ್ತು. ದಿಲ್ಲಿ ಮೂಲದ ಟೋಪಿವಾಲ ಎಂಬ ಹೇರು ದಲ್ಲಾಳಿಯೊಂದಿಗೆ ಶಾಮೀಲಾಗಿದ್ದ ಚಡ್ಡಿ ಮ್ಯಾನೇಜ್‌ಮೆಂಟು ಮತ್ತೆರಡೂವರೆ ಕೋಟಿಗಳನ್ನು ಸ್ವಾಹಾ ಮಾಡಿತ್ತು! ಹೀಗೆ ಒಟ್ಟು 5 ಕೋಟಿಗಳನ್ನು ಬ್ಯಾಂಕ್‌ನ ಅಧ್ಯಕ್ಷ ಕೃಷ್ಣಮೂರ್ತಿ ಮತ್ತು ನಿರ್ದೇಶಕರಿಂದ ವಸೂಲಿ ಮಾಡುವಂತೆಯೂ, ವಂಚಕರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆಯೂ ಬ್ಯಾಂಕ್‌ನ ಪ್ರಭಾರಿ ಸಿಇಓ ಕಾಂತ್‌ರಾಜ್‌ಗೆ ಆದೇಶಿಸಲಾಯ್ತು. ಎಲ್ಲ ನಿರ್ದೇಶಕರ ಮೇಲೂ ಭ್ರಷ್ಟಾಚಾರದ ಆರೋಪ ಹೊರಿಸಿದ ಆರ್‌ಬಿಐ ತಕ್ಷಣವೇ ಉತ್ತರಿಸುವಂತೆ ನೋಟಿಸ್ ನೀಡಿತು.



ವಿಜಯಕುಮಾರ್

ಆರೆಸ್ಸೆಸ್ಸಿಗರಿಂದ ಆರ್.ಬಿ.ಐ.ಗೂ ದೋಖಾ!

ಭಾರೀ 'ಪ್ರಾಮಾಣಿಕರು' ಎಂದು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವ ಚಡ್ಡಿಗಳು ಇಲ್ಲಿ ಗ್ರಾಹಕರ ಹಣ ಲೂಟಿ ಮಾಡಿದ್ದಲ್ಲದೇ, ಆರ್.ಬಿ.ಐ.ಗೂ ಸುಳ್ಳು ಹೇಳಿಬಿಟ್ಟರು. "ಹಿಂದಿನ ಸಿಇಓ ವಿಜಯಕುಮಾರ್ ಎನ್ನುವವರು ಹೇಳಿದಂತೆ ಕೇಳಿದ್ದೇವೆ. ನಮ್ಮದೇನೂ ತಪ್ಪಿಲ್ಲ. ಈಗ ವಿಜಯಕುಮಾರ್ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ" ಎಂದು ಆರ್‌ಬಿಐಗೆ ಹೇಳಿದ ಅಧ್ಯಕ್ಷ ಮತ್ತು ನಿರ್ದೇಶಕರುಗಳು ಆರ್‌ಬಿಐಗೆ ಐದು ಲಕ್ಷ ರೂ.ಗಳ ದಂಡ ಕಟ್ಟಿದರು.

ಆದರೆ ಮುಂದೆ ವಿಜಯಕುಮಾರ್ ಮೇಲೆ ನಾಮಕಾವಸ್ಥೆ ಕೇಸ್ ಬುಕ್ ಮಾಡಿ, 'ಬಿ' ರಿಪೋರ್ಟ್ ದಾಖಲಾಗುವಂತೆ ಮಾಡಿದರು. ನಂತರ ವಿಜಯಕುಮಾರನೊಂದಿಗೆ ಶಾಮೀಲಾಗಿ ತಿಪ್ಪೆ ಸಾರಿಸಿಬಿಟ್ಟರು. ಇವರೆಲ್ಲರ ಗುಪ್ತ ಒಪ್ಪಂದದಂತೆ ವಿಜಯಕುಮಾರ್ ನಾಪತ್ತೆಯಾಗಿಬಿಟ್ಟ. ಕೊನೆಗೆ ಈ ಆರೆಸ್ಸೆಸಿಗರನ್ನು ನಂಬಿದ್ದ ಚಡ್ಡಿ ಗ್ರಾಹಕರು ರಾಜಾಜಿನಗರ ಠಾಣೆಯಲ್ಲಿ ವಿಜಯಕುಮಾರ್ ವಿರುದ್ಧ ಚೀಟಿಂಗ್ ಕೇಸ್ ದಾಖಲಿಸಿದರು.

ಇಷ್ಟಾದರೂ ಗ್ರಾಹಕರ ರಕ್ಷಣೆಗೆ ಬರುತ್ತಿಲ್ಲ ಬಿಜೆಪಿ ಸರ್ಕಾರ. ಕಳೆದ ಅಧಿವೇಶನದಲ್ಲಿ ಬಿಜೆಪಿ ಶಾಸಕ ನೆಹರೂ ಓಲೇಕಾರ್ ಈ ವಿಷಯ ಪ್ರಸ್ತಾಪಿಸಿ ಆ ಬ್ಯಾಂಕ್ ಅನ್ನು ಸೂಪರ್‌ಸೀಡ್ ಮಾಡಿ ಎಂದರು. ಅದಕ್ಕೆ ಸಹಕಾರ ಸಚಿವ ಲಕ್ಷ್ಮಣ ಸವದಿ ಹೂಂ



ಎಂದರು. ಆದರೆ ಕೇಶವಶಿಲ್ಪದ ಕಾಣದ ಕೈಗಳ ಕೈವಾಡದಿಂದ ತನಿಖೆ ನಡೆಯಲೇ ಇಲ್ಲ. 'ಜೈ ಶ್ರೀರಾಮ್' ಎನ್ನುತ್ತಿದ್ದ ಗ್ರಾಹಕರೀಗ 'ರಾಮಾ ರಾಮಾ, ಗೋವಿಂದಾ ಗೋವಿಂದಾ' ಎನ್ನುತ್ತಿದ್ದಾರೆ. ಅವರ ಕಿವಿಗಳ ಮೇಲಿನ ಚಡ್ಡಿಗಳ ಕಮಲ ರಾರಾಜಿಸುತ್ತಲಿದೆ!

ಹಿಂದೆಲ್ಲ ಹಿಂದೂಧರ್ಮದ ಉದ್ಧಾರಕ್ಕೆಂದು ಎನ್‌ಆರ್‌ಐಗಳಿಂದ ಹಣ ವಸೂಲು ಮಾಡಿ, ಇಲ್ಲಿ ಕೋಮುಗಲಭೆಗಳಿಗೆ ಆ ಹಣವನ್ನು ಬಳಸುತ್ತಿದ್ದ ಸಂಘಪರಿವಾರವು ದೇಸಿ 'ಬೇಸ' ಭಕ್ತರಿಗೂ ಟೋಪಿ ಹಾಕುತ್ತಲೇ ಇರುತ್ತದೆ ಎನ್ನುವುದಕ್ಕೆ ಇದೊಂದು ಸಣ್ಣ ನಿದರ್ಶನವಷ್ಟೇ!

[illegible]! ಗಯಾರಾಮ್! ಜೈ ಶ್ರೀರಾಮ್!!


● ಮಲ್ಲನಗೌಡರ್ ಪಿ.ಕೆ.

ಸಂಸ್ಕೃತ : ಪುರೋಹಿತರ ಪಿತೂರಿ

ಜುಟ್ಟು ಹೋಗಲಿ, ಜನಿವಾರ ಉಳಿಯಲಿ

ವಿಶ್ವದ ನಂಬರ್ ಒನ್ ಕನ್ನಡ ಪತ್ರಿಕೆ ಎಂಬ ಪ್ರಖ್ಯಾತಿಯ ಜೊತೆಗೆ ಪುರೋಹಿತಶಾಹಿಯ ಕರಪತ್ರ ಎಂಬ ಕುಖ್ಯಾತಿಯನ್ನೂ ಪಡೆದ ಪತ್ರಿಕೆಯೊಂದು ಸಂಸ್ಕೃತ ವೇದ ವಿಶ್ವವಿದ್ಯಾಲಯ ಕುರಿತು ಬಹಿರಂಗ ಚರ್ಚೆಯನ್ನು ಮುಂದುವರೆಸಿದೆ. ಒಂದು ವಲಯದ ಸಾಹಿತಿಗಳು-ಚಿಂತಕರು ವಿರೋಧಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಕೂಡಾ ಅಧಿಕೃತವಾಗಿ ಸರಕಾರಕ್ಕೆ ತನ್ನ ನಿಲುವು ತಿಳಿಸಿ, ಇಂಥ ವಿ.ವಿ.ಯ ಸ್ಥಾಪನೆಯ ವಿಚಾರ ಕೈಬಿಡಲು ಆಗ್ರಹಿಸಿದೆ. ಸದನದಲ್ಲಿ ಜನಪ್ರತಿನಿಧಿಗಳೂ ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ.

ಇಂಥ 'ವಿಷಮ' ವಾತಾವರಣದಲ್ಲಿ ಪುರೋಹಿತ ವಲಯ ಯಥಾಪ್ರಕಾರ ತನ್ನ ಹುಡ್ಸರಿಯನ್ನು ಅಖಾಡಕ್ಕೆ ಇಳಿಸಿದೆ. ಅದೇ ಭೈರಪ್ಪ ಜನಪ್ರಿಯ ಲೇಖಕ ಮತ್ತು ಅನಂತಮೂರ್ತಿ ಹೇಳಿದಂತೆ, ಒಬ್ಬ ವಾಕ್ಪಟು. ಚಿಮೂ ಕೂಡಾ ಈ ಕೆಲಸಕ್ಕೆ ಸಮರ್ಥರೇ. ಆದರೆ ಅವರು ಚೆಡ್ಡಿಧಾರಿಗಳಾದ ನಂತರ ಅವರ 'ಎತ್ತರ' ಇದ್ದಷ್ಟೇ ಇದ್ದರೂ 'ವಜನ' ಮಾತ್ರ ಕಡಿಮೆಯಾಗಿದೆ.



ಸಂಸ್ಕೃತದ ಮಹಿಮೆ: ಅದು ಸತ್ತಿದೆಯೋ ಬದುಕಿದೆಯೋ; ಅದಕ್ಕೂ ಕನ್ನಡಕ್ಕೂ ಏನು ನಂಟು-ಇತ್ಯಾದಿ ಕುರಿತು ಅಕಾಡೆಮಿಕ್ ಚರ್ಚೆ ಸಾಗಿದೆ. ಆದರೆ ತೆರೆಮರೆಯ ರಾಜಕೀಯ ಹುನ್ನಾರಗಳ ಬಗ್ಗೆ ಚಿಂತನೆ ನಡೆದಿಲ್ಲ. ದೇಶದಲ್ಲಿ ಈಗಾಗಲೇ ಹರಡಿರುವ ಸಂಸ್ಕೃತ ಶಿಕ್ಷಣ ಸಂಸ್ಥೆಗಳ ಮೇಲೆ ಪ್ರತಿವರ್ಷ ಸಾವಿರಾರು ಕೋಟಿಯಷ್ಟು ಸಾರ್ವಜನಿಕ ಹಣ ಪೋಲಾಗುತ್ತಿದೆ. ಹೀಗಿರುವಾಗ ಕರ್ನಾಟಕದಲ್ಲಿ- ಅದೂ ಬಿಜೆಪಿ ಸರ್ಕಾರವಿದ್ದಾಗಲೇ- ಇಂಥ ವಿವಿ ಸ್ಥಾಪನೆಗೆ ಮುಂದಾದದ್ದು ಸಂಘಪರಿವಾರದ ಅಜೆಂಡಾದ ಅನುಷ್ಠಾನದ ಪ್ರಯತ್ನವೇ. ಈ ವಿಶ್ವವಿದ್ಯಾಲಯ ಸಂಸ್ಕೃತವನ್ನು 'ಭಾಷೆ'ಯಾಗಿ ಕಲಿಸುವುದಿಲ್ಲ, ಅಲ್ಲಿ ನಡೆಯುವುದು ಸಂಸ್ಕೃತ ಕೇಂದ್ರೀಕೃತ ಅಧ್ಯಯನ ಮಾತ್ರ. ಅದನ್ನು ಮಾಡುವವರು ಈಗಾಗಲೇ ಈ ಭಾಷೆಯಲ್ಲಿ ಪರಿಣತಿ-ಪಾಂಡಿತ್ಯ ಪಡೆದವರು ಮಾತ್ರ. ಅವರು ಯಾವ ಸಾಮಾಜಿಕ ವರ್ಗಕ್ಕೆ ಸೇರಿದವರು?

ಅರ್ಥಾತ್ ಸಾವಿರಾರು ವರ್ಷಗಳಿಂದ ಬಹುಜನ ಸಮುದಾಯಕ್ಕೆ "ದುಡಿಯುವುದು ನಿಮ್ಮ ಕರ್ಮ; ತಿನ್ನುವುದು ನಮ್ಮ ಧರ್ಮ" ಎಂದು ಹೇಳುತ್ತಾ, ಪುಕ್ಕಟೆ ಕೂಳು ತಿಂದು ಕೊಬ್ಬುತ್ತಿರುವ ಪುರೋಹಿತ ಸಂತಾನವೇ ಈ ಸಂಸ್ಕೃತ ವಿ.ವಿ.ಯ ಮುಖ್ಯ ಫಲಾನುಭವಿಗಳು! ಇದು ಒಂದು ರೀತಿಯಲ್ಲಿ ಮುದಿ ಪ್ರಾಣಿಗಳಿಗೆ ಮೇವು ತಿನ್ನಿಸುತ್ತಿರುವ ರಾಮಚಂದ್ರಾಪುರ ಮಠದ ಗೋಶಾಲೆಯಂತೆ!

******

ಭೈರಪ್ಪಾದಿಗಳ ಇನ್ನೊಂದು ರಾಜಕೀಯ ನೋಡಿರಿ. ಅವರು ಹೇಳುತ್ತಾರೆ; "ಸಂಸ್ಕೃತ ವೇದ ವಿವಿ ಬೇಡ; ಬರೀ ಸಂಸ್ಕೃತ ವಿವಿ ಸಾಕು" ಈ ರಾಗಕ್ಕೆ ವೆಂಕಟಸುಬ್ಬಯ್ಯ, ಎಲ್‌ಎಸ್‌ಎಸ್ ಚಿಮೂ ಮುಂತಾದವರು ದನಿ ಕೂಡಿಸಿದ್ದಾರೆ. ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ-ಎಂಬ ಉಕ್ತಿ ಇದೆ. ಈ ಪಂಡಿತರು ಈಗ 'ವೇದ'ವನ್ನು ತ್ಯಾಗಮಾಡಲು ತಯಾರಾಗಿದ್ದಾರೆ. ಅವರ ಘೋಷಣೆ : "ಜುಟ್ಟು ಹೋಗಲಿ, ಜನಿವಾರ ಉಳಿಯಲಿ." ಅವರ ಲೆಕ್ಕಾಚಾರ ಸ್ಪಷ್ಟವಿದೆ. ಜುಟ್ಟು ಮತ್ತೆ ನಿಧಾನವಾಗಿ ಅಂಕುರಿಸುತ್ತದೆ. ಅದನ್ನು ಕ್ರಾಪಿನಲ್ಲಿ ಬಚ್ಚಿಟ್ಟುಕೊಂಡರಾಯಿತು. ಜನಿವಾರ ಉಳಿಯುವುದು ಈಗ ಮುಖ್ಯ.

******


ಪತ್ರಿಕೆಗಳಲ್ಲಿ ಪುಟಗಟ್ಟಲೇ ನಡೆದಿರುವ ವಿವಾದ ತಾರ್ಕಿಕ ಕೊನೆಮುಟ್ಟುವ ಸಾಧ್ಯತೆ ಇಲ್ಲ. ಮೊದಲ ಲೇಖನ ಬರೆದ ಭೈರಪ್ಪನವರೇ ಕೊನೆಯ ಲೇಖನ ಬರೆಯುತ್ತಾರೆ. ಅವರ ವಾದಸರಣಿಯಲ್ಲೂ ಮೂಲಭೂತ ವ್ಯತ್ಯಾಸವೇನೂ ಇರುವುದಿಲ್ಲ. ಇದ್ದು ಗ್ಯಾರಂಟಿ ಮಾತು.

******

1980-82ರ ಗೋಕಾಕ ಚಳವಳಿಗೆ ಪ್ರಚೋದನೆ ಸಿಕ್ಕಿದ್ದೂ 'ಸಂಸ್ಕೃತ'ದ ಸಮಸ್ಯೆಯಿಂದಲೇ. ಆ ಚಳವಳಿಯ ಹೊಡೆತಕ್ಕೆ ಗುಂಡೂರಾವ್ ಸರ್ಕಾರ ಇತಿಹಾಸದ ಗಟಾರ ಸೇರುವಂತಾಯಿತು. ಆ ಕಾಲದ ಕನ್ನಡ ಕಟ್ಟಾಳುವಾಗಿದ್ದ ಚಿದಾನಂದಮೂರ್ತಿ ಈಗ 'ಆಪರೇಷನ್ ಸಂಸ್ಕೃತ'ಕ್ಕೆ ಬಲಿಯಾಗಿ ಸಂಸ್ಕೃತವಾದಿಗಳ ಶಂಖವಾಗಿದ್ದಾರೆ! ಸಂಘಪರಿವಾರದ ಪರಿಚಾರಕರಾಗಿದ್ದಾರೆ! ಇಂಥ ಕುಲಕಂಟಕರಿಂದಾಗಿಯೇ ಕನ್ನಡಾಂಬೆ ಇಂದಿಗೂ ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದಾಳೆ.

ಗೋಕಾಕ ಚಳವಳಿಯ ಸುಂಟರಗಾಳಿ ಮತ್ತೆ ಬೀಸುವಂತಾದೀತೇ?

● ಚಂಪಾ



[illegible]
[illegible]
[illegible]

ಈ ಮನೆಯ ಗಾಯಕ್ಕೆ ಒಳಗೂ-ಹೊರಗೂ
[illegible]
[illegible]
[illegible]

[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]

● ಕೆ. ಪಾರಿಜಾತ

ವೇದಿಕೆ ವಿರುದ್ಧ ಸಂಘಪರಿವಾರಿಗಳ ಸಂಚು

'ವಿಜಯ ಕರ್ನಾಟಕ'ದ 19.08.2009ರ ಸಂಚಿಕೆಯ ಮಂಗಳೂರು ಆವೃತ್ತಿಯಲ್ಲಿ ಪ್ರಕಟವಾದ 'ಇನ್ಸ್‌ಪೆಕ್ಟರ್ ತಂದೆ ಮನೆಯಲ್ಲಿಯೇ ನಕ್ಸಲರ ಆದಾಲತ್' ಎನ್ನುವ ವರದಿಯ ಜೊತೆಗೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ರಾಜ್ಯ ಕಾರ್ಯದರ್ಶಿ ಕೆ.ಎಲ್.ಅಶೋಕ್ ಬಗ್ಗೆ 'ನಿದ್ದೆ ಬರದಂತೆ ಮಾಡ್ತೇವೆ ಅಂದಿದ್ದರು ಅಶೋಕ್' ಎನ್ನುವ ಬಾಕ್ಸ್ ಐಟಂ ಒಂದನ್ನು ಹಾಕಿದೆ. ಸದರಿ ಪತ್ರಿಕೆ ಸಂಘಪರಿವಾರದ ಬಾಲಬಡುಕ ಕರಪತ್ರಗಳಲ್ಲೊಂದು ಎನ್ನುವುದು ನಾಡಿನ ಪ್ರಜ್ಞಾವಂತ ನಾಗರಿಕರೆಲ್ಲರಿಗೂ ಗೊತ್ತಿದೆ. ಆದುದರಿಂದ ಕಕೋಸೌ ವೇದಿಕೆಯ ವಿರುದ್ಧ ಅಪಪ್ರಚಾರ ನಡೆಸುವ ಸಂಘಪರಿವಾರದ ನೀತಿಯ ಭಾಗವಾಗಿ ಈ ಬಾಕ್ಸ್ ಐಟಂ ಪ್ರಕಟವಾಗಿದೆ ಎನ್ನುವುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. 'ವಿಜಯ ಕರ್ನಾಟಕ' ಮತ್ತೊಂದೆರಡು ಕೇಸರಿ ಪತ್ರಿಕೆಗಳ ಈ ಬಾಕ್ಸ್ ಐಟಂ ಸುದ್ದಿ ದುರುದ್ದೇಶಪೂರಿತವೂ ಸಂಪೂರ್ಣ ಆಧಾರರಹಿತವೂ ಆಗಿದೆ. ಇದನ್ನು ವೇದಿಕೆ ಬಲವಾಗಿ ಖಂಡಿಸುತ್ತದೆ ಮತ್ತು ಇಂತಹ ಸುಳ್ಳು ಸುದ್ದಿಯನ್ನು ಪ್ರಕಟಿಸಿದ್ದಕ್ಕಾಗಿ ಸದರಿ ಪತ್ರಿಕೆಗಳು ಬೇಷರತ್ ಕ್ಷಮಾಪಣೆ ಯಾಚಿಸಬೇಕೆಂದು ಆಗ್ರಹಿಸುತ್ತದೆ.

ವೆಂಕಟೇಶ್ ಪ್ರಸನ್ನ ಎನ್ನುವ ಕೇಸರಿ ಪೊಲೀಸ್ ಅಧಿಕಾರಿಯ ವರ್ಣರಂಜಿತ ಚರಿತ್ರೆ ಕರ್ನಾಟಕದ ನಾಲ್ಕು ದಿಕ್ಕುಗಳಲ್ಲೂ ಜನಜನಿತವಾಗಿದೆ. ಆದರೂ ಮತ್ತೊಮ್ಮೆ ನೆನಪಿಸುವ ಸಲುವಾಗಿ ಹೇಳುತ್ತಿದ್ದೇವೆ. ವೆಂಕಟೇಶ ಪ್ರಸನ್ನರ ಸೋದರ ರವೀಂದ್ರ ಎನ್ನುವವರು ಸಂಘಪರಿವಾರದ ಸಕ್ರಿಯ ಕಾರ್ಯಕರ್ತ. ವೆಂಕಟೇಶ್ ಪ್ರಸನ್ನ ಕೂಡ ಸಂಘಪರಿವಾರಕ್ಕೆ ಬಹಳ ಆಪ್ತ ವ್ಯಕ್ತಿಯಾಗಿದ್ದು ಕಟ್ಟಾ ಅಲ್ಪಸಂಖ್ಯಾತ ವಿರೋಧಿಯೆಂದು ಸುಪರಿಚಿತರಾಗಿದ್ದಾರೆ. ಈತ ಟಿಂಬಕ್ಟೂಗೆ ವರ್ಗಾವಣೆಗೊಂಡರೂ ಅತಿ ಶೀಘ್ರದಲ್ಲಿ ಕರಾವಳಿಗೆ ಮರಳಿ ಬರುವುದರ ಒಳಗುಟ್ಟು ಇಲ್ಲಿದೆ.

ಪೊಲೀಸ್ ಕಸ್ಟಡಿಯಲ್ಲಿದ್ದ ಕಾರೊಂದನ್ನು ಕಾನೂನುಬಾಹಿರವಾಗಿ ಸ್ವಂತಕ್ಕೆ ಬಳಕೆ ಮಾಡಿ ತನ್ನ ಐಪಿಎಸ್ ಪದವಿಯ ಘನತೆಗೇ ಚ್ಯುತಿ ತಂದ ವ್ಯಕ್ತಿ ಈತ. ಲೋಕಾಯುಕ್ತ ದಾಳಿಯಲ್ಲಿ ಸಿಕ್ಕಿಬಿದ್ದ ನಂತರ ತನಿಖೆಯೂ ನಡೆದಿತ್ತು. ಇಲಾಖೆಯ ಆಂತರಿಕ ತನಿಖೆಯ ತರುವಾಯ ಈತನನ್ನು ಜಿಲ್ಲೆಯಿಂದ ಹೊರಗೆ ವರ್ಗಾವಣೆ ಮಾಡಲಾಗಿತ್ತು. ಆದರೆ ವಶೀಲಿಬಾಜಿ ತಂತ್ರ ಬಳಸಿ ಅಪರಾಧ ತನಿಖೆ ದಳದಲ್ಲಿ ಇನ್ಸ್‌ಪೆಕ್ಟರ್ ಆಗಿ ಪುನಃ ಮಂಗಳೂರು ಜಿಲ್ಲೆಗೆ ಮರಳಿಬಂದಿದ್ದಾರೆ. ಡಿಜಿಪಿ ಈತನ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕೆಂದು ಐಜಿಪಿಯವರಿಗೆ ಲಿಖಿತವಾಗಿ ಆದೇಶಿಸಿದ್ದಾರೆ. ಆದರೆ ಈವರೆಗೆ ಯಾವ ಕ್ರಮವೂ ಜರುಗಿಲ್ಲದಿರುವುದು ಈತ ಸಂಘಪರಿವಾರದೊಂದಿಗೆ ಹೊಂದಿರುವ ನಂಟಿನ ಪ್ರಾಬಲ್ಯವನ್ನು ತೋರಿಸುತ್ತದೆ.

ವಿಜಯ ಕರ್ನಾಟಕ



ಜಿಲ್ಲೆಯಲ್ಲಿ ನಡೆದ ಎನ್ಕೌಂಟರ್ ಸಾವುಗಳ ಪೈಕಿ ಕನಿಷ್ಠ ಎರಡರಲ್ಲಿ ವೆಂಕಟೇಶ ಪ್ರಸನ್ನರ ಕೈವಾಡ ಇರುವುದನ್ನು ಮಂಗಳೂರಿನ ಅತ್ಯಂತ ಹಿರಿಯ, ಗೌರವಾನ್ವಿತ ವಕೀಲ ಪುರುಷೋತ್ತಮ ಪೂಜಾರಿಯವರ ಜ್ಯೂನಿಯರ್ ಆಗಿದ್ದ ಪ್ರತಿಭಾನ್ವಿತ ಯುವ ವಕೀಲ ನೌಷಾದ್ ಗುರುತಿಸಿದ್ದರು. ಪ್ರಸನ್ನ ಈ ಎರಡೂ ಪ್ರಕರಣಗಳಲ್ಲಿ ಆರೋಪಿಯಾಗಿದ್ದಾರೆ. ಇದೇ ನೌಷಾದ್ ಇತ್ತೀಚೆಗೆ ಕೊಲೆಗೀಡಾದರು. ಇದಕ್ಕೆ ಸಂಬಂಧಿಸಿದಂತೆ ಆಗಸ್ಟ್ 18ರಂದು ಮಂಗಳೂರಿನ ನ್ಯಾಯಾಲಯದಲ್ಲಿ ಒಂದು ಮಹತ್ವದ ಘಟನೆ ನಡೆದಿದೆ. ಹೈಕೋರ್ಟು ನೀಡಿದ್ದ ಆದೇಶದಂತೆ ಪುರುಷೋತ್ತಮ ಪೂಜಾರಿಯವರು ಅಂದು ಮಂಗಳೂರಿನ ನ್ಯಾಯಾಲಯದಲ್ಲಿ ಒಂದು ವಿಶೇಷ ಅರ್ಜಿ ಸಲ್ಲಿಸಿದ್ದಾರೆ. ಸಾಂದರ್ಭಿಕ ಪುರಾವೆ ಇತ್ಯಾದಿಗಳೊಂದಿಗೆ ಪೂರ್ವಸಿದ್ಧತೆ ಮಾಡಿಕೊಂಡ ಪೂಜಾರಿಯವರು ನೌಷಾದ್ ಕೊಲೆ ಪ್ರಕರಣದಲ್ಲಿ ಈಗಾಗಲೆ ಹೆಸರಿಸಲಾಗಿರುವ 12 ಆರೋಪಿಗಳ ಪಟ್ಟಿಗೆ ನಾಲ್ವರು ಪೊಲೀಸರ ಹೆಸರುಗಳನ್ನೂ ಸೇರಿಸಬೇಕೆಂದು ಕೋರಿದ್ದಾರೆ. ಈ ನಾಲ್ವರು ಪೊಲೀಸ್ ಅಧಿಕಾರಿಗಳ ಪೈಕಿ ಒಬ್ಬ ಇದೇ ವೆಂಕಟೇಶ ಪ್ರಸನ್ನ.

ಹೀಗೆ ಈ ಎಲ್ಲ ಬೆಳವಣಿಗೆಗಳಿಂದ ವೆಂಕಟೇಶ ಪ್ರಸನ್ನ ವಿಚಲಿತರಾಗಿದ್ದಾರೆ. ಈಗ ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿಯ ಆಸರೆಯೆಂಬಂತೆ, ನೌಷಾದ್ ಹತ್ಯೆ ನಂತರದಲ್ಲಿ ಮಂಗಳೂರಿನಲ್ಲಿ ನಡೆದಿದ್ದ ಸಂತಾಪಸೂಚಕ ಸಭೆಯಲ್ಲಿ ಅಶೋಕ್ ಹೇಳಿದ್ದಕ್ಕೂ ನಕ್ಸಲರ ಬೆದರಿಕೆಗೂ ಕಪೋಲಕಲ್ಪಿತ ಸಂಬಂಧ ಆರೋಪಿಸಿ ಸಂಘಪರಿವಾರದ ಮುಖವಾಣಿ ಪತ್ರಿಕೆಗಳಲ್ಲಿ ಆಗಸ್ಟ್ 19ರಂದು ಪ್ರಕಟವಾಗುವಂತೆ ನೋಡಿಕೊಂಡಿದ್ದಾರೆ. ಇದನ್ನೆಲ್ಲ ಸಾರ್ವಜನಿಕರಲ್ಲಿ ತನ್ನ ಬಗ್ಗೆ ಅನುಕಂಪ ಸೃಷ್ಟಿಸುವ ದೃಷ್ಟಿಯಿಂದ ಮಾಡಿರುವ ಸಾಧ್ಯತೆಗಳು ದಟ್ಟವಾಗಿವೆ.

ಸಂಘಪರಿವಾರದ ಸಂವಿಧಾನ ವಿರೋಧಿ, ಅಲ್ಪಸಂಖ್ಯಾತ ವಿರೋಧಿ ಕೃತ್ಯಗಳನ್ನು ಸದಾ ಪ್ರತಿಭಟಿಸುತ್ತ ಇವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಲೆ ಬಂದಿರುವ ಕಕೋಸೌ ವೇದಿಕೆ ಸಂಘಪರಿವಾರಕ್ಕೆ ಮಗ್ಗುಲ ಮುಳ್ಳಿನಂತಿದೆ. ಹೀಗಾಗಿ ಅವಕಾಶ ಸಿಕ್ಕಾಗಲೆಲ್ಲ ಅದು ವೇದಿಕೆಯನ್ನು ಬಗ್ಗು ಬಡಿಯಲು ಪ್ರಯತ್ನಿಸುತ್ತಲೆ ಇರುತ್ತದೆ. ತಮ್ಮನ್ನು ವಿರೋಧಿಸುವವರಿಗೆಲ್ಲ "ಭಯೋತ್ಪಾದಕ" ಅಥವಾ "ನಕ್ಸಲ್" ಹಣೆಪಟ್ಟಿಯನ್ನು ಹಚ್ಚುವುದು ಸಂಘಪರಿವಾರದ ಕುತಂತ್ರಗಳಲ್ಲೊಂದು. ಸಂಘಪರಿವಾರದ ಆಣತಿಯನ್ನು ಶಿರಸಾವಹಿಸಿ ಪರಿಪಾಲಿಸುತ್ತ ಇದಕ್ಕೆ ಪೂರಕವಾಗಿ ವರ್ತಿಸುತ್ತಿರುವ ವೆಂಕಟೇಶ ಪ್ರಸನ್ನ ಮತ್ತು ಅವರಂತಹ ಇನ್ನೂ ಅನೇಕ ಕೋಮುವಾದಿ ಅಧಿಕಾರಿಗಳು ಜಾತ್ಯತೀತ ಭಾರತದ ದುರಂತ.

● ಸುರೇಶ್ ಭಟ್ ಬಾಕ್ರಬೈಲು
ಅಧ್ಯಕ್ಷ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಮಂಗಳೂರು

...ದ್ಯಾವೇಗೌಡ ಈಸ್ ಬ್ರಿಲಿಯಂಟ್ ಪೊಲಿಟೀಸಿಯನ್!

...ಳೆದ ಚುನಾವಣಾ ಫಲಿತಾಂಶಗಳನ್ನು ಅಳೆದು ...ಯುತ್ತಿದ್ದಾಗ ಉಗ್ರಿ ಬಂದು ನಿಟ್ಟುಸಿರು ಬಿಟ್ಟು, ...ಾ ದ್ಯಾವೇಗೌಡ ಕಾಂಗ್ರೆಸ್ಸಿನೋರಿಗೆ ಒಂದು ಸೀಟ ...ಟ್ಟ" ಎಂದ.

...ಅಂಗಂತಿಯಾ?" ಎಂದ ಕಾಳಮಾವ ಗೆಲುವಾಗಿ.

...ನ್ನೇನು ಮತ್ತೆ ಅಪ್ಪು ಚುನಾವಣೆ ಮಾಡಿ ಅನುಭವ ...ನಿಗೆ ಒಂದು ನಾಮಪತ್ರ ತಿರಸ್ಕಾರ ಮಾಡಸಕ್ಕೆ ...ಬವೆ. ಅದ್ಯೆಯ ಏನಾರಮಾಡಿ ಸೋಮಣ್ಣನ್ನ ...ಸಬೇಕು ಅಂತ ನಾಮಪತ್ರದ್ದಳಕ್ಕೆ ಮಿಸ್ಟೇಕ್ ...ಇದ್ನಂತೆ. ಅದ ನೋಡಿದ ಅಧಿಕಾರಿ ಇದೊಂದಿಟ ...ಡಿ ಅಂದನಂತೆ. ಅದ್ಕೆ ಜೆಡಿಎಸ್ ಕಡಿಯೋರು ...ನ್ನ ತಿರಸ್ಕರಿಸಿ ಅಂದ್ರಂತೆ. ಅದೇ ಟೇಮಿಗೆ ...ಗೌಡದ್ರು ಫೋನ್ ಬಂತಂತೆ. ಸಾಹೇಬ್ರೆ ...ಂದುಪಕಾರ ಮಾಡಿ ಅಂದ್ನಂತೆ. ಅಷ್ಟಕೆ ಅಧಿಕಾರಿ ...ಸ್ ಅಭ್ಯರ್ಥಿಯ ಅತಂತ್ರ ಮಾಡಿ ಉಳದೋರು ...ಿ ಅಂದ. ಸ್ವಾಮಣ್ಣ ಗ್ವಾತ ಯಸ್ತ ಅತ್ತಗೆ."

...ಸ್ವಾಮಣ್ಣನ ಮ್ಯಾಲ್ಯಾಕೆ ಆಟೊಂದು ಸೇಡು ...?" ಎಂದ ಸೀರ.

...ಸೇಡುಪಾಡು ಏನು ಇಲವಂತೆ ಕಣೊ. ಕಿಷ್ಟಪ್ಪನ ...ಮನ್ನ ಅಳಿಯನ ಮಾಡಕಬೇಕು ಅಂತ ದ್ಯಾವೇಗೌಡ ...ದ್ದನಂತೆ."

...ಮ ಲು ಸೀ ಮೆ

ಕಟ್ಟೆಪುರಾಣ

► ಬಿ. ಚಂದ್ರೇಗೌಡ

...ಅಂಗರೆ ದ್ಯಾವೇಗೌಡನಿಗೆ ಇನ್ನು ಮದಿವಾಗೊ ...ದ್ದಳೆ?" ಎಂದಳು ಜುಮ್ಮಿ.

...ದೇನೆ ಹಿಂಗಂತೀ? ದ್ಯಾವೇಗೌಡನ ಕಡೆ ಮಗಳೆ ...ಮುಸಿನೋಳು. ಅಂತದ್ರಲ್ಲಿ ಮಗಳಿರಕ್ಕೋದಳೆ?" ...ಉಗ್ರಿ.

...ರತಿದ್ಲಂತೆ ಕಂಡ್ಯ, ಅಬಾರ್ಷನ್ ಮಾಡಿಸಿದನಂತೆ ...ಗೌಡ. ಯಾಕಪ್ಪಾ ಅಂದ್ರೆ ಮಕ್ಕಳ್ಳಲ್ಲ ಮದಿವಿಗೆ ...ಅವಾಗ ಅಪ್ಪ ಬಾಣಂತನ ಮಾಡಿಕಳದು ಅವಮಾನ ...ತಿಳಕಂಡು ಅಂಗೆ ಮಾಡಿದ್ನಂತೆ. ಆ ಮಗು ...ದ್ರೆ ಇದೇ ಕಿಷ್ಟಪ್ಪನ ಮಗನಿಗೇ ಕೊಡಬವುದಿತ್ತು" ...ಸೀರ.

...ಮಪ್ಪ ಯಪ್ಪ ಏನು ಸುಳ್ಳೇಳ್ತಿಯೋ ಸೀರ ಮಾವ. ಯಾರೊ ಶ್ರೀಕಂಠಯ್ಯನ ಕಡಿಯೋರೆ ನಿನಿಗೇಳಿರಬೇಕು. ದ್ಯಾವೇಗೌಡುನ್ನ ಶ್ರೀಕಂಠಯ್ಯ ಅನ್ನಕಂಡೇನೊ?" ಎಂದು ಉಗ್ರಿ ನಕ್ಕ.

"ಏನಪ್ಪ ಜನಸಿದ್ದ ನಾನ್ಯೇಳಿದೆ" ಎಂದು ಸೀರ ಸುಳ್ಳು ಕ್ರಿಕ್ಯಾಗರದ್ದಕ್ಕೆ ಬೇಸರಗೊಂಡಂತೆ ಮುಖ ಮಾಡಿದ.

"ಈ ಕಾಂಗ್ರೆಸ್ಸಿನವ್ಯಾಕೆ ಒಂದು ಸೀಟು ಗೆಲ್ಲಕ್ಕೆ ತಿಣುಕ್ತಾ ಕುಂತವಲ್ಲಾ" ಎಂದ ಮಾವ.

"ತಿಣಕದೆ ಇನ್ನೇನು ಮಾಡ್ತರೊ ಮಾವ. ಲಿಂಗಾಯತ್ರೆಲ್ಲ ಬಿಜೆಪಿ ಪಾರ್ಟಿಲವ್ರುರಂತೆ. ಅಂಗೆ ಜೆಡಿಎಸ್ನ್ವೊಳಗೆ ಒಕ್ಕಲಿಗರು ಜಾಮಾಗಿದ್ದರಂತೆ. ಹರಿಜನರು ಬಿಎಸ್ಪಿಲಿದ್ದರಂತೆ. ಹಿಂಗಾಗಿ ಕಾಂಗ್ರೆಸ್ಸು ಯಂಗೆಲ್ಲಬೇಕೇಳು?"

"ಅಂಗರೆ ಹರಿಜನ್ರದೂ ಒಂದು ಪಾರ್ಟಿ ಆಯ್ತೇ ಅನ್ನು."

"ಅದೇನಿವಸ್ತಾಗಿದ್ದತೆ? ಯಾವತ್ತು ಕಾನ್ಸಿರಾಮು ಮಾಯಾವತಿ ಜ್ವತಿಯಾದ್ರೊ ಅವತ್ತೇ ಬಿಎಸ್ಪಿ ಹುಟ್ಟಿತು. ಈಗ ಆ ಪಾರ್ಟಿ ಕಾಂಗ್ರೆಸ್ಸು ತಲೆ ಎತ್ತದಂಗೆ ಮಾಡಕ್ಕೆ ವಂಟದೆ. ಕೊಳ್ಳೆಗಾಲದಲ್ಲಿ ಆದುದ್ದು ಅದೆಯಾ."

"ಕ್ವಳ್ಳೆಗಾಲದಲ್ಲೇನಾಯಿತ್ಲ?" ಎಂದಳು ಜುಮ್ಮಿ.

"ಕ್ವಳ್ಳೆಗಾಲದಲ್ಲಿ ಬಿಜೆಪಿ ಬುಟ್ಟಬಂದ ಭರಣಿ ಬಿಎಸ್ಪಿಗೆ ನಿಂತಗಂಡ. ಕಾಂಗ್ರೆಸ್ ತಗದ. ಅವುನಂಗೆ ಬಿಎಸ್ಪಿ ಜನ ಮಾಡದೆ ಆದ್ರೆ ಕಾಂಗ್ರೆಸ್ ಯಾರು ಉಳಿಸಿಗಳಕ್ಯಾಗದಿಲ್ಲ, ಯಾವುದೆ ಯಲಕ್ಷನ್ನಾದ್ರೂ ಯರಡ್ನೆ ಪ್ಲೇಸು, ಮೂರನೇ ಪ್ಲೇಸಲ್ಲಿ ನಿಂತಗಬೇಕಾಯ್ತದೆ."

"ಜನಗಳು ಮದ್ದಿನಂಗೆ ಓಟು ಮಾಡ್ತಾಯಿಲ್ಲ ಕಂಡ್ಯ" ಎಂದ ಸೀರ.


"ಮದ್ದಿನಂಗೆ ಅಂದ್ರೆ ಯಂಗೊ ಮಾವ?"

"ಮದ್ಲ್ಯಂಗೆ ಅಂದ್ರೆ ಯಲಕ್ಷನ್ ಬತ್ತು ಅಂದ್ರೆ, ವತ್ತರೆ ಎದ್ದು ಕೈಕಾಲು ಮಕ ತ್ವಳಕಂಡು ಹೋಗಿ ಯಾರು ಕೇಳದೆಯಿದ್ರು ಕಾಂಗ್ರೆಸ್ಸಿಗೆ ಓಟಾಕಿ ಬತ್ತಿದ್ದವಪ್ಪ, ಆದ್ರಿವತ್ತು ಅಂಗಿದ್ದತೇ? ದಳದೋರು ಒಂದೋಟಿಗೆ ಐನೂರು ಕೊಡಕ್ಕೆ ಬಂದ್ರೆ, ಬಿಜೆಪಿಗಳು ಸವುರ ಕೊಡ್ತರೆ. ಅದೇ ಕಾಂಗ್ರೆಸ್ಸಿನವು ಐವತ್ತು ಎಟ್ಟಕ್ಕೆ ಬತ್ತವೆ. ಯಾಕೋಟಾಕಬೇಕೇಳು?" ಎಂದು ಸೀರ ಕಾಂಗ್ರೆಸ್‌ನಂತೆ ಕಣ್ಣುಬಿಟ್ಟ.

"ಆಗ ಕಾಂಗ್ರೆಸ್ಸಿನೋರು ಯೇಚನೆ ಮಾಡ್ತರೆ ಬುಡು."

"ಕಾಂಗ್ರೆಸ್ಸಿನೋರು ಯಾವತ್ತು ಏನ್ನೂ ಯೋಚನೆ ಮಾಡಿಲ್ಲ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಬಂದ.

"ನೀನು ಮಹಾ ಯೇಚನೆ ಮಾಡ್ತಿ ನೋಡು. ಹಂದಿರೊ ಚಂದಕೆ ಹಾಳುಗ್ವಾಡೆ ಜರಿತು ಅಂತ" ಎಂದಳು ಜುಮ್ಮಿ.



"ಅಕ್ಕವ್ ಹಂದಿಗಿಂದಿ ಅಂತ ಬೈಬ್ಯಾಡ. ಅಂಗಂದ್ರೆ ನಿನಿಗೂ ಹಂದಿಜ್ವರ ಬತ್ತವೆ."

"ನನಿಗಂದಿ ಜ್ವರ ಬಂದ್ರೆ ನಿನಿಗೆ ಸಂತೋಸ್ತಾಯ್ತದೇನ್ಲ?"

"ಗಾಡ್ ಪ್ರಾಮಿಸ್ ಇಲ್ಲ ಕಣಕ್ಕ. ಹಂದಿ ಜ್ವರ ಯಾರಿಗೂ ಬರದು ಬ್ಯಾಡ. ಆ ಜನಾರ್ದನ ರೆಡ್ಡಿ ಅನ್ನೊ ಪೂಲಿಸ್‌ಫೆಲೊ ಅಂದ ಮಾತು ನೆನಪಿಗೆ ಬಂತು, ಅಂಗಂದೆ ಕಣಕ್ಕ, ಸಾರಿ."

"ರೆಡ್ಡಿ ಏನಂದಾ?"

"ಆರೋಗ್ಯ ಮಂತ್ರಿ ಹಂದಿ ಜ್ವರವ ಸರಿಯಾಗಿ ನಿಭಾಯಿಸ್ತಯಿಲ್ಲ ಅಂತ ಸಿದರಾಮಯ್ಯ ಅಂದನಂತೆ. ಅದ್ಕೆ ರೆಡ್ಡಿ ನಿನಿಗೂ ಹಂದಿಜ್ವರ ಬರ್ಲಿ ಅಂದನಂತೆ."

"ಅಂಗಂದರೇನ್ಲ? ಅದನ್ನ ಮಾತೆ?" ಎಂದ ಕಾಳಮಾವ.

"ಹಿಂದೆ ಮಂತ್ರಿಗಳು ಏನಾರ ಮಾತಾಡಬೇಕಾದ್ರೆ ಭಾರಿ ಯೋಚನೆ ಮಾಡೋರು. ಆದ್ರೆ ಈ ಬಿಜೆಪಿ ಮಂತ್ರಿಗಳು ಬಾಯಿಗೆ ಬಂದಿದ್ನೆ ಮಾತಾಡ್ತವೆ" ಎಂದ ಉಗ್ರಿ.

"ನಿಜ ಕಣೊ ಉಗ್ರಿ. ಮಾತ ಯಂಗಾಡಬೇಕು ಅನ್ನದ ಈ ಪೂಲಿಷ್‌ಫೆಲೋಗಳಿಗೆ ಯಾರಾರ ಹೇಳಬೇಕಾಗ್ಯದೆ. ಮುಖ್ಯವಾಗಿ ಮುಖ್ಯಮಂತ್ರಿನೇ ಹೇಳಬೇಕಾಗಿತ್ತು. ಆದ್ರೆ ಸೊಸೆಗೆ ಬುದ್ದಿ ಹೇಳಬೇಕಾದ್ರೆ ಅತ್ತೆ ನ್ಯಟ್ಟಗಿರಬೇಕಾಯ್ತದೆ. ಆದ್ರೆ ಅತ್ತೆನೆ ಮಡುವಾಳು ಕೇರಿಲಿ ಸುತ್ತುತ್ತಿದ್ಲಂತೆ, ಇನ್ನ ಸ್ವಸಿಗೆಬುದ್ಧಿ ಯಂಗೇಳತಳೆ?"

"ಹೇಳತಿದ್ಲಂತೆ ಕಂಡ್ಯ" ಎಂದು ಜುಮ್ಮಿ ನಕ್ಕಳು.

"ಏನೇಳತಿದ್ಲಕ್ಕಾ, ವಸಿ ಯೇಳು."

"ಮಡುವಾಳ್ರು ಮನೆತಕ್ಕೋಗಬ್ಯಾಡ ಅಂತ ಹೇಳೋಳಂತೆ. ಯಾಕೇಳು? ಇವ್ರುಳೋಯ್ತಿದ್ಲಲ್ಲ ಅದ್ಕೆ" ಎಂದು ಜುಮ್ಮಿ ನಕ್ಕಳು.

"ನಿಜವಾಗ್ಲು ನಮ್ಮೂರ ಮಡುವಾಳು ಮನೆ ದ್ರೈಂಜರ್ ಕಣಕ್ಕ, ಆ ಊಲಣ್ಣ ಮೂರು ಮದಿವಾದ. ಮೂರು ಜನವ್ರೂ ಕರಕಂಡು ಬಂದೋಳೆಯಾ. ಇದ ನೋಡಿದ್ರೆ ಗಾದೆ ಮಾತು ಸುಮ್ಮಸುಮ್ಮನೆ ಬಂದಿಲ್ಲ ಅಂತ ಕಾಣ್ತದೆ. ಅದಿರ್ಲಿ ಈಗ ಇಂಪಾರ್ಟೆಂಟ್ ಮ್ಯಾಟ್ರೇನು ಅಂದ್ರೆ, ಎಡೂರಪ್ಪ ತನ್ನ ಜ್ವತೆ ಕ್ಯಲಸ ಮಾಡೋ ಮಂತ್ರಿಗಳಿಗೆ ಸರಿಯಾಗಿ ಮಾತಾಡಿ ಅನ್ನಕ್ಯಾಗಲ್ಲ, ರೇಣುಕಾಚಾರಿಗೆ ಸರಿಯಾಗಿ ಬಿಹೇವ್ ಮಾಡು ಅನ್ನಕ್ಯಾಗದಿಲ್ಲ, ಸುಧಾಕರನ ರಾಜೀನಾಮೆ ಕೇಳಕ್ಯಾಗದಿಲ್ಲ, ಸೋಮಣ್ಣನ್ನ ಕೈಬುಡಕ್ಕೂ ಆಗದಿಲ್ಲ. ಹಿಂಗಾದ್ರೆಂಗೆ?"

"ಅವುನೆ ಹೇಳ್ಯವುನಲ್ಲೊ, ನನ್ನ ಕೈಲಿ ಗಣಿಗಾರಿಕೆ ತಡಿಯಕ್ಯಾಗದಿಲ್ಲ, ಅಂಗೆ ಕಾಡು ಕಡಿಯದ ತಪ್ಪಸಕ್ಕೂ ಆಗದಿಲ್ಲ, ಮಳ್ಳ ಲಾರಿ ನಿಲ್ಲಸಕ್ಯಾಗದಿಲ್ಲ ಅಂತ ಎಡೂರಪ್ಪನೇ ಹೇಳಿದ್ದನಂತೆ."

"ತಗಳಪ್ಪ ಅಂಗಂದು ಬುಟ್ನಾ?" ಎಂದ ಸೀರ.

"ಅಲ್ಲಯ್ಯಾ ಮುಖ್ಯಮಂತ್ರಿ ಆದೋನು ಅಧಿಕಾರಿಗೆ ಒಂದು ಗುಟುರಾಕಿದೇಟಿಗೆ ಅವುನು ಕ್ಯಲಸ ಮಾಡ್ತನೆ....." ಎಂದು ಕಾಳಮಾವ ಹೇಳುವಷ್ಟರಲ್ಲಿ ವಾಟಿಸ್ಸೆ.

"ಎಜ್ಜಾಟ್ಲಿ ಕರಟ್ ದ್ವಡಪ್ಪ. ಇದೇ ಕುಮಾರಣ್ಣನ ಕಾಲದಲ್ಲಿ ಗಣಿ ರೆಡ್ಡಿಗಳ ಲಾರಿ ಅಕ್ರಮ ತಡಿತಿದ್ರು ಅಧಿಕಾರಿಗಳು" ಎಂದ.

"ಅದಿರ್ಲಿ ಕಂಡ್ಯ...."

"ಅದ್ನೆ ದ್ವಡಪ್ಪ ನಾನೇಳ್ತಯಿರದು. ಮುಖ್ಯಮಂತ್ರಿ ಆದ್ರು ಮಾಡಿದ್ರಾಯ್ತು, ಕ್ಯಲಸಾಯ್ತವೆ. ಇನ್ನು ಎಡೂರಪ್ಪ ಆದ್ರು ಮಾಡಿದ್ರೆ ಪಾಪ ಬಿಪಿ ಇರಬೇಕು ಕೂಗಾಡ್ತನೆ ಅನ್ನಕಂಡು ಅಧಿಕಾರಿಗಳು ಮಾಡದ್ನೆ ಮಾಡ್ತರೆ ಅಂದ್ರೆ ಮನಿಗೋಗದೊಳ್ಳೆದು."


"ಮನಿಗೋಗು ಅನ್ನಕ್ಕೆ ನೀನೇನು ಉಗ್ರಪ್ಪನಾ?"

"ಓಟಾಕಿರೊ ಮತದಾರ ಕಣೊ ಉಗ್ರಿ."

"ಮತದಾರ ಮನಿಗೋಗು ಅನ್ನಬೇಕಾದ್ರೆ ತಿರಗ ಯಲಕ್ಷನ್ ಬರಬೇಕು. ಆಗ ಯಾರ್‍ಯಾರು ಜನಗಳಿಗೆ ಬೇಜಾರಾಗ್ಯವುರೊ ಅವುರ ಮನಿಗೆ ಕಳುಸಬವುದು."

"ಅಂಗರೆ ಸೋಮಣ್ಣ ಜನಗಳಿಗೆ ಬೇಜಾರಾಗಿದ್ದ ಅನ್ನು."

"ಸೋಮಣ್ಣನ ಕತೆ ಬ್ಯಾರೆ ಕಣೊ. ಎಡೂರಪ್ಪ ಬಂಗಾರಿ ತಗಿಬೇಕಾದ್ರೆ ನೂರು ಕೋಟಿ ಬಂಡವಾಳ ಮಡಿಕಂಡು ಮಗನ್ನೆ ನಿಲ್ಲಿಸಿ ಬಂಗಾರಿ ತಗದ. ಕಾಲನೂ ಕೂಡಿ ಬಂದಿತ್ತು, ಅಂದ್ರೆ ಹರೆದುಡುಗ ಮುದುಕುನ್ನ ಸೋಲಿಸಿದ. ದ್ಯಾವೇಗೌಡ್ರು ಅದೇ ಎಡೂರಪ್ಪನ ಪ್ಲಾನ್ ಗೋವಿಂದರಾಜನಗರದಲ್ಲಿ ಮಾಡಿ ಸೋಮಣ್ಣನ ತಗದ್ರು. ಸೋಮಣ್ಣನೆದ್ರಿಗೆ ಕಾಂಗ್ರೆಸ್ ಹಳೆ ಬಂದೂಕ ಹಿಡಕಂಡು ನಿಂತಿದ್ರೂ ಮರದ ಮರೆಲಿದ್ದ ದ್ಯಾವೇಗೌಡ್ರು ಬಾಣದ ಗುರಿಯಂಗೆ ಬಲಿತಗತ್ತು ನೋಡು! ರಿಯಲಿ ದ್ಯಾವೇಗೌಡ ಈಸ್ ವೆರಿ ಬ್ರಿಲಿಯಂಟ್ ಪೊಲಿಟೀಸಿಯನ್!" ■



ಚಾರಿತ್ರ್ಯದ ಸಮಸ್ಯೆ

ಚಾರಿತ್ರ ವ್ಯಕ್ತಿತ್ವದ ಬಗ್ಗೆ ಕೆಲವೊಮ್ಮೆ ಯೋಚಿಸುತ್ತೇನೆ. ಇದರ ಮೇಲೆ ದೊಡ್ಡ ಗ್ರಂಥವನ್ನೇ ಬರೆಯಬಹುದು. ಆದರೆ ಇಲ್ಲಿ ನನಗೆ ಹೊಳೆದ ಕೆಲವು ಸಣ್ಣ ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. ಅವುಗಳಲ್ಲಿ ಮುಖ್ಯವಾದದ್ದು ತನ್ನ ಮಾನ, ಇಷ್ಟ, ಆಂತರ್ಯದ ಆರೋಗ್ಯದ ಬಗ್ಗೆ ಕಾಳಜಿ ಇರುವುದು ಒಂದು. ಸದಾ ತನ್ನ ಬಗ್ಗೆ ಯೋಚಿಸುವವನು ...ಮೂ ನಾರ್ಸಿಸ್ಸನೂ ಆಗಬಹುದು, ನಿಜ; ಆದರೆ ತನ್ನ ಆ ಮಾನಸಿಕ ಆರೋಗ್ಯ ಕೆಡುವಷ್ಟು ...ನ ಒತ್ತಡ, ಹೊಗಳಿಕೆ, ಖ್ಯಾತಿಗೆ ಒಲಿಯುವವನು ಹಾಳಾಗುತ್ತಾನೆ. ನಮ್ಮ ಮನಸ್ಸು ಸೂಕ್ಷ್ಮವಾದದ್ದು; ಇಷ್ಟವಿಲ್ಲದ ಮಾತಾಡುವುದು, ಮಾಡಲು ಇಷ್ಟವಿಲ್ಲದ ಕೆಲಸ ಮಾಡುವುದು ನಮ್ಮ ...ವನ್ನು ಕೆಡಿಸುತ್ತದೆ. ಒಮ್ಮೆ ಒಬ್ಬಳು ಚಿತ್ರಗಾರ್ತಿಯನ್ನು ಅಭಿನಂದಿಸುವ ಸಭೆ ಇತ್ತು. ನಾವೆಲ್ಲ ...ಚಿತ್ರಗಳನ್ನು ಮೆಚ್ಚಿ ಮಾತಾಡಿದೆವು. ನಮ್ಮ ಅಭಿನಂದನೆಗೆ ಪ್ರತಿಕ್ರಿಯೆ ನೀಡಬೇಕೆಂದು ಸಭೆಯ ...ಕರು ಆಕೆಯನ್ನು ಕೇಳಿಕೊಂಡರು. ಆಕೆ ಮಾತಾಡಲು ಎದ್ದಳು. ಮಾತೇ ಹೊರಡಲಿಲ್ಲ, "ಕ್ಷಮಿಸಿ, ನಾನು ...ಹೇಳಿದರೂ ಅದು ಚಿತ್ರಗಳ ಮೂಲಕ ಮಾತ್ರ ಸಾಧ್ಯ" ಅಂದು ಕೂತಳು. ಆಕೆಯ ಸಂಕೋಚವೇ ಅವಳನ್ನು ...ದ ಗುಣವಾಗಿತ್ತು.

...ಲ್ಲ' ಅನ್ನುವುದು ವ್ಯಕ್ತಿತ್ವಕ್ಕೆ ಮುಖ್ಯ-ನಿರರ್ಥಕ ಭಾಷಣ, ಕಾವ್ಯವಾಚನ, ಪ್ರಚಾರಭಾಷಣ, ಅಧ್ಯಕ್ಷತೆ, ಸ್ಥಾನಮಾನ-ಅವೆಲ್ಲ ...ಲೋಭಿಯಾಗಿದ್ದಾಗ, ಯಾವುದೇ ಒಳ್ಳೆಯ ಉದ್ದೇಶವಿಲ್ಲದ ಕ್ರಿಯೆಯಾಗಿದ್ದಾಗ ನಮ್ಮ ಅಂತರಂಗ 'ಬೇಡ' ... ಅದು ಪ್ರಾಮಾಣಿಕ ಧ್ವನಿ; ಅದನ್ನು ಕೇಳುವುದು, ಮನ್ನಿಸುವುದು ಮುಖ್ಯ. ಆ ಧ್ವನಿ ಸಾಯದಂತೆ ...ಳ್ಳುವುದು ಮುಖ್ಯ. ನಿರರ್ಥಕ ಸುಖ, ದುರಾಸೆಯಿಂದ, ಇನ್ನೊಬ್ಬರಿಗೆ ತೊಂದರೆ ಕೊಟ್ಟು ಪಡೆದ ಸುಖಕ್ಕೆ ...ಅದು 'ಬೇಡ' ಅನ್ನುತ್ತದೆ. ಮ್ಯಾಕ್‌ಬೆತ್ ತನ್ನ ದೊರೆಯನ್ನು ಕೊಲ್ಲುವಾಗ ಆ ಧ್ವನಿಯನ್ನು ಆತ ಹತ್ತಿಕ್ಕಿದ; ...ದುರಾಸೆಪಡುವಾಗ ಆ ಧ್ವನಿಯನ್ನು ಹತ್ತಿಕ್ಕಿದ. ಈ ಧ್ವನಿಯನ್ನು ಆಲಿಸಿ ಅದರಂತೆ ನಡೆಯಲು ಛಲ ...ತ್ತದೆ; ನಮ್ಮ ಇಂದ್ರಿಯಗಳ ಸಹಕಾರ ಬೇಕಾಗುತ್ತದೆ. ಆದ್ದರಿಂದಲೇ ಇದನ್ನು ಸಂಯಮ, ಚಾರಿತ್ರ್ಯ ...ದೆ.

...ತು', 'ಬೇಡ', 'ಇಲ್ಲ' - ಅನ್ನುವುದಕ್ಕೆ ಆಂತರ್ಯ ಆರೋಗ್ಯವಾಗಿರಬೇಕಾಗುತ್ತದೆ. ಬದುಕಿನ ನೂರಾರು ...ಲ್ಲಿ, ಅನುಭವಗಳಲ್ಲಿ ನಮ್ಮನ್ನು ಕಟ್ಟುವ, ಬೆಳೆಸುವ ಅನುಭವಗಳನ್ನು ಆರಿಸಿಕೊಳ್ಳುವ ವಿವೇಕ ಬೇಕಾಗುತ್ತದೆ. ...ಮನುಷ್ಯನಿಗೆ ಇದು ಕಷ್ಟವಾಗುವುದಿಲ್ಲ. ಉದಾಹರಣೆಗೆ, ಹೆಮಿಂಗ್ವೆ ವರ್ಷಗಟ್ಟಲೆ ಬರೆಯುತ್ತಿರಲಿಲ್ಲ, ...ತನಗೆ ಇಷ್ಟವಿಲ್ಲದ ಅಪ್ರಾಮಾಣಿಕ ಕೆಲಸ ಮಾಡುತ್ತಿರಲಿಲ್ಲ, ಅವನಿಗೆ ರೋಮಾಂಚನ ನೀಡಬಲ್ಲ ...ಅನುಭವನ್ನು-ಅಷ್ಟು ಆತನ ವ್ಯಕ್ತಿತ್ವಕ್ಕೆ ಹೊಂದಿಕೊಂಡಿದ್ದವು.



ವಿಚಾರವೇ ಅನಾಚಾರವಾದಾಗ



ಮೊನ್ನೆ ನಮ್ಮ ಬಿ.ವಿ. ವೀರಭದ್ರಪ್ಪನವರ 'ವೇದಾಂತ ರೆಜಿಮೆಂಟ್' ಪುಸ್ತಕ ಬಿಡುಗಡೆ ಮಾಡಲು ಶೂದ್ರ ಸಭೆ ಏರ್ಪಡಿಸಿದ್ದ ಸಂದರ್ಭ. ಶರ್ಮರ ಭಾಷಣ, ಕಿ.ರಂ. ನಾಗರಾಜನ ವಿಮರ್ಶೆ ಮತ್ತು ವೀರಭದ್ರಪ್ಪನವರ ಒಂದೆರಡು ಮಾತುಗಳು. ನಮ್ಮ ಜನ ಈಚೆಗೆ ಏನನ್ನು ಹೇಳಲೂ ಹಿಂಜರಿಯುತ್ತಿದ್ದಾರೆ; ಅವರು ಹಿಂಜರಿಯಲು ಕಾರಣಗಳಿವೆ. ಇಲ್ಲಿಯ ಕಂದಾಚಾರ, ಜಾತೀಯತೆ, ಮೂಢನಂಬಿಕೆಯ ವಿರುದ್ಧ ಸದಾ ಪ್ರತಿಭಟಿಸುವ ಒಂದು ಗುಂಪಿತ್ತು. ಅದರಲ್ಲಿ ದಲಿತರು, ಡಂಬಾಯದವರು, ಸಮಾಜವಾದಿಗಳು, ಕಮ್ಯುನಿಸ್ಟರು ಇದ್ದರು. ಇವರು ತುಂಬ ಉಗ್ರವಾಗಿ ಪ್ರತಿಭಟಿಸುತ್ತಾ ಇದ್ದುದು ಸುಮಾರು ಮೂವತ್ತು ವರ್ಷಗಳ ಹಿಂದೆ; ಇಲ್ಲಿ ಸಮಾಜವಾದಿ ಸರ್ಕಾರ ಬರಲು ಸಾಧ್ಯವಿಲ್ಲ ಎಂಬುದು ಅವರಿಗೆ ಗ್ಯಾರಂಟಿಯಾಗಿದ್ದಾಗ, ಈ ಪ್ರತಿಭಟನಾಕಾರರು ಪೂಜ್ಯರೂ ಪುನೀತರೂ ಆಗುವ ಸಂಭವವೇ ಇಲ್ಲ ಎಂಬುದು ನಿಶ್ಚಿತವಾಗಿದ್ದಾಗ....

ಆಮೇಲೇನಾಯಿತು ಅಂದರೆ, ಇವರಲ್ಲಿ ಅನೇಕರು ಸಾಂಪ್ರದಾಯಕ ಮದುವೆ ಮಾಡಿಕೊಂಡರು, ಕೆಲವರು ಪ್ರೇಮವಿವಾಹವಾಗಿ ವಿಚ್ಛೇದನಗೊಂಡರು, ಗುಟ್ಟಾಗಿ ವರದಕ್ಷಿಣೆ ತೆಗೆದುಕೊಂಡರು, ಜಗದ್ಗುರುಗಳ ನೇತೃತ್ವದ ಕಾಲೇಜಿನಲ್ಲಿ ಕೆಲಸಕ್ಕಾಗಿ ಜಗದ್ಗುರು ಮತ್ತು ಮ್ಯಾನೇಜ್‌ಮೆಂಟ್‌ನ ಕಾಲಿಗೆ ಎರಗಿದರು. ಜನತಾದಳ, ಜನತಾ ಸರ್ಕಾರದಲ್ಲಿ ಸಾಕಷ್ಟು ತಿಂದು ಕೆಟ್ಟರು, ಕಾಂಗೈಗಳೊಂದಿಗೆ ಹೊಂದಾಣಿಕೆ ನಡೆಸಿಕೊಂಡು ಕೃತಾರ್ಥರಾದರು. ಇವರೆಲ್ಲರ ಪ್ರತಿಭಟನೆ ಸ್ಫೂರ್ತಿ ಕಳೆದುಕೊಂಡು ಶಿವಪೂಜೆಯ ಗುಣ ಪಡೆಯತೊಡಗಿತು. ಇದೊಂದು ವ್ಯರ್ಥವಾಗಿ ಹಾರಾಡುವವರ ಗುಂಪಾಗಿ ಜನ ಪರಿಗಣಿಸಿದರು.

ಆದ್ದರಿಂದಲೇ ವೀರಭದ್ರಪ್ಪ ತಮ್ಮೆಲ್ಲ ಕಷ್ಟಗಳ ನಡುವೆ, ಒತ್ತಡಗಳ ನಡುವೆ ನಮ್ಮ ತರುಣ ಜನಾಂಗಕ್ಕೆ ಉಪಯುಕ್ತವಾಗಬಲ್ಲ ಲೇಖನಗಳನ್ನು ಬರೆದಾಗ ಅವನ್ನೆಲ್ಲ ಸೇರಿಸಿ ಪುಸ್ತಕ ಮಾಡಿದೆವು. ಇವತ್ತು ಹೊಸ ಜನಾಂಗ ಹೊಸ ಸ್ಫೂರ್ತಿಯಿಂದ, ಕಟ್ಟಕಡೆಯವರೆಗೆ ಇರಬಲ್ಲ ಕನಿಷ್ಠ ಕಾಳಜಿಯಿಂದ, ಬದುಕುವ ರೀತಿಯ ಅಂಗವಾಗಿಯೇ ಪ್ರತಿಭಟಿಸುವುದನ್ನು, ವೈಚಾರಿಕ ಪ್ರಶ್ನೆ ಕೇಳುವುದನ್ನು ಕಲಿಯಬೇಕಾಗಿದೆ. ಎಂದಿಗಿಂತ ಇವತ್ತು ವೈಚಾರಿಕತೆಯ ಅವಶ್ಯಕತೆ ಇದೆ. ವೈಚಾರಿಕತೆ ಎಂದರೆ ಕೇವಲ ತರ್ಕವಲ್ಲ, ಒಣವಾದವಲ್ಲ, ವೈಚಾರಿಕತೆ ಎಂದರೆ ನಮ್ಮ ಪಂಚೇಂದ್ರಿಯ ಮತ್ತು ಅಂತರಾಳಕ್ಕೆ ಗೋಚರಿಸುವ ಸತ್ಯಗಳ ಬಗ್ಗೆ ನಿಷ್ಠವಾಗಿರುವುದು, ನಮ್ಮಂತೆಯೇ ಅನುಭವಿಸುವ ಎಲ್ಲರೊಂದಿಗೆ ಆ ಸತ್ಯಗಳನ್ನು ಹಂಚಿಕೊಳ್ಳುವುದು. ಕಣ್ಣೆದುರು ಕಾಣುವ ಅನ್ಯಾಯ, ಅನಾಚಾರ, ಮೌಢ್ಯ, ಸ್ವಾರ್ಥದ ವಿರುದ್ಧ ಸೊಲ್ಲೆತ್ತುವ ದಿಟ್ಟತನ, ಸ್ವಸ್ಥತೆ ಬೆಳೆಸಿಕೊಳ್ಳುವುದು.

ಮಾರ್ಕ್ಸ್ ತೀರಿಕೊಂಡಿರುವುದಾಗಿ ಲೋಹಿಯಾ, ಜೆ.ಪಿ., ಗಾಂಧಿಗಳೆಲ್ಲ ಕಣ್ಮರೆಯಾಗಿರುವುದಾಗಿ ಬೀಗುತ್ತಿರುವ ಕೊಳಕರಾದ ಹುಂಬರು ಈ ಪ್ರತಿಭಟನೆಯ ಅರ್ಥ ತಿಳಿದುಕೊಳ್ಳದಿದ್ದರೆ ಮುಗ್ಗುಮುಕ್ಕುತ್ತಾರೆ. ಭಾರತದ ಬಂಡವಾಳಶಾಹಿ ಮತ್ತು ಸಮಾಜವಾದ, ಸಮತಾವಾದಗಳೆಲ್ಲ ಕ್ರೀಡೆಗಳಾಗಿವೆಯೇ ಹೊರತು ಸತ್ತುಹೋಗಿಲ್ಲ. ಇವಕ್ಕೆಲ್ಲ ಹೊಸ ಅರ್ಥ ಮತ್ತು ಚಾಲನೆ ಬರಬೇಕಾದರೆ ಚಿಂತನೆ ಮತ್ತು ಕ್ರಿಯೆಗೆ ಜೀವ ಬರಬೇಕಾಗಿದೆ.

-ಅಕ್ಟೋಬರ್ 20, 1991

ಜನತಾ ನ್ಯಾಯಾಲಯ ತೀರ್ಪು ವೃಷಭಾವತಿ ಸೇರ್ತು

ಮುಖ್ಯಮಂತ್ರಿಗಳಿಗೆ ಜನರ ಮನಸ್ಸೇ ಅರ್ಥ ಆಗುತ್ತಿಲ್ಲ. ಜನರಿಗೆ ಏನಾಗಿದೆ ಅಂತೀನಿ. ಪಾಪ ಸೋಮಣ್ಣ ತುರುವಿನಂತಹ ಪ್ರಾಣಿ. ಜನ ಜನ ಅಂತ ಸಾಯ್ತಾರೆ. ಜನತಾ ಮಾರ್ಕೆಟ್‌ನಲ್ಲಿ ಗುಮಾಸ್ತರಾಗಿದ್ದರು. ಈಗ ಮಂತ್ರಿ ಆಗಿದಾರೆ. ಎಂತಹ ಬೆಳವಣಿಗೆ! ಪ್ರಜಾಪ್ರಭುತ್ವಕ್ಕೇ ಮಾದರಿ ಇದು. ಅವರ ಚರ, ಸ್ಥಿರ ಆಸ್ತಿಗಳೂ ಅಷ್ಟೆ. ಬ್ಯಾಡ ಬ್ಯಾಡ ಅಂದರೂ ಬೆಳೀತಾನೆ ಇದೆ. ಬಹಳ ಹಿಂದೆ ಒಂದು ತಮಿಳು ಸಿನಿಮಾ ಬಂದಿತ್ತು. 'ಪಣಂ ಪದಿತ್ತ ಪಾಡು' ಅಂತ ಇರಬೇಕು. ಅದರಲ್ಲಿ ನಾಯಕನಿಗೆ ಒಂದಿಷ್ಟು ಹಣ ಕೊಟ್ಟು ನಿರ್ದಿಷ್ಟ ಸಮಯದಲ್ಲಿ ಖರ್ಚು ಮಾಡಬೇಕು ಅಂತ ತಿಳಿಸಲಾಗುತ್ತೆ. ಲಾಟರಿಗೆ ಹಣ ಹಾಕಿದರೆ ಅವನಿಗೇ ಹೊಡೆಯುತ್ತೆ. ರೇಸ್‌ಗೋದರೆ ಅಲ್ಲೂ ಅವನಿಗೇ ಜಯ. ಹಿಂಗೆ ಹಣ ಸೇರ್ತಾನೆ ಹೋಗುತ್ತೆ. ಹಾಗೇನೆ ನಮ್ ಸೋಮಣ್ಣನವರಿಗೂ ಎಲ್ಲ 'ಜನಸೇವೆ'ಯ ಫಲ!

ಇದ್ದಕ್ಕಿದ್ದಂಗೆ ಒಂದಿನ ಅವರಿಗೆ ಜ್ಞಾನೋದಯ ಆಯಿತು. ಬರೀ ಶಾಸಕನಾಗಿದ್ದರೆ ಕ್ಷೇತ್ರದ ಅಭಿವೃದ್ಧಿ ಕೆಲಸಗಳು ಆಗೋಲ್ಲ ಮಂತ್ರೀನೆ ಆಗಬೇಕು ಅಂತ ಒಳಮನಸ್ಸು ಹೇಳಿತು. ಇದರ ಜೊತೆಗೆ ಕಾಂಗ್ರೆಸ್ ಪಕ್ಷದಲ್ಲಿ ತನ್ನನ್ನು ಕಡೆಗಣಿಸಲಾಗುತ್ತಿದೆ ಅನ್ನೋದೂ ಸೇರ್ತು. ಲಿಂಗಾಯತರ ಪಕ್ಷ ಸೇರೋದೇ ಸೈ ಅಂತಾವ ಭಾಜಪ ಮನೆ ಹೊಕ್ಕರು. ಮಂತ್ರೀನೂ ಆದರು.

ಅಣಕ

▸ಎಚ್.ಎಲ್. ಕೇಶವಮೂರ್ತಿ

ವಿಪಕ್ಷಗಳು ಆರೋಪ ಮಾಡಿದಾಗಲೆಲ್ಲ ಮಾನ್ಯ ಯಡ್ಯೂರಪ್ಪನವರು 'ಜನತಾ ನ್ಯಾಯಾಲಯ ತೀರ್ಪು ನೀಡಿದೆ' ಅಂತಿದ್ದರಲ್ಲ ಅದು ನೆನಪಾಯಿತು. ತನ್ನ ಪಕ್ಷ ಬದಲಾವಣೆಗೆ ಅಧಿಕೃತ ಮುದ್ರೆಯನ್ನ ಜನರ ಕೈಲೇ ಒತ್ತುಸ್ತೀನಿ ಅಂತಾವ ಚುನಾವಣೆಗೆ ನಿಂತರು.

ಹೇಳಿಕೇಳಿ ಮುಜರಾಯಿ ಮಂತ್ರಿ. ಆ ಇಲಾಖೆಗೂ ಚುನಾವಣೆಗೂ ಆಗಿ ಬರುವುದಿಲ್ಲವಂತೆ. ನಮ್ಮ ಆಸ್ತೀಗೆ ಬಾಯಿ ಹಾಕ್ತಿದಾವಲ್ಲ ಅಂತ ದೇವರುಗಳು ಶಾಪ ಹಾಕ್ತಿದಾರೋ ಏನು ಕತೆಯೋ. ಆ ಮಂತ್ರಿಯಾದವನು ಚುನಾವಣೇಲಿ ಗೆದ್ದೇ ಇಲ್ವಂತೆ. ಕುಮಾರಸ್ವಾಮಿ ಬಿಜೆಪಿಯ ಶಾಪ ವಿಮೋಚನೆ ಮಾಡಿದಂತೆ ನಾನೂ ಮುಜರಾಯಿ ಇಲಾಖೆಯ ಶಾಪ ವಿಮೋಚನೆ ಮಾಡ್ತೀನಿ ಎಂದು ಹೊರಟ ಈ ಜನ ಸೇವಕ ತಮಗೆ ತಿಳಿದಿರುವ ಎಲ್ಲ ಚುನಾವಣಾ ತಂತ್ರಗಳನ್ನೂ ಬಳಸುವ ಸಿದ್ಧತೆ ಮಾಡಿಕೊಂಡರು.

ಮಠಾಧೀಶರು ಅಂದರೆ ಅವರಿಗೆ ಆಪ್ಯಾಯಮಾನ ಅಲ್ಲವಾ. ಚುನಾವಣೆ ಬಿಸಿಯಲ್ಲಿಯೂ 'ಗುರುವಂದನಾ' ಕಾರ್ಯಕ್ರಮ ಏರ್ಪಡಿಸಿದರು. ಎಲ್ಲಿ ಅಂತೀರಿ, ತಮ್ಮ ಕ್ಷೇತ್ರದಲ್ಲಿ, ಸಿದ್ಧಗಂಗಾ ಶ್ರೀಗಳ ಮುದ್ದಿನ ಕುವರ ಅಲ್ವಾ ಈ ಸೋಮಣ್ಣ, ಅವರಿಗೆ ಗುರುವಂದನೆ. ಸುತ್ತೂರು ಶ್ರೀಗಳೂ ಇದ್ದರು. ಗುರುಗಳ ಆಶೀರ್ವಾದ ಒಂದಿದ್ದರೆ ಮಠದ ಎಲ್ಲಾ ಭಕ್ತರೂ ಮತ ಸುರೀತಾರೆ ಅನ್ನೋದು ಸಾಮಾನ್ಯ ನಂಬಿಕೆ. ಇದನ್ನೇ ಸತ್ಯ ಅಂತ ನಂಬುವ ಗುರುಗಳೂ ಇದ್ದಾರೆ; ಶಿಷ್ಯರೂ ಇದ್ದಾರೆ. ಹಂಗಾಗಿ ಏನಾಯಿತು ಈ ಗುರುವಂದನಾ ಕಾರ್ಯಕ್ರಮ ಅನ್ನೋದು ಚುನಾವಣಾ ಪ್ರಚಾರ ಕಾರ್ಯಕ್ರಮ ಆಯಿತು. ಲಿಂಗಾಯತರ ಗುರುವಂದನೆ ಆದ್ದರಿಂದಲೋ ಏನೋ ಕುಲಸ್ಥರೆಲ್ಲ ಹುರುಪಿನಿಂದ ಎದ್ದು ಎದ್ದು ಕುಣಿದರಂತೆ. ಆದರೇನು ಮಾಡ್ತೀರಿ. ಹಾಳು ಗೋವಿಂದರಾಜನಗರ ಕ್ಷೇತ್ರದಲ್ಲಿ ಅವರ ಸಂಖ್ಯೇನೆ ಕಡಿಮೆಯಂತೆ. ಕ್ಷೇತ್ರ ವಿಂಗಡಣೆ ಮಾಡುವಾಗಲೇ ಹೆಚ್ಚು ಇರುವಂತೆ ನೋಡಿಕೊಳ್ಳಬೇಕಾಗಿತ್ತು. ಈಗ ಕೈ ಮೀರಿತ್ತು. ಕಾರ್ಪೊರೇಷನ್ ಚುನಾವಣೆ ಹೊತ್ತಿಗೆ ಇದನ್ನು ಸರಿಪಡಿಸಬಹುದೇನೋ.

ಗುರುವಂದನೆ ಆಯಿತಲ್ಲಾ, ಶ್ರೀಮಠಗಳ ಶಿಷ್ಯರ ಓಟು ಖಾತರಿ ಆದಂತಾಯಿತು. ಆಮೇಲೆ ಈ ಹಾಳಾದ ಸಾಬರು. ಸುಮಾರು ಜನ ಇದ್ದಾರಂತೆ ಅಲ್ಲಿ, ಅವರಿಗೋ ಭಾಜಪ ಅಂದರೇ ವಾಕರಿಕೆ ಅಂತೆ. ಅದನ್ನ ಬಳೀಲಿ ಅಂತಾವ ಮುಮ್ತಾಜ್ ಅಲಿಖಾನ್ ಅಂತಹವರನ್ನ ಬಿಟ್ಟರು. ಆದರೂ ಸಮಾಧಾನ ತರಲಿಲ್ಲ. ಅವರ ಕೇರಿಗೆ ದಾಳಿ ಇಟ್ಟರು. 'ನಾನು ಗೆದ್ದೇ ಗೆಲ್ತೀನಿ, ನೀವು ಓಟು ಕೊಟ್ರೆ ಬದುಕಿದ್ರಿ. ಇಲ್ಲಾಂದರೆ ನಿಮ್ಮವರ ಕೈಲೆ ನಿಮಗೆ ತದುಕುಸ್ತೀನಿ' ಅಂತ ಧಮಕಿ ಹಾಕಿದರು. ಯಾರೂ ಮುಜರಾಯಿ ಸಚಿವರು! ಚುನಾವಣೆ ಸಮಯ ಅಲ್ವ. ಇಂತಹವರನ್ನೆಲ್ಲ ಮಾಡಲೇಬೇಕಾಗುತ್ತೆ ಅನ್ನೋದು ಅವರಿಗೆ ತಿಳಿದಿತ್ತು ಅನ್ನಿ.

ಈ ನಡುವೆ ಮಂತ್ರಿಗಳು ರೋಡ್ ಶೋ ಮಾಡಿದರು. ತಾರಾ ಅಂತಾ ಒಬ್ಬರಿದ್ದಾರಲ್ಲ, ಅದೇ ಸಿನಿಮಾ ತಾರೇ ಅಂದರೆ ಎಲ್ಲೆಲ್ಲೂ ಸಲ್ತೀವಿ ಅನ್ನೋ ಭ್ರಮೆಯಲ್ಲಿರೋ ಅಮ್ಮ, ಮನೆಮನೆಗೆ ಮಾತ್ರ ಅಲ್ಲ ಅಡಿಗೆ ಮನೆಗೂ ನುಗ್ಗಿ ತೆಂಗಿನಕಾಯಿ, ತಾಂಬೂಲಾನೂ ಪಡೀತು. ಕುಂಕುಮ, ಅರಿಶಿಣ ಹಣೆಗೆ, ತಾಳಿಗೆ ಫೇಟ್ ಹದಿನಾರಾಣೆ ಮುತ್ತೈದೆ ತರಹ ಹಚ್ಕೊಂತು ಮನೆಯವರೂ ಧಾರಾಳವಾಗೇ ಕೊಟ್ಟಿದ್ದರು ಅನ್ನಿ ಹೇಗಿದ್ದರೂ ಓಟು ಕೊಡಲಿ ಅಂತ ತತ್ವಸಿದ್ಧಾಂತಗಳ ಪಕ್ಷದೋರು ಕೊಟ್ಟಿದ್ದ ಹಣ ಅಲ್ವಾ.... ಇದರಿಂದ ಪುಳಕಿತರಾದ ತಾರಾ ಇವರು ಮಣೆ ಹಾಕೇ ಹಾಕ್ತಾರೆ ಅಂತಾವ ಹಮ್ಮಿನಿಂದಲೇ ನಡೆದರು ಅನ್ನಿ.



ಇವೆಲ್ಲ ಬಹಿರಂಗವಾಗಿ ನಡೀತು. ಆಮೇಲೆ ಮಾಮೂಲಿನಂತೆ ಹಣ ಹಂಚೋದು, ಹೆಂಡ ಕುಡ್ಸೋದು, ರೌಡಿಗಳನ್ನು ಬಿಟ್ಟು ಬೆದರಿಸೋದು ಇಂತಹವೆಲ್ಲ ನಡೀತು ಬಿಡಿ.

ಇಷ್ಟೆಲ್ಲ ಶ್ರಮಪಟ್ಟರೂ ಹಾಳಾದ ಜನ, ಜನಸೇವಕ ಸೋಮಣ್ಣಗೆ ವಿಧಾನಸೌಧದ ಬಾಗಿಲು ತೋರಿಸ್ಲಿಲ್ಲ! ಯಡ್ಯೂರಪ್ಪಗೆ ಹೃದಯವೇ ಬಾಯಿಗೆ ಬಂದಂತಾಯಿತು. ಇದೇನಿದು ತಮ್ಮ ಕುಲಬಾಂಧವನ್ನ, ಶೆಟ್ಟ ಓಡಿಸಿ ತಂದು ಕುಂಡ್ರಿಸಿದವ್ನ ಈ ಜನ ಅನ್ನೋರು ತಬ್ಬಲಿ ಮಾಡಿ ಕುಂದ್ರುಸವ್ರಲ್ಲಾ, ಮಠಾಧೀಶರುಗಳ ಧನಾಶೀರ್ವಾದವನ್ನೂ ಮಗ್ಗ ಮಲಗಸವಲ್ಲಾ ಅಂತೆಲ್ಲ ಚಿಂತಿಸಿದ್ರು. ನಾನೇನು ಅಂತಾವ ಈ ಸಾಬರಿಗೆ, ಕುರುಬರಿಗೆ, ಗೌಡ್ರಿಗೆ ತೋರುಸ್ತೀನಿ, ಜನ ಬ್ಯಾಡಾಂದ್ರಲ್ಲಾ ನಾನು ಬೇಕೂಂತೀನಿ, ನೀನು ಮಂತ್ರಿಯಾಗೇ ಮುಂದುವರಿ ಅಂತ ಗುಟ್ಟಲ್ಲಿ ಹೇಳಿದ್ರು.

ಚುನಾವಣೇಲಿ ಸೋತ ಮೇಲೆ ಮಂತ್ರಿ ಪದವಿಗೆ ಅಂಟಿಕೊಳ್ಳೋದು ನೈತಿಕತೆ ಅಲ್ಲ ಅಂತ ಕೆಲವರು ಅರುಚ್ತಾರೆ. ಯಾರಿಗೂ ತಿಳೀದ ಮಾತ ಇದು? ಮಾನ್ಯ ಯಡ್ಯೂರಪ್ಪನವರೂ ಇದೇ ಮಾತ ಈಗ್ಲೂ ಕೂಗಿ ಕೂಗಿ ಹೇಳ್ತಿದ್ದರು ವಿರೋಧ ಪಕ್ಷದಲ್ಲಿದ್ದಿದ್ದರೆ! ಪರಿಸ್ಥಿತಿ ಹಾಗಿಲ್ಲವಲ್ಲ. ಅದಕ್ಕೇನು ಮಾಡಿದರು ಅವರು ಎಂದರೆ 'ನಮ್ಮದು ರಾಷ್ಟ್ರೀಯ ಪಕ್ಷ. ಉನ್ನತ ನಾಯಕರೊಡನೆ ಸಮಾಲೋಚಿಸಿ ತೀರ್ಮಾನ ತೆಗೊಳ್ತೀನಿ' ಎಂದು ಮಾಧ್ಯಮಗಳ ಎದುರು ಹೇಳಿ ತಿಪ್ಪೆ ಸಾರಿಸಿದರು. ಸುಮ್ಮನೆ ಹೇಳಬಾರದು. ಮಾಧ್ಯಮದವರು ಎಷ್ಟು ತಿಳುವಳಿಕೆಯುಳ್ಳ ಜನ ಅಂತೀರಿ. ಸುಮಾರು ಜನ ಓಹೋ ಇವನು ಭಾಜಪಕ್ಕೇ ಹುಟ್ಟಿದವನು ಅಂತಾವ ರೀಫಿಲ್ ಖಾಲಿ ಮಾಡೋ ತೊಂದರೆ ತೆಗೆದುಕೊಳ್ಳಲಿಲ್ಲ!

ಮಂತ್ರಿಯಾಗಿ ಮುಂದುವರೆಯಬೇಕಾದರೆ ವಿಧಾನಮಂಡಲದ ಸದಸ್ಯ ಆಗಿರಬೇಕು ಅನ್ನೋದು ಯಡ್ಡೀಗೇ ತಿಳೀದಾ. ವಿಧಾನಪರಿಷತ್ತು ಅನ್ನೋದು ಜನರಿಂದ ಒದೆಸಿಕೊಂಡವರಿಗೆ ಆಶ್ರಯತಾಣ ಅನ್ನೋದು ಲಾಗಾಯ್ತಿನಿಂದಲೂ ನಡೆದು ಬಂದಿರೋದೇಯ. ಯಾವನಾದ್ರೂ ಒಬ್ಬನ ರಾಜೀನಾಮೆ ಕೆರೆದು ಬಿಸಾಕು ಅಂತ ಆರ್ಡರ್ ಮಾಡಬಹುದಾಗಿತ್ತು. ಅದಲ್ಲ ಯಡ್ಯೂರಪ್ಪ ಸಮಸ್ಯೆ. ಯಾವ ಜಾತಿಯೋನ್ನ ಬಿಸಾಕಬೇಕು ಅನ್ನೋದು. ಸಾಬರು ಇಲ್ವೇ ಇಲ್ಲ ಬಿಡಿ. ಒಕ್ಕಲಿಗರು, ಕುರುಬರನ್ನ ಕೇಳಿದರೆ ರಣಾರಂಪ ಆಯ್ತದೆ. ಲಿಂಗಾಯತನ್ನ ಕೇಳಿದ್ರೆ ರೆಡ್ಡಿ ಗುಂಪು ಬಲವಾಗ್ತದೆ. ತಿರುಬೋಕಿ ಜಾತಿಯವು ಯಾವವೆ ಅನ್ನೋ ತಲಾಷಿನಲ್ಲಿದ್ದಾರಂತೆ ಯಡ್ಡಿ. ಅವರನ್ನ ಕಿತ್ತು ಬಿಸಾಕಿದರೂ ಯಾರೂ ಹಾದಿ ರಂಪಬೀದಿ ರಂಪ ಮಾಡೋದಿಲ್ಲ ಅನ್ನೋ ಕಾರಣಕ್ಕೆ.

ಸಾಮಾನ್ಯರಿಗೆ ಅನ್ನಿಸೋದೆ ಬೇರೆ. ಯಾವ ಜಾತಿಯವನ್ನ ಕಿತ್ತಾಕಿದರೂ ಆಕಾಶವೇನೂ ತಲೆ ಮೇಲೆಕಳಚಿ ಬೀಳೋದಿಲ್ಲ. ಯಾವುದಾದರೂ ನಿಗಮ ಮಂಡಳಿ ಚೇರ್‌ಮನ್‌ಗಿರಿ ಬಿಸಾಕ್ತೀನಿ ಅಂದ್ರೆ ಬ್ಯಾಡ ಅಂದರೂ ಅನ್ನಬಹುದು. ಆ ಜಾಗಾನ ಕ್ಯಾಬಿನೆಟ್ ಸಚಿವರ ದರ್ಜೆಗೇರುಸ್ತೀನಿ ಅಂದ್ರೆ ನಾನು ತಾನು ಅಂತ ಮುಗಿಬೀಳ್ತವೆ. ಹೇಗೂ ಮಂತ್ರಿಗಳ ಸಂಖ್ಯೆಗೆ ಕಾನೂನಿನ ಮಿತಿ ಇದೆಯೇ ಹೊರತು ನಿಗಮ ಮಂಡಳಿಗಳ ಸ್ಥಾನ ಉನ್ನತ ದರ್ಜೆಗೆ ಏರಿಸುವುದಕ್ಕಲ್ಲವಲ್ಲ! ಇದಕ್ಕೂ ಕೊಸರಾಡೋರು ಇದ್ದರೂ ಇರಬಹುದು. ಒಂದಷ್ಟು ಕೋಟಿ ಬಿಸಾಕಿದ್ರಾಯ್ತು. ಬಾಲ ಮುದುರಿಕೊಳ್ತವೆ. ಹೇಗಿದ್ದರೂ ಅವರು ಸದಸ್ಯರಾಗಿರೋದೆ ದೇಶ ಕೊಳ್ಳೆ ಹೊಡೆಯಕ್ಕಲ್ವಾ.

ಅಂತೂ ಯಾರ ಪಾಕೆಟ್ ಎಷ್ಟು ಉಬ್ಬುತ್ತೆ ಅನ್ನುವುದರ ಮೇಲೆ ಸೋಮಣ್ಣ ಭವಿಷ್ಯ ನಿಂತಿದೆ.

ಆಹಾ! ಏನು ಪ್ರಜಾಪ್ರಭುತ್ವ ಎಂತಹ ಮಾದರಿ!

ವರ್ಕ್‌ಔಟ್ ಆಗದ ಭರಣಿಯ ದಲಿತ ಗುರಾಣಿ

ಒಂದು ಪತ್ರ

ಮೆಗಾಸಿಟಿ ವಂಚಕ ಯೋಗೇಶ್ವರ್ ಮತ್ತು ವಿಜಯನಗರ ವೀರಪುತ್ರ ಸೋಮಣ್ಣನ ಸೋಲಿಗಿಂತಲೂ ಮುಖ್ಯವಾಗಿ ಪ್ರಜ್ಞಾವಂತ ದಲಿತರಿಗೆ ಖುಷಿಕೊಟ್ಟ ಸಂಗತಿಯೆಂದರೆ ಸಮಯಸಾಧಕ ಸುಭಾಷ್‌ಭರಣಿಯ ಸೋಲು.

ಮಾಯಾವತಿಯ ಬಿಎಸ್‌ಪಿ ರಾಜ್ಯದಲ್ಲಿ ಏನನ್ನೂ ಸಾಧಿಸಲಾಗದಿದ್ದರೂ ತನ್ನ ಅಭ್ಯರ್ಥಿಗಳ ... ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳನ್ನು ಒಡೆ ಆ ಮೂಲಕ ಅನೇಕ ಬಾರಿ ಬಿಜೆಪಿಯ ಗೆಲುವಿಗೆ ಸಹಾಯ ಮಾಡಿದ್ದಂತೂ ಹೌದು. ಕಳೆದ ವಿಧಾನಸಭಾ ಚುನಾವಣೆ ಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದಗೌಡರ ಮರ್ಯಾದೆ ಉಳಿಸಿದ್ದೂ ಈ ಬಿಎಸ್‌ಪಿಯೇ. ಸ್ವಾಭಿಮಾನಿ ವೇದಿಕೆಯ ಶಕುಂತಲಾ ಶೆಟ್ಟಿ ಗೆಲ್ಲುವಂತಹ ಪಡೆಯದಿದ್ದರೂ ತೀರಾ ಅಲ್ಪಅಂತರದಲ್ಲಿ ಸೋತ ಕಾಂಗ್ರೆಸ್‌ನ ಮತವನ್ನು ಒಡೆದು ಬಿಜೆಪಿಯನ್ನು ಗೆಲ್ಲಿಸಿದ್ದು ಸಾಕಷ್ಟು ಮತಗಳಿಸಿ ಕೊಂಡಿದ್ದ ಬಿಎಸ್‌ಪಿ ಕ್ಯಾಂಡಿಡೇಟೇ ಎನ್ನುವುದಂತೂ ಹೌದು. ಇದೇ ಈಗ ಕೊಳ್ಳೇಗಾಲ ಕ್ಷೇತ್ರದಲ್ಲಿ ನಿಂತ ಬಿಎಸ್‌ಪಿಯ ಸುಭಾಷ್ ಭರಣಿಯಿಂದ ಆಗಿದೆ. ಅಂದರೆ ಕೇವಲ ಮೂರಂಕಿಯ ಅಂತರದಲ್ಲಿ ಗೆದ್ದ ಬಿಜೆಪಿ ಕ್ಯಾಂಡಿಡೇಟ್‌ನ ಗೆಲುವು ಭರಣಿ ತನ್ನ 21 ಸಾವಿರ ಮತಗಳಲ್ಲಿ ಒಡೆದ ಕಾಂಗ್ರೆಸ್‌ನ ಮತಗಳ ಪಾಲೂ ಸಾಕಷ್ಟು ಇದ್ದವು.

ದಕ್ಷಿಣ ಭಾರತದಲ್ಲಿ ಅಸ್ಪೃಶ್ಯವಾಗಿದ್ದ ಕೋಮುವಾದಿ ಬಿಜೆಪಿಯ ಪ್ರತಿಷ್ಠಾಪನೆಯಲ್ಲಿ ದಲಿತರು-ಹಿಂದುಳಿದ ವರ್ಗದವರ ಕೊಡುಗೆಯೂ ಸಾಕಷ್ಟಿದೆ. ಗೆಲ್ಲಲೂ ಆಗದೇ ಸೋಲನ್ನು ಒಪ್ಪಿಕೊಳ್ಳಲಾಗದೇ ಅಂತರ್‌ಪಿಶಾಚಿ ಯಂತೆ ಅಲೆದಾಡುತ್ತಿದ್ದ ಬಿಜೆಪಿಗೆ ರಾಜ್ಯದಲ್ಲಿ ಒಂದು ನೆಲೆ ಅಂತ ಸಿಕ್ಕಿ ಜನಬೆಂಬಲ ದೊರಕಿದ್ದು ಈಡಿಗ ಸಮುದಾಯದ ಬಂಗಾರಪ್ಪನವರ ಪಕ್ಷಾಂತರದಿಂದ. ಈ ಬಹುಸಂಖ್ಯಾತ ದಲಿತ-ಹಿಂದುಳಿದವರನ್ನು ಸರಿಯಾಗಿ ದುಡಿಸಿಕೊಂಡು ಪ್ರದರ್ಶನದ ಗೊಂಬೆಯಂತೆ ಬೇಕಾದ ಕಡೆ ಮುಂದಿಟ್ಟುಕೊಂಡು ಬಿಜೆಪಿ ರಾಜ್ಯದಲ್ಲಿ ಬೆಳೆಯುತ್ತಾ ಬಂತು. ಅದು ಬೆಸ್ತರ ಜನಾಂಗದ ಮನೋರಮಾ ಮಧ್ವರಾಜ್‌ರಿಂದ ಹಿಡಿದು ಈಗಿನ ಭರಣಿಯತನಕ ನಡೆಯುತ್ತಾ ಬಂತು. ಆದರೆ ತಮ್ಮ ಕೆಲಸವಾಗೋತನಕ ಮಷ್ಕೇ ಇವರುಗಳು ಬಳಕೆಯಾದರೇ ವಿನಃ ತದನಂತರ ಬಿಜೆಪಿ ಇವರನ್ನು ಕಡೆಗಣಿಸಿತು.

ಈಗಿನ ರಾಜಕೀಯ ಸನ್ನಿವೇಶಗಳು ಹೇಗಿರುತ್ತವೆ ಯೆಂದರೆ, ಎಲ್ಲಾ ಪಕ್ಷಗಳ ಕತೆಯೂ ಒಂದೇ ಆಗಿರುವ ಕಾರಣ ಜನರಿಗೆ ಉಳಿದಿರುವುದು ಕಡಿಮೆ ಕೆಟ್ಟ ಪಕ್ಷಗಳನ್ನು ಆರಿಸುವಂತಹ ಅವಕಾಶ. ಕಾಂಗ್ರೆಸ್‌ನಂತಹ ಪಕ್ಷಗಳು ದಲಿತ ಹಿಂದುಳಿದವರನ್ನೆಲ್ಲ ತಲೆಮೇಲೆ ಹೊತ್ತುಕೊಂಡು ಮೆರೆದ ಪಕ್ಷವೆಂದೇನೂ ಅಲ್ಲದಿದ್ದರೂ ಕನಿಷ್ಠ ಈ ದೇಶದ ಜಾತ್ಯತೀತ ಸಂವಿಧಾನಕ್ಕೆ ಸ್ವಲ್ಪ ಮಟ್ಟಿಗಾದರೂ ಗೌರವ ಕೊಟ್ಟು ಅಧಿಕಾರ ನಡೆಸಿದಂತಹ ಪಕ್ಷ. ಆದರೆ ಬಿಜೆಪಿಯ ತತ್ವಸಿದ್ಧಾಂತ ಆಜ್ಞೆಗಳೆಲ್ಲ ಹೊರಡುವುದು ಅವರ ಮೂಲನೆಲೆ ಆರೆಸ್ಸೆಸ್ ಗರ್ಭಗುಡಿಯೊಳಗಿಂದ. ಈ ಆರೆಸ್ಸೆಸ್ ತಾನೆಷ್ಟೇ ರಾಜಕೀಯೇತರ ಸಂಘಟನೆ ಎಂದು ಕೂಗಾಡಿ ದರೂ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ಅದು ನಡೆಸುತ್ತಿರುವ ಹಸ್ತಕ್ಷೇಪ ಎಲ್ಲರಿಗೂ ಗೊತ್ತಿದ್ದದ್ದೇ. ಮನುಧರ್ಮ ಸಿದ್ಧಾಂತದ ಜಾರಿ, ಪುರೋಹಿತಶಾಹಿಗಳ ಕೇಂದ್ರೀಕೃತ ರಾಜ್ಯಭಾರ, ಅನ್ಯಧರ್ಮಗಳ ಮೇಲಿನ ಅಸಹನೆ, ಕೆಳವರ್ಗದವರನ್ನು ಅನ್ಯಧರ್ಮೀಯರ ಮೇಲೆ ಎತ್ತಿಕಟ್ಟಿ ಒಂದೇ ಏಟಿಗೆ ಎರಡು ಹಣ್ಣುಗಳನ್ನು ಕೆಡವುವ ತಂತ್ರಗಳೇ ಆರೆಸ್ಸೆಸ್, ಬಿಜೆಪಿ, ಸಂಘಪರಿವಾರದ ಹೂರಣ. ಬಿಎಸ್‌ಪಿಯ ನೈಜ ರೂಪವನ್ನ ನೋಡಿಯೇ ತಾನೇ 'ಮನಮೋಹಪ್ಪ ನೀನೇ ಎರಡನೇ ಬಾರಿಗೆ ಮುಂದುವರಿ' ಎಂದು ದೇಶದ ಜನತೆ ಬಿಜೆಪಿಯನ್ನು ತಿರಸ್ಕರಿಸಿದ್ದು. ಆರೆಸ್ಸೆಸ್‌ನ ಆಣತಿಯಂತೆ ಜನಸಮುದಾಯಗಳ ನಡುವೆ ಹುಳಿ ಹಿಂಡಿ ಬೇಳೆ ಬೇಯಿಸಿಕೊಳ್ಳುವ ಬಿಜೆಪಿ ತೆಕ್ಕೆಗೆ ಅಧಿಕಾರ ಮತ್ತು ಹಣದಾಸೆಗೆ ಬಿದ್ದು ಈ ಭರಣಿಯಂತವರು ಹೋಗಿ ಬರುವುದುಂಟು. "ಅನ್ನ ಹಳಸಿತ್ತು, ನಾಯಿ ಹಸಿದಿತ್ತು" ಅಂತಾರಲ್ಲ ಹಾಗೆ ಬಂಗಾರು ಲಕ್ಷ್ಮಣ್‌ಗೆ ಮಾಡಿದ ನಂತರದ ಹಾಗೆ ತಮ್ಮ ಕೆಲಸ ಆದ ಮೇಲೆ ತಳ್ಳಿಬಿಡುವ ಜಾಯ ಮಾನದ ಬಿಜೆಪಿ ವರಿಷ್ಠರ ಹಿಕ್ಮತ್‌ಗೆ ಈ ಭರಣಿಯೂ ಹೊರತಾಗಿರಲಿಲ್ಲ.


ಈ ಭರಣಿ ಮತ್ತು ಶ್ರೀರಾಮುಲುನಂತವರಿಗೆ ತಮಗೇ ಅವಮಾನವಾದಾಗ, ಅನ್ಯಾಯವಾದಾಗ, ಪೆಟ್ಟು ಬಿದ್ದಾಗಲಷ್ಟೇ ತಾವು ದಲಿತರು-ಹಿಂದುಳಿದವರು, ತಮಗೆ ಅನ್ಯಾಯವಾಗಿದೆ ಎಂಬ ಜ್ಞಾನೋದಯವಾಗುತ್ತದೆ. ಈ ಕಾರಣಕ್ಕೆ ಬಿಎಸ್‌ಪಿಗೆ ಒಳ್ಳೇ ನೆಲೆ ಇದ್ದ ಕೊಳ್ಳೇಗಾಲದಲ್ಲಿ ದಲಿತನೆಂಬ ಗುರಾಣಿ ಹಿಡಿದು ಗೆಲ್ಲುವ ಕನಸು ಕಾಣುತ್ತಿದ್ದ ಭರಣಿಗೆ ಜನ ಸರಿಯಾಗೇ ಬುದ್ಧಿ ಕಲಿಸಿದ್ದಾರೆ. ಕಳೆದ ಬಾರಿ ಬಿಎಸ್‌ಪಿಯ ಮಹೇಶ್ ಇಲ್ಲಿ ಸ್ವಲ್ಪವೇ ಅಂತರದಲ್ಲಿ ಸೋತಿದ್ದರು. ಈ ಬಾರಿ ಬಲಿತ ದಲಿತ ಧರೆಗೆ ಭಾರವಾದ ಭರಣಿಯನ್ನು ಜನ ಪ್ರಪಾತಕ್ಕೆ ತಳ್ಳಿದ್ದರೂ ಅದರ ಲಾಭವನ್ನು ಬಿಜೆಪಿ ಪಡೆಯಿತು. ಆದರೆ ನಷ್ಟವಾಗಿರುವುದು ಕೊಳ್ಳೇ ಗಾಲ ಕ್ಷೇತ್ರಕ್ಕೆ ಎಂಬುದಂತೂ ಸತ್ಯ....

-ರವಿ ಪುತ್ತೂರ, ದ.ಕ.



ಅವಾಂತರಿ ಪ್ರೇಮ್ ಹಿಂದೆ ದಶಾವತಾರಿ ಚಂದ್ರು

...ಕಳೆದ ಭಾನುವಾರ ನಿರ್ದೇಶಕ ಪ್ರೇಮ್ ಅತ್ತ ಟೀವಿ ...ಕಾರ್ಯಕ್ರಮವೊಂದರಲ್ಲಿ ಕೂತು "ನೆವರ್ ನೆವರ್, ...ನ್ನಾರಿಗೂ ಮೋಸ ಮಾಡಿಲ್ಲ. ಎಲ್ಲರಿಗೂ ಬೇಕಾದಷ್ಟು ...ಟ್ಟು ಕೊಟ್ಟಿದ್ದೇನೆ'' ಎಂದು ನಾಜೂಕಯ್ಯನಂತೆ ರೀಲು ...ಬಿಟ್ಟಿದ್ದರೆ. ಇತ್ತ ಪ್ರೇಮ್ ತಂಡದ ಮಾಜಿ ಸದಸ್ಯರ ...ಟ್ಟೆಗಳು ಕೆಂಡದಂತೆ ಉರಿಯಲು ಆರಂಭಿಸಿದ್ದವು. ...ಮರಿಗೆ ಸಿಕ್ಕರೆ ಕಪಾಳಕ್ಕೆ ಹೊಡೆದು ಜಾಡಿಸಬೇಕು'' ...ದು ಆ ಹುಡುಗರು ತಮ್ಮ ಸಂಕಟವನ್ನು ವ್ಯಕ್ತಪಡಿಸಿ ...ಪ್ರೇಮ್‌ಗೆ ಹಿಡಿಹಿಡಿ ಶಾಪ ...ಹಾಕುತ್ತಿದ್ದರು.



ಪ್ರೇಮ್


...ಯಾಕೆಂದರೆ ಪ್ರೇಮ್ ತನ್ನ ...ಕಾರ ದಶಾವತಾರ ಚಂದ್ರು ...ಜತೆ ಸೇರಿ ಒಬ್ಬೊಬ್ಬ ಹುಡುಗ ...ಗೂ ಮಾಡಿರುವ ಅನ್ಯಾಯ ...ಷ್ಟಲ್ಲ. 'ಪ್ರೀತಿ ಏಕೆ ಭೂಮಿ ...ಮೇಲಿದೆ' ಚಿತ್ರೀಕರಣದ ಸಮಯ ... ಪ್ರೇಮ್‌ನ ಅಸೋಸಿಯೇಟ್ ...ರ್ಯನ (ಈಗ 'ಗುಬ್ಬಿ' ಚಿತ್ರದ ...ನಿರ್ದೇಶಕ) ತಂದೆ ತೀರಿಕೊಂಡರು. ...ಮು ವಿಜಯ್ ತಂದೆಯನ್ನು ...ದುಕೊಂಡು, ಕೈಯಲ್ಲಿ ಬಿಡಿ ...ಇಲ್ಲದೇ ಪರದಾಡುತ್ತಿದ್ದರೂ ...ಕ್ಷಣಕ್ಕಾದರೂ ಪ್ರೇಮ್ ಆತನಿಗೆ ಒಂದು ರೂಪಾಯಿಯ ...ಸಹಾಯವನ್ನೂ ಮಾಡಿರಲಿಲ್ಲ. 'ಜೋಗಿ' ನಿರ್ಮಾಣಗೊಂಡ ...ಸಮಯದಲ್ಲಂತೂ ಮಳವಳ್ಳಿ ಸಾಯಿಕೃಷ್ಣ ಹಗಲೂರಾತ್ರಿ ...ಹೊಟ್ಟೆಗಿಲ್ಲದೆ ದುಡಿದು, ತೀವ್ರವಾದ ಅಸಿಡಿಟಿಯಾಗಿ, ...ಗದು ಹಾರ್ಟ್ ಪ್ರಾಬ್ಲಮ್ಮಿಗೆ ತಿರುಗಿದರೂ ಜುಗ್ಗ ...ಪ್ರೇಮ್ ಆಸ್ಪತ್ರೆ ಖರ್ಚಿಗೂ ನಯಾಪೈಸೆ ಬಿಚ್ಚಲಿಲ್ಲ. ಕಡೆಗೆ ಸ್ನೇಹಿತರೆಲ್ಲಾ ಅಷ್ಟೋ ಇಷ್ಟೋ ದುಡ್ಡು ಹೊಂದಿಸಿ ಸಾಯಿಕೃಷ್ಣನ ಆಸ್ಪತ್ರೆ ಖರ್ಚು ಭರಿಸಿದ್ದರು.

...ಪಾಳಕ್ಕೆ ...ಹೊಡೆಯೋಣ ...ಅನ್ನಿಸ್ತಿದೆ...

ಪ್ರೇಮ್‌ನ ಆರಂಭದ ...ಗಳಿಂದಲೂ ಅವನೊಟ್ಟಿಗೆ ಬೆನ್ನೆಲುಬಾಗಿ ನಿಂತದ್ದು ...ಎಡಿಟರ್ ಸೀನು ಮತ್ತು ಕ್ಯಾಮರಾಮೆನ್ ಎಂ.ಆರ್. ...ಸೀನು. ಪ್ರೇಮ್ 'ಕರಿಯ' ನಿರ್ದೇಶಿಸುವ ಹೊತ್ತಿನಲ್ಲಿ ...ಮು ಹಳೇ ಕೈನೆಟಿಕ್ ಹೋಂಡಾ ಇಟ್ಟುಕೊಂಡಿದ್ದ. ...ದರ ಪೆಟ್ರೋಲು ಖರ್ಚಿನಿಂದ ಹಿಡಿದು ಆತನ ಕಾಲಿನ ...ಚಪ್ಪಲಿಗಳ ತನಕ ಎಲ್ಲವನ್ನೂ ಎಡಿಟರ್ ಸೀನು ಅವರೇ ...ನೋಡಿಸುತ್ತಿದ್ದರು. ಇಷ್ಟೆಲ್ಲಾ ನೆರವಾದ ಸೀನು 'ರಾಜ್' ...ತ್ರದ ಎಡಿಟಿಂಗ್‌ಗೇ ದುಡ್ಡು ಕೇಳಿದರು ಎಂಬ ಒಂದೇ ...ಕಾರಣಕ್ಕೆ "ಮುಂದಿನ ಸಿನಿಮಾಗೆ ಬೇರೆ ಎಡಿಟರ್ ಹುಡು ...ಕಣ. ಇವನ ಸಹವಾಸ ಸಾಕು...'' ಎಂದು ಹೇಳಿಕೊಂಡು ...ತಿರುಗುತ್ತಿದ್ದಾನೆ ಪ್ರೇಮ್.

...'ಎಕ್ಸ್‌ಕ್ಯೂಸ್ ಮಿ' ಹಿಟ್ ಆದಾಗ ಅದರ ರಿಮೇಕ್ ...ಗೆ ಹತ್ತು ಲಕ್ಷ ರೂಪಾಯಿ ಬಂದಿತ್ತು. ಅದರ ಸಣ್ಣ ...ವನ್ನೂ ತನ್ನೊಟ್ಟಿಗೆ ದುಡಿದವರಿಗೆ ವ್ಯಯಿಸಲಿಲ್ಲ ಪ್ರೇಮ್. ...ನಂತರ 'ಜೋಗಿ' ಚಿತ್ರದ ತೆಲುಗು ಮತ್ತು ತಮಿಳು ...ರಿಮೇಕ್ ಹಕ್ಕುಗಳಿಗೆ ಬಂದ ಒಂದೂ ಮುಕ್ಕಾಲು ...ಕೋಟಿಯ ಅಷ್ಟೂ ಮೊತ್ತವನ್ನು ತನ್ನ ತಿಜೋರಿಗೇ ತುಂಬಿ ...ಕೊಂಡ ಪ್ರೇಮ್ ತಾನೆಂಥ ಸ್ವಾರ್ಥಿ ಎಂಬುದನ್ನು ತೋರಿಸಿ ...ಕೊಟ್ಟಿದ್ದ.

...ಸಹಾಯ ಮಾಡದಿದ್ದರೆ ಹಾಳಾಗಲಿ, ಕೊಡುವ ದುಡ್ಡನ್ನಾದರೂ ಸರಿಯಾಗಿ ಕೊಡುತ್ತಾನಾ ಎಂದರೆ ಅದೂ ಇಲ್ಲ. 'ರಾಜ್' ಚಿತ್ರದ ಡೈರೆಕ್ಷನ್ ಡಿಪಾರ್ಟ್‌ಮೆಂಟಿಗೆ ಎಂದು ಎಂಟು ಲಕ್ಷಗಳ ಪ್ಯಾಕೇಜ್ ಪಡೆದು ಸಂಭಾವನೆ ಬರೆದ ಆನಂದ್‌ಗೆ ಎರಡು ಲಕ್ಷ, ಅಸೋಸಿಯೇಟ್ ರಘುಗೆ 1 ...ಲಕ್ಷ ಹಾಗೂ ಮತ್ತೊಬ್ಬ ...ಸಹಾಯಕ ಚನ್ನಪಟ್ಟಣದ ...ಗೆ 75 ಸಾವಿರದ ಪುಡಿಗಾಸು ಕೊಟ್ಟು ಮಿಕ್ಕಹಣಕ್ಕೆ ...ಎಂದಿದ್ದಾನೆ. ಬಡಪಾಯಿ ಹುಡುಗರು ನಿರ್ಮಾಪಕ ...ಸುರೇಶ್ ಗೌಡರನ್ನು ಕೇಳಿದರೆ, "ನೋಡಪ್ಪಾ ಕೊಡೋ ...ದೆಲ್ಲಾ ಪ್ರೇಮ್ ಕೈಗೆ ಕೊಟ್ಟಾಗಿದೆ'' ಎಂದು ಹೇಳಿ ...ಕೊಟ್ಟಿರುವ ಪೊಳ್ಳು ಬಿಲ್ಲುಗಳನ್ನು ತೋರಿಸುತ್ತಿದ್ದಾರೆ. ...'ಹಳ್ಳಿಯಿಂದ ಬಂದವರಿಗೆ ಒಯ್ಯುತ್ತ ...' ಎಂಬ ...ಮಾಡಿ ಆದರೆ ... ಮಾಡಿ ... ನೋಡಿ ... ಕೊಳ್ಳೋಣ?



...ಗೌಡ

'ರಾಜ್' ಚಿತ್ರ ಬಿಡುಗಡೆಯೊಂದಿಗೆ ಅದರ ನಿರ್ದೇಶಕ ಪ್ರೇಮ್‌ನ ನಸೀಬೂ ಎಕ್ಕುಟ್ಟೋದಂತೆ ಕಾಣಿಸುತ್ತಿದೆ!


'ರಾಜ್' ಚಿತ್ರವನ್ನು ವಿದೇಶಗಳಲ್ಲಿ ಬಿಡುಗಡೆ ಮಾಡುವುದಾಗಿ ಹೇಳಿದ್ದ ಡಾ. ಕಿರಣ್ ಈಗ ಪ್ರೇಮ್ ವಿರುದ್ಧ ಮಾನನಷ್ಟ ಮೊಕದ್ದಮೆ ಜಡಿದು 50 ಲಕ್ಷ ರೂಪಾಯಿಗಳ ಪರಿಹಾರವನ್ನು ಕೋರಿ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದಾರೆ. ಅಷ್ಟೇ ಅಲ್ಲ, ತನಗೆ ಜೀವ ಬೆದರಿಕೆ ಒಡ್ಡಿದರೆಂದು ಆರೋಪಿಸಿ ಪ್ರೇಮ್ ಶಿಷ್ಯಂದಿರ ವಿರುದ್ಧವೂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಒಂದೆಡೆ ಪುನೀತ್ ಅಭಿಮಾನಿಗಳು ಪ್ರೇಮ್‌ನ ಅಭಿರುಚಿಯಿಂದಾಗಿ ತಮ್ಮ ಫೇವರಿಟ್ ಸ್ಟಾರ್‌ನ ಇಮೇಜಿಗೆ ಆಗಿರುವ ಧಕ್ಕೆಯನ್ನು ನೆನೆದು ಪ್ರೇಮ್ ಮೇಲೆ ಒಂದು ಕೈ ನೋಡಿಕೊಳ್ಳಲು ಹವಣಿಸುತ್ತಿದ್ದರೆ, ಇನ್ನೊಂದೆಡೆ ವೈದ್ಯಕೀಯ ಪ್ರೊಫೆಸರ್ ಆಗಿರುವ ಡಾ.ಕಿರಣ್ ಎಂಬ ಯುವಕ ಪ್ರೇಮ್ ಮತ್ತು ಆತನ ಪಟಾಲಂ ಮೇಲೆ ಕಾನೂನಿನಡಿ ಸಮರ ಸಾರಿದ್ದಾರೆ.

ನಡೆದದ್ದು ಇಷ್ಟು

'ರಾಜ್' ಬಿಡುಗಡೆಯಾದಾಗ ಮತ್ತು ಬಿಡುಗಡೆಯಾದ ನಂತರ ಪತ್ರಿಕೆಗಳ ಜಾಹೀರಾತುಗಳಲ್ಲಿ 'ಪ್ರಪಂಚದಾದ್ಯಂತ ಭರ್ಜರಿಯಾಗಿ ಪ್ರದರ್ಶನವಾಗುತ್ತಿದೆ' ಎಂದು ದೊಡ್ಡದಾಗಿ ಬರೆಸಿ ಪ್ರಿಂಟು ಮಾಡಲಾಗಿತ್ತು. ಅಸಲಿಗೆ ಕರ್ನಾಟಕವನ್ನು ಹೊರತುಪಡಿಸಿ ಪ್ರಪಂಚದ ಇತರೆ ಯಾವ ನಗರದ ಯಾವ ಗಲ್ಲಿಯಲ್ಲೂ 'ರಾಜ್' ಬಿಡುಗಡೆಯೇ ಆಗಿರಲಿಲ್ಲ. ಅದಕ್ಕೆ ಕಾರಣವೂ ಇತ್ತು.

ಇಲ್ಲಿ ಸೆನ್ಸಾರ್ ಆಗಿ ಬಿಡುಗಡೆಗೊಂಡ ಚಿತ್ರಗಳು ವಿದೇಶದಲ್ಲೂ ಬಿಡುಗಡೆಗೊಳ್ಳಬೇಕೆಂದರೆ ಅಲ್ಲಿ ಆ ಚಿತ್ರವನ್ನು ಮತ್ತೊಮ್ಮೆ ಸೆನ್ಸಾರ್‌ಗೆ ಒಳಪಡಿಸಬೇಕು. ಈ ಎಲ್ಲಾ ಪ್ರಕ್ರಿಯೆಗಳು ನಡೆಯಲು ಏನಿಲ್ಲವೆಂದರೂ ಹದಿನೈದು ದಿನದ ಸಮಯವಾದರೂ ಬೇಕೇಬೇಕು. ಆದರೆ 'ರಾಜ್' ಬಿಡುಗಡೆಗೆ ಕೇವಲ ಮೂರು ದಿನ ಬಾಕಿಯಿದ್ದಂತೆ ಪ್ರಿಂಟು ರೆಡಿ ಮಾಡಿಸಿ ಅದನ್ನು ಕಿರಣ್ ಅವರಿಗೆ ಕಳುಹಿಸಿ 'ಇದನ್ನು ಫಾರಿನ್‌ನಲ್ಲಿ ರಿಲೀಸ್ ಮಾಡಿ' ಎಂದರೆ ಅದು ಯಾವ ವಿತರಕನಿಂದಲೂ ಸಾಧ್ಯವಾಗದ ಕೆಲಸ. ಚಿತ್ರವನ್ನು ತಯಾರಿಸಲು ಸುಮಾರು ಎರಡು ವರ್ಷ ತೆಗೆದುಕೊಂಡ ಪ್ರೇಮ್ ಹೀಗೆ ಚಿತ್ರ ಬಿಡುಗಡೆಗೆ ಒಂದೆರಡು ದಿನವಿರುವಾಗ ಅದರ ಪ್ರಿಂಟ್ ನೀಡಿದರೆ ಅದನ್ನು ಕಿರಣ್ ಹತ್ತಾರು ದೇಶಗಳಲ್ಲಿ ರಿಲೀಸ್ ಮಾಡುವುದಾದರೂ ಹೇಗೆ?




0299874

ದೂರುದಾಖಲಾದ ಬಗ್ಗೆ ಕಿರಣ್ ಪಡೆದ ಸ್ವೀಕೃತಿ....

ಪರಿಸ್ಥಿತಿ ಹೀಗಿದ್ದರೂ ಚಿತ್ರದ ಜಾಹೀರಾತುಗಳಲ್ಲಿ ಹದಿನೈದಿಪ್ಪತ್ತು ದೇಶಗಳಲ್ಲಿನ ಥಿಯೇಟರುಗಳ ಪಟ್ಟಿಯನ್ನು ಪ್ರಕಟಿಸಿ 'ಜಗತ್ತಿನೆಲ್ಲೆಡೆ ಭರ್ಜರಿ ಪ್ರದರ್ಶನ ಕಾಣುತ್ತಿದೆ' ಎಂದು ಹಾಕಿಸಿದ್ದು ಪ್ರೇಮ್‌ನ ಪ್ರಚಾರ ತಂತ್ರವಲ್ಲದೇ ಮತ್ತೇನೂ ಅಲ್ಲ. ಇದು ಗೊತ್ತಾಗಿದ್ದೇ ತಡ ಕಳೆದ ಸೋಮವಾರದಂದು ಪ್ರೇಮ್ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರೆಲ್ಲರೂ "ಹೊರದೇಶಗಳಲ್ಲಿ 'ರಾಜ್' ಬಿಡುಗಡೆಯೇ ಆಗದಿರುವಾಗ ಪ್ರಪಂಚದ ಎಲ್ಲೆಡೆ ಭರ್ಜರಿ ಪ್ರದರ್ಶನ ಎಂದು ಜಾಹೀರಾತು ನೀಡಿ ಯಾಕೆ ಗಿಮಿಕ್ ಮಾಡಿದ್ದೀರ? ಇದರಿಂದ ಪ್ರೇಕ್ಷಕರನ್ನು ದಿಕ್ಕು ತಪ್ಪಿಸಿದಂತಾಗುವುದಿಲ್ಲವೇ?'' ಎಂದು ಆತನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಆಗ ಭಾವಾವೇಶಕ್ಕೊಳಗಾದವನಂತೆ ಎಗರಾಡಿದ ಪ್ರೇಮ್ "ವಿದೇಶಗಳಲ್ಲಿ ಚಿತ್ರ ವಿತರಿಸಲು ಒಪ್ಪಿದ್ದ ಕಿರಣ್ ಎಂಬ ಫೋರ್‌ಟ್ವೆಂಟಿ ನಮಗೆ ಮೋಸ ಮಾಡಿಬಿಟ್ಟಿದ್ದಾನೆ. ಆ ಫ್ರಾಡು ನಮಗೆ ಫೋರ್ಜರಿ ಮಾಡಿದ್ದಾನೆ... ಆತ ಕಳ್ಳ'' ಎಂದು ಕಿರಣ್ ವಿರುದ್ಧವೇ ಬಾಯಿಗೆಬಂದಂತೆ ಬೈದಿದ್ದ. ಅಂದು ನಾಲಿಗೆ ಮೇಲೆ ಹಿಡಿತವಿಲ್ಲದಂತೆ ಮಾತನಾಡಿದ ಪ್ರೇಮ್ ಮುಂದಾಗಲಿರುವ ಯಡವಟ್ಟುಗಳ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ಆದರೀಗ ಅದೇ ಆಗಿದೆ. ಯಾವ ಕಿರಣ್ ಅವರನ್ನು ಪ್ರೇಮ್ 'ಫ್ರಾಡು', '420' ಎಂದು ಕರೆದಿದ್ದನೋ ಅದೇ ಕಿರಣ್ ಇವತ್ತು ಪ್ರೇಮ್ ವಿರುದ್ಧ ತಮ್ಮ ವಕೀಲರಾದ ಅಕ್ಷಯ್‌ಶ ಮೂಲಕ ಮಾನನಷ್ಟ ಮೊಕದ್ದಮೆಯನ್ನು ದಾಖಲಿಸಿದ್ದಾರೆ. ಒಂದು ವೇಳೆ ಈ ಕೇಸ್‌ನಲ್ಲಿ ಪ್ರೇಮ್ ಸೋತರೆ ಆಗ ಆತ ಕಿರಣ್ ಅವರಿಗೆ ಬರೋಬ್ಬರಿ 50 ಲಕ್ಷ ರೂಪಾಯಿಗಳ ದಂಡ ತೆತ್ತಬೇಕಾಗುತ್ತದೆ!



ದಶಾವತಾರ ಚಂದ್ರು

ನಿರ್ಮಾಪಕರಿಗೆ ಸಂಬಂಧಿಸಿದ್ದು!

ಸಿನಿಮಾ ಮಾಡಿರುವ ಲಾಭದ ಬಗೆಗಾಗಲಿ, ಅದರ ಕಲೆಕ್ಷನ್ ಬಗೆಗಾಗಲಿ ಮಾತನಾಡಬೇಕಿದ್ದು ಚಿತ್ರದ ನಿರ್ಮಾಪಕ. ಆದರೆ ಪ್ರೇಮ್ ತಾನೇ ಚಿತ್ರದ ನಿರ್ಮಾಪಕ ಎಂಬಂತೆ ಅಸಲಿ ನಿರ್ಮಾಪಕರಾದ ಸುರೇಶ್‌ಗೌಡ ಮತ್ತು ಶ್ರೀನಿವಾಸಮೂರ್ತಿ ಅವರ ಅನುಪಸ್ಥಿತಿಯಲ್ಲಿ 'ರಾಜ್' ಚಿತ್ರದ ಲಾಭ, ಕಲೆಕ್ಷನ್ ಬಗ್ಗೆ ಮಾತನಾಡಿದ್ದಾನೆ. ಅಷ್ಟೇ ಅಲ್ಲ, ಚಿತ್ರದ ಓರ್ವ ವಿತರಕನ ವಿರುದ್ಧವೂ ಮನಬಂದಂತೆ ಆರೋಪಗಳನ್ನು ಮಾಡಿದ್ದಾನೆ.

ಅದೆಲ್ಲ ಬದಿಗಿರಲಿ, ಪತ್ರಿಕಾಗೋಷ್ಠಿಯಲ್ಲಿ ಸರ್ವಾಧಿಕಾರಿಯಂತೆ ಪೋಸು ಕೊಟ್ಟ ಪ್ರೇಮ್ ವಿರುದ್ಧವೇ ಕಿರಣ್ ಕೇಸು ಜಡಿದು ಬುದ್ಧಿ ಕಲಿಸಲು ಮುಂದಾಗಿದ್ದೇ ತಡ ಪ್ರೇಮ್ ತನ್ನ ಚಿಲ್ಲರೆ ಪಟಾಲಂನ್ನು ಬಿಟ್ಟು ಡಾ. ಕಿರಣ್‌ಗೆ ಜೀವಬೆದರಿಕೆ ಒಡ್ಡುವ ಕೆಲಸಕ್ಕೆ ಮುಂದಾಗಿದ್ದಾನೆ.

ದಶಾವತಾರ ಗೂಂಡಾ ಅವತಾರ!

080-28365933 ಸಂಖ್ಯೆಯ ಕಾಯಿನ್‌ಬೂತ್ ಟೆಲಿಫೋನ್‌ನಿಂದ ಒಂದೇ ಸಮನೆ ಕಿರಣ್ ಅವರ 9845322333 ನಂಬರಿಗೆ ಫೋನು ಮಾಡಿದ ವ್ಯಕ್ತಿಗಳು "ಪ್ರೇಮ್ ವಿರುದ್ಧ ಮಾತನಾಡದೆ ತೆಪ್ಪಗಿದ್ದರೆ ಸರಿ, ಇಲ್ಲ ನಿನ್ನ ಜೀವ ತೆಗೀತೀವಿ'' ಎಂದು ಒಂದೇಸಮನೆ ಧಮಕಿ ಹಾಕಲು ಶುರು ಮಾಡಿದ್ದಾರೆ. ಇದರಿಂದ ವಿಚಲಿತರಾದ ಕಿರಣ್ ತಕ್ಷಣ ಚಂದ್ರಾಲೇಔಟ್ ಪೊಲೀಸ್ ಠಾಣೆಗೆ ಹೋಗಿ 24.8.09ರಂದು DWD 0299874 ಸಂಖ್ಯೆಯ ಕಂಪ್ಲೇಂಟ್ ಲಾಡ್ಜ್ ಮಾಡಿದರು. ಇದಾದನಂತರ ಪ್ರೇಮ್ ಆರೋಪಗಳಿಗೆ ಪ್ರತಿಕ್ರಿಯಿಸಿದ ಕಿರಣ್ ಕೆಲವು ಟೀವಿ ಚಾನೆಲ್ ಮತ್ತು ದಿನಪತ್ರಿಕೆಗಳಿಗೆ ಪ್ರತ್ಯುತ್ತರ ನೀಡಿದರು. ಇದರಿಂದ ನಖಶಿಖಾಂತ ಉರಿದುಹೋದ ಪ್ರೇಮ್ ತನ್ನ ಭಂಟ ದಶಾವತಾರ ಚಂದ್ರುನನ್ನು ಬಿಟ್ಟು ಕಿರಣ್‌ಗೆ ಧಮಕಿ ಹಾಕಿಸಿದ್ದಾನೆ. ಆಗಸ್ಟ್ 26ರ ಬುಧವಾರ ಡಾ. ಕಿರಣ್ ಬನಶಂಕರಿಯಲ್ಲಿರುವ ಕಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವೇಳೆಯಲ್ಲಿ ತನ್ನದೇ ಮೊಬೈಲಿನಿಂದ ಕರೆಮಾಡಿದ ದಶಾವತಾರ ಚಂದ್ರು ಕೆಟ್ಟಾಕೊಳಕು ಮಾತುಗಳನ್ನಾಡುತ್ತಾ "ಏನೋ ನನ್ ಮಗನೆ, ಪತ್ರಿಕೆಗಳಲ್ಲಿ ಪ್ರೇಮ್ ಬಗ್ಗೆ ಹೇಳಿಕೆ ಕೊಡ್ತಿದ್ದೀಯಾ? ಎಲ್ಲಿದ್ದೀಯಾ ಹೇಳು, ಅಲ್ಲೇ ಬಂದು ನಿನ್ನನ್ನ ಎತ್ತಿಬಿಡ್ತೀನಿ'' ಎಂಬಿತ್ಯಾದಿಯಾಗಿ ಬೆದರಿಸಿದ್ದಾನೆ.

ಯಾರೀ ಕಿರಣ್!



ಬೆಂಗಳೂರಿನ ಕಿಮ್ಸ್ ಸಂಸ್ಥೆಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ಟಿ.ವಿ. ಕಿರಣ್‌ಗೆ ತಮ್ಮ ಪ್ರೊಫೆಸರ್ ವೃತ್ತಿಯೊಂದಿಗೆ ಓವರ್‌ಸೀಸ್‌ನಲ್ಲಿ ಚಿತ್ರ ವಿತರಣೆ ಮಾಡುವುದು ಉಪಕಸುಬು. ಕನ್ನಡ ಸಿನಿಮಾಗಳ ಮೇಲಿನ ಅಭಿಮಾನದಿಂದ ಇಲ್ಲಿ ಬಿಡುಗಡೆಗೊಂಡು ಒಂದು ಮಟ್ಟದ ಯಶಸ್ಸನ್ನು ಪಡೆದ, ಸದಭಿರುಚಿಯಸಿನಿಮಾಗಳೆನಿಸಿಕೊಂಡ ಚಿತ್ರಗಳ ಹಕ್ಕನ್ನು ಪಡೆದು ಅಮೆರಿಕಾ, ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಬಿಡುಗಡೆ ಮಾಡಿ, ಅಲ್ಲಿನ ಕನ್ನಡ ಚಿತ್ರ ರಸಿಕರನ್ನೆಲ್ಲಾ ಸೇರಿಸಿ ಪ್ರದರ್ಶನ ಏರ್ಪಾಡು ಮಾಡುವುದು ಕಿರಣ್‌ಗೆ ಒಂದು ರೀತಿಯ ಹವ್ಯಾಸವೂ ಹೌದು, ಬಿಜಿನೆಸ್ಸೂ ಹೌದು.


ಹೊರದೇಶಗಳಲ್ಲಿ ಕನ್ನಡ ಚಿತ್ರಗಳು ಬಿಡುಗಡೆಗೊಂಡರೆ ಅಲ್ಲಿನ ಕನ್ನಡಿಗರ ಮಟ್ಟಿಗೆ ಅದೊಂದು ಹಬ್ಬವಿದ್ದಂತೆ. ಎಲ್ಲರೂ ಪರಸ್ಪರ ಇಮೇಲುಗಳನ್ನು ಕಳಿಸಿಕೊಂಡು, ಅಲ್ಲಿನ 'ಇಂಡಿಯಾ ಸ್ಟೋರ್ಸ್' ಹಾಗೂ ಕನ್ನಡಿಗರು ನಡೆಸುವ ಹೋಟೇಲು, ಅಂಗಡಿಗಳಲ್ಲಿ ಕನ್ನಡ ಸಿನಿಮಾಗಳ ಪೋಸ್ಟರ್‌ಗಳನ್ನು ಹಾಕಿಕೊಂಡು ಸಂಭ್ರಮಿಸುತ್ತಾರೆ. ಅಲ್ಲಿ ಒಂದು ಪ್ರದರ್ಶನ ಹೌಸ್‌ಫುಲ್ ಆದರೆ, ಕಿರಣ್‌ರಂಥ ವಿತರಕರಿಗೆ ಖರ್ಚು ಕಳೆದು ಎರಡು ಲಕ್ಷ ರೂಪಾಯಿ ಲಾಭವಾಗುತ್ತದೆ. ಅದರಲ್ಲಿ ಇಪ್ಪತ್ತೈದು ಪರ್ಸೆಂಟ್‌ನ ಕಮಿಷನ್ ಪಡೆದು ಮಿಕ್ಕುಳಿದ ಹಣವನ್ನು ಇಲ್ಲಿನ ನಿರ್ಮಾಪಕರಿಗೆ ನೀಡುವುದು ಅವರ ವ್ಯವಹಾರದ ದಾಟಿ.

ಈಗ 'ರಾಜ್' ಸಿನಿಮಾಕ್ಕೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಮತ್ತು ಇಂಟರ್‌ನೆಟ್ ತಾಣಗಳಲ್ಲಿ ಬ್ಯಾಡ್ ರೆಸ್ಪಾನ್ಸ್ ಬಂದಿರುವುದರಿಂದ ಹೊರ ದೇಶಗಳಲ್ಲಿ 'ರಾಜ್' ಚಿತ್ರದ ಪುಕ್ಕಟೆ ಪ್ರದರ್ಶನವಿಟ್ಟರೂ ಯಾರೂ ಬಂದು ಅದನ್ನು ನೋಡುವುದಿಲ್ಲ. ಹೀಗಿರುವಾಗ ಅಪಾರವಾದ ಖರ್ಚು, ಪ್ರಿಂಟು, ಪಬ್ಲಿಸಿಟಿ ಮಾಡಿ ಬಿಡುಗಡೆಗೊಳಿಸುವ ಧೈರ್ಯವನ್ನು ಕಿರಣ್ ಆಗಲಿ ಬೇರೆ ಯಾರೇ ಆಗಲಿ ಮಾಡಲಿಕ್ಕಿಲ್ಲ.

ದಶಾವತಾರಿಯ ಇಂತಹ ಗೊಡ್ಡು ಬೆದರಿಕೆಗೆ ಹೆದರದ ಕಿರಣ್ ತಕ್ಷಣ ಬನಶಂಕರಿ ಪೊಲೀಸ್ ಸ್ಟೇಷನ್ನಿಗೆ ಹೋಗಿ ಚಂದ್ರು ವಿರುದ್ಧವೂ ದೂರು ದಾಖಲಿಸಿದ್ದಾರೆ. ಹಿಂದೊಮ್ಮೆ 'ರಾಜ್' ಚಿತ್ರದ ಚಿತ್ರೀಕರಣ ಬನಶಂಕರಿ ಲಿಮಿಟ್ಸ್‌ನಲ್ಲಿ ನಡೆದಾಗ ಇನ್ಸ್‌ಪೆಕ್ಟರ್ ಶಿವಶಂಕರ ಮೂರ್ತಿಗೆ ಇದೇ ದಶಾವತಾರ ಚಂದ್ರು ಒಳ್ಳೆಯ ಟ್ರೀಟ್‌ಮೆಂಟ್ ನೀಡಿದ್ದನಂತೆ. ಹೀಗಾಗಿ ಇನ್ಸ್‌ಪೆಕ್ಟರ್ ಶಿವಶಂಕರ ಮೂರ್ತಿ ದಶಾವತಾರಿಯ ವಿರುದ್ಧ ಮೊದಲು ದೂರು ದಾಖಲಿಸಲು ಹಿಂದೆ ಮುಂದೆ ನೋಡಿದರಾದರೂ ನಂತರ ಕಿರಣ್‌ರ ಒತ್ತಾಯದ ಮೇರೆಗೆ ಕಾಟಾಚಾರಕ್ಕೆ ದೂರು ದಾಖಲಿಸಿ ಕೊಂಡು, ಚಂದ್ರುನನ್ನು ಕರೆಸುವ ಬದಲು ಆತನಿಗೆ ಕರೆ ಮಾಡಿ "ಇನ್ಮೇಲೆ ಹಂಗೆಲ್ಲಾ ಮಾಡ್ಬೇಡ್ರಿ...'' ಎಂದು ಹೇಳಿ ಕೈತೊಳೆದುಕೊಂಡಿದ್ದಾರೆ.

ಇಷ್ಟು ದಿನ ಗಿಮಿಕ್‌ಗಳಿಗೆ ಹೆಸರಾಗಿದ್ದ ಪ್ರೇಮ್ ಒಂದರ ಹಿಂದೆ ಒಂದು ಅವಾಂತರಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದರೆ, ಆತನ ಬಾಲದಂತೆ ಅಲೆಯುವ ದಶಾವತಾರಿ ತನ್ನ ಧಣಿ ಪ್ರೇಮ್ ವಿರುದ್ಧ ಮಾತನಾಡುವವರಿಗೆಲ್ಲಾ ಜೀವಬೆದರಿಕೆ ಒಡ್ಡುವ ಅನಾಹುತಕಾರಿ ಕೆಲಸಕ್ಕಿಳಿದಿದ್ದಾನೆ. ನಿರ್ದೇಶಕ ಪ್ರೇಮ್‌ನ ನಿರ್ನಾಮಕ್ಕೆ ದಶಾವತಾರಿಯೇ ಹಳ್ಳತೋಡುತ್ತಿದ್ದಾನೆ!

● ಅರುಣ್ ಕುಮಾರ್.ಜಿ



ಪ್ರೇಮ್ ಎಷ್ಟು ಪ್ರಾಮಾಣಿಕ?

ಇತ್ತೀಚೆಗೆ ಪ್ರೇಮ್ ಎಲ್ಲೆಡೆ "ನನ್ನ ಬಳಿ ಕೆಲಸ ಮಾಡಿದವರಿಗೆ ಮೂರರಿಂದ ಐದು ಲಕ್ಷಗಳ ಸಂಭಾವನೆ ಕೊಡಿಸಿದ್ದೀನಿ. ನನ್ನ ಅಸೋಸಿಯೇಟ್‌ಗಳಾಗಲಿ, ಸಹಾಯಕ ನಿರ್ದೇಶಕರಿಗಾಗಲಿ ಯಾರಿಗೂ ಮೋಸ ಮಾಡಿಲ್ಲ'' ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾನೆ. ಆದರೆ ಒಂದು ಮೂಲದ ಪ್ರಕಾರ ಪ್ರೇಮ್ ತನ್ನ ಹಿಂದಿನ ಚಿತ್ರಗಳ ನಿರ್ಮಾಪಕರಿಂದಾಗಲಿ, 'ರಾಜ್' ಚಿತ್ರದ ನಿರ್ಮಾಪಕ ಸುರೇಶ್ ಗೌಡರಿಂದಾಗಲಿ ತನ್ನೊಂದಿಗೆ ಕೆಲಸ ಮಾಡಿದ ಹುಡುಗರಿಗೆಂದು ಲಕ್ಷಗಟ್ಟಲೆ ಲೆಕ್ಕದಲ್ಲಿ ಹಣ ಪಡೆದಿರುವುದೇನೋ ನಿಜ. ಆದರೆ ಅವರ ಕೈಗಿಟ್ಟಿರುವುದು ಮಾತ್ರ ಹೆಚ್ಚೆಂದರೆ ಒಂದರಿಂದ ಒಂದೂವರೆ ಲಕ್ಷ ರೂಪಾಯಿಗಳನ್ನು ಮಾತ್ರ! ನಿರ್ಮಾಪಕರಿಗೆ ಸುಮ್ಮನೆ ಪುಸ್ತಕದಲ್ಲಿ ಲೆಕ್ಕ ತೋರಿಸಿ ಅವರಿಂದ ಪಡೆದ ಹಣವನ್ನು ಕಬಳಿಸುವುದರಲ್ಲಿ ಪ್ರೇಮ್‌ನ ಮ್ಯಾನೇಜರ್ ದಶಾವತಾರ ಚಂದ್ರುನದ್ದು ಪಳಗಿದ ಕೈ. ಈತ ಈ ಕಸುಬಗಿಳಿದ ಕೆಲವೇ ವರ್ಷಗಳಲ್ಲಿ ವಿಜಯನಗರದಲ್ಲಿ ಅತ್ಯಾಧುನಿಕವಾದ ಎಡಿಟಿಂಗ್ ಸ್ಟುಡಿಯೋವನ್ನು ಆರಂಭಿಸಿದ್ದಾನೆ ಮಾತ್ರವಲ್ಲ, ಪ್ರೇಮ್‌ನ ಮುಂದಿನ ಚಿತ್ರ 'ಅದ್ದ'ಕ್ಕೆ ಈತನೇ ನಿರ್ಮಾಪಕ ಎಂದರೆ ದಶಾವತಾರನ 'ದಗಲ್ಬಾಜಿ ಕೆಲಸ'ಗಳು ಹೇಗಿರಬೇಕೆಂದು ನೀವೇ ಊಹಿಸಿ!

ಹಿಂದೊಮ್ಮೆ ಸೆಕ್ಸ್ ಚಿತ್ರವೊಂದರಲ್ಲಿ ನಟಿಸಿದ್ದ ದಶಾವತಾರ ಚಂದ್ರು ಆನಂತರ ಯಾವ ಅವಕಾಶವೂ ಇಲ್ಲದೆ ದೇಶಾವರಿಯಂತೆ ಗಾಂಧಿನಗರದ ಸಣ್ಣಪುಟ್ಟ ನಿರ್ಮಾಪಕರ ಆಫೀಸುಗಳಲ್ಲಿ ಆಫೀಸ್ ಬಾಯ್ ಆಗಿದ್ದವನು. 'ಕರಿಯ' ಚಿತ್ರ ನಿರ್ಮಾಣದ ಸಂದರ್ಭದಲ್ಲಿ ಆನೇಕಲ್ ಬಾಲರಾಜ್ ಈತನನ್ನು ಕರೆದು ಪ್ರೊಡಕ್ಷನ್ ಮ್ಯಾನೇಜರ್ ಆಗಿ ನೇಮಿಸಿಕೊಂಡರು. ಅಂದು ಆರಂಭವಾದ ಪ್ರೇಮ್ ಮತ್ತು ಈತನ ದೋಸ್ತಿ ಇಂದು ತಮ್ಮ ವಿರುದ್ಧ ದನಿಯೆತ್ತುವವರಿಗೆ ಪ್ರಾಣಬೆದರಿಕೆ ಹಾಕುವ ಮಟ್ಟಕ್ಕೆ ಬೆಳೆದುನಿಂತಿದೆ.

ಅದೆಲ್ಲ ಏನೇ ಇದ್ದರೂ, ತನ್ನೊಟ್ಟಿಗೆ, ತನಗಾಗಿ ಹಗಲುರಾತ್ರಿ ಕಷ್ಟಪಟ್ಟು ದುಡಿದ ಹುಡುಗರ ಹೊಟ್ಟೆ ಮೇಲೆ ಪ್ರೇಮ್ ಹೊಡೆದಿದ್ದಾನಲ್ಲ, ಅವರಿಗೆ "ಅಷ್ಟು ಕೊಟ್ಟೆ, ಇಷ್ಟು ಕೊಟ್ಟೆ'' ಎಂದು ಭೋಂಗು ಬಿಡುತ್ತಿರುವುದು ಆತನ ಪ್ರಾಮಾಣಿಕತೆ ಯಾವ ಮಟ್ಟದ್ದು ಎಂದು ತೋರಿಸುತ್ತದೆ. ■

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 09-09-2009 RNI No. KARKAN2005/146



'ಹುಷಾರ್' - ಇದು ವೀರಪ್ಪನ್ ಕಥೆ!

ತಾನು ಮಾಡಿದ ಒಂದು ಚಿತ್ರಕ್ಕೂ ಮತ್ತೊಂದು ಚಿತ್ರಕ್ಕೂ ಸಂಬಂಧವೇ ಇಲ್ಲದಂತೆ ಸದಾ ಏನಾದರೊಂದು ಹೊಸ ಆವಿಷ್ಕಾರ ಮಾಡುವುದು ಆದರ್ಶ ಎಂಬ ಸಕಲ ಕಲಾವಲ್ಲಭನ ಅಭ್ಯಾಸ.

ಫಣಿ ರಾಮಚಂದ್ರ ಅವರ 'ದಂಡಪಿಂಡಗಳು' ಧಾರಾವಾಹಿಯಲ್ಲಿ ನಟಿಸುವ ಮೂಲಕ ಬಣ್ಣ ಹಚ್ಚಿದ ಆದರ್ಶ ನಂತರ ದಿ. ರಾಜೇಂದ್ರ ಬಾಬು ಅವರ ಗರಡಿಯಲ್ಲಿ ಪಳಗಿದರು. ಈತನ ದುರಾದೃಷ್ಟವೋ ಏನೋ ಈತನೇ ನಿರ್ಮಿಸಿ, ನಿರ್ದೇಶಿಸಿ, ನಾಯಕನಾಗಿ ನಟಿಸಿದ ಮೊದಲ ಚಿತ್ರ 'ದುಂಬಿ' ಅಂತಹ ಯಶಸ್ಸು ಕಾಣಲಿಲ್ಲ. ಎರಡನೇ ಚಿತ್ರ 'ನಗೆಹಬ್ಬ' ಸಾಧಾರಣವಾದ ಯಶಸ್ಸು ಕಂಡಿತ್ತು.

ಕಾಮಿಡಿ ನಟನಾಗೇ ಗುರುತಿಸಿಕೊಂಡಿರುವ ಆದರ್ಶ ಈ ಬಾರಿ 'ಹುಷಾರ್' ಎಂಬ ಸಸ್ಪೆನ್ಸ್ ಥ್ರಿಲ್ಲರ್ ಚಿತ್ರವೊಂದನ್ನು ಮಾಡಿ ಮುಗಿಸಿದ್ದಾರೆ. ತಾನು ಅಪಹರಿಸಿದ ವ್ಯಕ್ತಿಗಳ ಬಿಡುಗಡೆಗಾಗಿ ವೀರಪ್ಪನ್ ಪಡೆದ ಮೂವತ್ತು ಕೋಟಿ ರೂಪಾಯಿಗಳು, ಆತನ ಮರಣಾನಂತರ ಒಂದು ಹಳ್ಳಿಯ ಸಾಮಾನ್ಯ ಹುಡುಗರ ಕೈಗೆ ಸಿಕ್ಕರೆ ಏನಾಗುತ್ತದೆ? ಆದರಿಂದ ಏನೆಲ್ಲಾ ಅನಾಹುತಗಳು ಸಂಭವಿಸುತ್ತದೆ ಎಂಬ ಕತೆಯೇ 'ಹುಷಾರ್' ಚಿತ್ರದ್ದು.

ಇತ್ತೀಚಿನ ದಿನಗಳಲ್ಲಿ ಬರುತ್ತಿರುವ ಕನ್ನಡ ಚಿತ್ರಗಳಲ್ಲಿ ಕಥೆಯೇ ಇಲ್ಲ ಎಂದು ಗೊಣಗುವವರ ಮುಂದೆ ಆದರ್ಶ ಗಟ್ಟಿ ಕಥೆಯುಳ್ಳ ಚಿತ್ರಕ್ಕೆ ಜೀವ ತುಂಬಿದ್ದಾರೆ. ಮುಂದಿನ ವಾರ ಬಿಡುಗಡೆಗೊಳ್ಳುವ ಈ ಸಸ್ಪೆನ್ಸ್ ಚಿತ್ರ ಪ್ರೇಕ್ಷಕರಲ್ಲಿ ಥ್ರಿಲ್ ಹುಟ್ಟಿಸುತ್ತದೆ ಎಂದು ಕಾದುನೋಡಬೇಕು.

ಹಗಲುಗನಸಿನಲ್ಲಿ ಎಸ್ನಾಣಿ!





ಕಳೆದೆರಡು ವರ್ಷಗಳಿಂದ ಪತ್ರಕರ್ತರೊಂದಿಗೆ ಟೂ ಬಿಟ್ಟಿದ್ದ ನಿರ್ದೇಶಕ ಎಸ್.ನಾರಾಯಣ್ ಈಗ ಪತ್ರಕರ್ತರೊಂದಿಗೆ ಸಿಕ್ಕಾಪಟ್ಟೆ ಫ್ರೆಂಡ್ಲಿಯಾಗಿದ್ದಾರೆ. ಎಷ್ಟರಮಟ್ಟಿಗೆಂದರೆ ಅವರ ಮುದ್ದಿನ ಮಗ ಪಂಕಜ್ ನಟಿಸಿರುವ ಎರಡನೇ ಚಿತ್ರ 'ಚೆಲುವಿನ ಚಿಲಿಪಿಲಿ'ಗಾಗಿ ಎರಡು ವಾರಗಳ ಅಂತರದಲ್ಲಿ ಎರಡು ಬಾರಿ ಪ್ರೆಸ್‌ಮೀಟ್ ಕರೆದಿದ್ದಾರೆ ಎಸ್ನಾಣಿ!

ಆದರೆ ಈ ಎರಡೂ ಪ್ರೆಸ್‌ಮೀಟುಗಳಲ್ಲಿ ಅಪ್ಪ-ಮಗ ಮಾತನಾಡಿದ್ದು ಬಹಳ ಕಡಿಮೆ. ಬದಲಾಗಿ ವಿಮರ್ಶಕರು ತನ್ನ ಮಗನ ಬಗ್ಗೆ ಕಟುವಾಗಿ ಬರೆದ ಬಗ್ಗೆ ನಾರಾಯಣ್ ಗೋಗರೆದದ್ದಷ್ಟೇ. ಇದೀಗ ಬಂದಿರುವ ಸುದ್ದಿಯ ಪ್ರಕಾರ ತೆಲುಗಿನ 'ಕೊತ್ತ ಬಂಗಾರ ಲೋಕಂ' ಚಿತ್ರವನ್ನು ನೋಡಿದ ನಾರಾಯಣ್ ಅದನ್ನು ತನ್ನ ಮಗನಿಗಾಗಿ ಯಥಾವತ್ತು ಕನ್ನಡೀಕರಿಸಿದ್ದಾರೆ. ಈ ಬಗ್ಗೆ ಎಂದಿನಂತೆ ನಾರಾಯಣ್ ಎಲ್ಲೂ-ಯಾವತ್ತೂ-ಏನೂ ಬಾಯಿ ಬಿಟ್ಟಿಲ್ಲ. ಗಣೇಶ್‌ಗೆ ಹೊಸ ಲೈಫ್ ನೀಡಿದ್ದ 'ಚೆಲುವಿನ ಚಿತ್ತಾರ'ದ ಮಾದರಿಯಲ್ಲೇ 'ಚೆಲುವಿನ ಚಿಲಿಪಿಲಿ' ಇದೆಯಂತೆ. ಹೀಗಾಗಿ ತನ್ನ ಮಗನೂ ಗಣೇಶ್ ತರಹ ಸಿಲ್ವರ್‌ಜ್ಯೂಬಿಲಿ ನಟನಾಗುತ್ತಾನೆ ಎಂದು ನಾರಾಯಣ್ ಹಗಲುಗನಸು ಕಾಣುತ್ತಿದ್ದಾರೆ, ಏನಾಗುತ್ತದೋ ನೋಡೋಣ.

ಅಟ್ಟಕ್ಕೇರಿಸಿದರೂ ನೀಟಾಗಿತ್ತು!



ಗೂಂಡಾ ಕಾಯ್ದೆ ಜಾರಿ, ಸಿನಿಮಾ ಅಕಾಡೆಮಿ ಸ್ಥಾಪನೆ, ಸಬ್ಸಿಡಿಯನ್ನು ಇಪ್ಪತ್ತು ಚಿತ್ರಗಳಿಂದ ಐವತ್ತಕ್ಕೆ ಏರಿಸಿದ್ದು, ಚಲನಚಿತ್ರ ಪ್ರದರ್ಶನದ ಸಮಯ ಬದಲಾವಣೆ ಮಾಡಿದ್ದು, ಅಶಕ್ತ ಕಲಾವಿದರಿಗೆ ನಿಧಿಸ್ಥಾಪನೆ, ಅಮೃತ ಮಹೋತ್ಸವ ಭವನ ನಿರ್ಮಾಣ, ರಾಜ್ ಸಮಾಧಿ ಕಾರ್ಯಕ್ಕೆ ಚಾಲನೆ... ಹೀಗೆ ಚಿತ್ರರಂಗದ ಹಲವು ಬೇಡಿಕೆಗಳನ್ನು ಈಡೇರಿಸಿದ್ದರಿಂದ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಕೆಲ ಸಚಿವರಿಗೆ ಚಲನಚಿತ್ರ ವಾಣಿಜ್ಯ ಮಂಡಳಿ ಹಾಡು, ನೃತ್ಯಗಳ ಮೂಲಕ ಮೊನ್ನೆ ಧನ್ಯವಾಗಳನ್ನು ಅರ್ಪಿಸಿತು. ಹಿಂದಿನ ಕಾಲದಲ್ಲಿ ರಾಜಮಹಾರಾಜರ ಆಸ್ಥಾನದಲ್ಲಿ ಅವರ ಸಂತೋಷಕ್ಕೆಂದೇ ಕಲಾವಿದರು ಹಾಡಿ ಕುಣಿಯುತ್ತಿದ್ದರಲ್ಲ, ಹಾಗಿತ್ತು ನಮ್ಮ ಚಿತ್ರರಂಗದವರ ಧನ್ಯವಾದ ಕಾರ್ಯಕ್ರಮ! ಕೆಲವು ವರ್ಷಗಳ ಹಿಂದೆ ಜಯಲಲಿತಾ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದಾಗ ಇದೇ ತರಹ ಗೂಂಡಾ ಆಕ್ಟ್ ಕಾಯ್ದೆಯನ್ನು ಜಾರಿಗೆ ತಂದಾಗ ರಜನೀಕಾಂತ್, ಕಮಲ್‌ಹಾಸನ್ ಸಮೇತ ಇಡೀ ಉದ್ಯಮ ಜಯಲಲಿತಾರನ್ನು ಕೊಂಡಾಡಿ ಅಭಿನಂದಿಸಿತ್ತು. ಹೇಳಿ ಕೇಳಿ, ನಮ್ಮ ಚಿತ್ರರಂಗದವರು ರೀಮೇಕ್ ಪ್ರಿಯರಲ್ಲವೆ? ಆದ್ದರಿಂದ ಅಂದು ತಮಿಳುನಾಡಿನಲ್ಲಿ ನಡೆದಿದ್ದ ಸಮಾರಂಭವನ್ನೇ ಇವರು ಕೂಡ ಮೊನ್ನೆ ಅರಮನೆ ಮೈದಾನದಲ್ಲಿ ರಿಮೇಕ್ ಮಾಡಿದರು!

ಒಂದೇ ಒಂದು ಸಮಾಧಾನದ ಸಂಗತಿ ಯಾವುದೆಂದರೆ ಇತ್ತೀಚೆಗೆ ತಾನೆ ಅಮೃತ ಮಹೋತ್ಸವ ಎಂಬ ಅತಿ ಕೆಟ್ಟ ಕಾರ್ಯಕ್ರಮ ನೀಡಿದ್ದ ಚಿತ್ರರಂಗ ಈ ಬಾರಿ ಎಲ್ಲರೂ ಮೆಚ್ಚುವಂತಹ ಕಾರ್ಯಕ್ರಮ ನೀಡಿದ್ದು. ಅಷ್ಟೇ ಅಲ್ಲ, ಈ ಬಾರಿ ಸಭಾ ಮರ್ಯಾದೆ, ಗಾಂಭೀರ್ಯ, ಸಮಯಪಾಲನೆ, ಶಿಸ್ತು... ಎಲ್ಲವೂ ಅಚ್ಚುಕಟ್ಟಾಗಿತ್ತು, ಯಡ್ಡಿಯನ್ನು ಯದ್ವಾ ತದ್ವಾ ಹೊಗಳಿ ಅಟ್ಟಕ್ಕೇರಿಸಿದ್ದು ಅಸಹ್ಯವಾಗಿತ್ತು ಎಂಬುದನ್ನು ಹೊರತುಪಡಿಸಿ ನೋಡಿದರೆ ಉಳಿದಿದ್ದೆಲ್ಲವೂ ನೀಟಾಗಿತ್ತು.

ನಿದ್ದೆಗೆಡಿಸಿಕೊಂಡ ನಿರ್ದೇಶಕರು!



'ರಾಜ್' ಚಿತ್ರಕ್ಕೆ ಹೆದರಿ ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡಲು ಅನೇಕ ನಿರ್ಮಾಪಕರು ಮತ್ತು ನಿರ್ದೇಶಕರು ಹಿಂಜರಿದಿದ್ದರು. ಅಂತಹವರಲ್ಲಿ 'ಪ್ರೇಮ್ ಕಹಾನಿ' ನಿರ್ದೇಶಿಸಿರುವ ಆರ್.ಚಂದ್ರು ಮತು 'ಮನಸಾರೆ' ನಿರ್ದೇಶಿಸಿರುವ ಯೋಗರಾಜ್ ಭಟ್ ಕೂಡ ಇದ್ದರು. ಇದೀಗ 'ರಾಜ್' ಗಲ್ಲಾಪೆಟ್ಟಿಗೆಯಲ್ಲಿ ಅಭೂತಪೂರ್ವವಾಗಿ ನೆಲಕಚ್ಚಿರುವುದರಿಂದ ಬೇರೆಯವರು ತಮ್ಮ ತಮ್ಮ ಚಿತ್ರಗಳ ಬಿಡುಗಡೆಗೆ ಓಡಾಡಲಾರಂಭಿಸಿದ್ದಾರೆ. ಮುಖ್ಯವಾಗಿ ಇಡೀ ಗಾಂಧಿನಗರದ ಜನರ ಕಣ್ಣು 'ಪ್ರೇಮ್ ಕಹಾನಿ' ಮೇಲಿದೆ. ಇದರ ನಿರ್ದೇಶಕ ಚಂದ್ರು 'ತಾಜ್‌ಮಹಲ್' ಚಿತ್ರದಿಂದ ಚಿತ್ರರಂಗಕ್ಕೆ ಪರಿಚಿತನಾದವನು. ನೋಡಲು ಸ್ವಲ್ಪ ಪ್ರೇಮ್ ತರವೇ ಕಾಣಿಸುವ ಚಂದ್ರುಗೂ ಪ್ರೇಮ್‌ನಂತೆಯೇ ಪಬ್ಲಿಸಿಟಿ ಮತ್ತು ಗಿಮಿಕ್‌ಗಳೆಂದರೆ ಪಂಚಪ್ರಾಣ. ಆತನ ನಿರ್ದೇಶನದ 'ತಾಜ್‌ಮಹಲ್' ಗೆದ್ದಿದ್ದೇ ಆತನ ಪಬ್ಲಿಸಿಟಿ ಗಿಮಿಕ್‌ಗಳಿಂದ ಎಂಬುದು ಅನೇಕರ ಅಭಿಪ್ರಾಯ.



ಈಗ 'ರಾಜ್' ಚಿತ್ರ ಮುಗ್ಗರಿಸಿರುವಾಗ ಚಂದ್ರು ಮುಖದಲ್ಲಿ ಮಂದಹಾಸವಂತೂ ಕಾಣುತ್ತಿಲ್ಲ. ಅದಕ್ಕೆ ಕಾರಣ 'ರಾಜ್' ಚಿತ್ರಕ್ಕಾದ ಗತಿಯೇ ತನಗೂ ಆಗಬಹುದೇನೋ ಎಂಬ ಚಿಂತೆ ಎಂದು ಗಾಂಧಿನಗರದ ಜನ ತಮಾಷೆ ಮಾಡುತ್ತಿದ್ದಾರೆ.

ಯೋಗರಾಜ್ ಭಟ್ ಕೂಡಾ ಒಂದು ರೀತಿಯಲ್ಲಿ ಅಗ್ನಿಪರೀಕ್ಷೆ ಎದುರಿಸುತ್ತಿದ್ದಾರೆ. ಇವರ 'ಮನಸಾರೆ' ಚಿತ್ರದ ಹಾಡುಗಳು ಅವರ ಹಿಂದಿನ ಚಿತ್ರಗಳಂತೆ ನಿರೀಕ್ಷಿಸಿದಷ್ಟು ಜನಪ್ರಿಯವಾಗಿಲ್ಲ. ಅಷ್ಟೇ ಅಲ್ಲ, ಗೋಲ್ಡನ್ ಸ್ಟಾರ್ ಗಣೇಶ್ ಇಲ್ಲದೆ ಇವರು ನಿರ್ದೇಶಿಸಿರುವ ಮೊದಲ ಚಿತ್ರ ಇದಾಗಿರುವುದರಿಂದ ಯೋಗರಾಜ್ ಭಟ್ ಮೇಲೆ ಹೆಚ್ಚಿನ ಒತ್ತಡವಿದೆ.

ಹೀಗೆ 'ರಾಜ್' ಚಿತ್ರದ ಸೋಲಿನ ನಂತರ ಕನ್ನಡದ ಇಬ್ಬರು ಪ್ರತಿಭಾವಂತ ಮತ್ತು ಜನಪ್ರಿಯ ನಿರ್ದೇಶಕರುಗಳಾದ ಯೋಗರಾಜ್ ಭಟ್ ಮತ್ತು ಆರ್.ಚಂದ್ರು ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆಯುತ್ತಿದ್ದಾರೆ. ಇವೆರಡೂ ಚಿತ್ರಗಳ ಸೋಲು ಗೆಲುವು ಆ ಚಿತ್ರದ ನಿರ್ಮಾಪಕರಿಗೆ ಮಾತ್ರವಲ್ಲ ಈ ನಿರ್ದೇಶಕರಿಗೂ ಅತಿ ಮುಖ್ಯವಾಗಿದೆ ಎಂಬುದಂತೂ ಸತ್ಯ.

ಜಂಭದ ಹುಡುಗಿಯ ಜಡ್ಜ್‌ಮೆಂಟ್!

'ಜಂಬದ ಹುಡುಗಿ' ಚಿತ್ರದ ನಾಯಕಿ ಕಂ ನಿರ್ದೇಶಕಿ ಪ್ರಿಯಾ ಹಾಸನ್ ಚಿತ್ರದ ಟೈಟಲ್‌ಗೆ ತಕ್ಕುದಾಗಿ ವರ್ತಿಸಿದ್ದಾಳೆ.

ತಾನು ಸ್ವತಃ ಜ್ವರದಿಂದ ಬಳಲುತ್ತಾ ಹಾಸಿಗೆ ಹಿಡಿದಿದ್ದರೂ, ಸಿದ್ಧಲಿಂಗಯ್ಯ ನೇತೃತ್ವದ ಸಬ್ಸಿಡಿ ಆಯ್ಕೆ ಸಮಿತಿ ವಿರುದ್ಧ ಹಾಸಿಗೆಯಿಂದಲೇ ಬಂಡಾಯದ ಬಾವುಟ ಹಾರಿಸಿದ್ದಾಳೆ.



"ನನ್ನ ಚಿತ್ರಕ್ಕೆ ಸಬ್ಸಿಡಿ ನೀಡದೆ ಈ ಸಮಿತಿ ಅನ್ಯಾಯ ಮಾಡಿದೆ; ಕೆಲವು ಯೋಗ್ಯತೆಯಿಲ್ಲದ ಚಿತ್ರಗಳಿಗೆ ಈ ಸಮಿತಿ ಸಬ್ಸಿಡಿ ನೀಡಿದೆ'' ಎಂದು ಆಕೆ ಕೋರ್ಟಿಗೆ ದೂರು ನೀಡಿದ್ದಾಳೆ. ಕೋರ್ಟು ಈಕೆಯ ಅಪೀಲನ್ನು ಸ್ವೀಕರಿಸಿದೆ.

ಸದ್ಯಕ್ಕೆ ಈ 'ಜಂಬದ ಹುಡುಗಿ' ಕೋರ್ಟ್ ಮೆಟ್ಟಿಲೇರಿದ್ದು ನೋಡಿ ಆಯ್ಕೆ ಸಮಿತಿ ಸದಸ್ಯರೆಲ್ಲ ದಂಗಾಗಿಹೋಗಿದ್ದಾರೆ. 'ಜಂಬದ ಹುಡುಗಿ' ಚಿತ್ರ ಸಬ್ಸಿಡಿ ಯೋಗ್ಯವೋ ಇಲ್ಲವೋ ಗೊತ್ತಿಲ್ಲ; ಆದರೆ ಆಯ್ಕೆ ಸಮಿತಿ ಅನೇಕ ಯೋಗ್ಯ ಚಿತ್ರಗಳಿಗೆ ಸಬ್ಸಿಡಿ ನೀಡಿಲ್ಲ ಎಂದು ಗಾಂಧಿನಗರದವರು ಗುನುಗುತ್ತಿರುವುದಂತೂ ನಿಜ. ಆದರೆ ಈ ಹುಡುಗಿ ಗುನುಗುವ ಬದಲಿಗೆ ನೇರ ಕೋರ್ಟ್ ಮೆಟ್ಟಿಲೇರಿರುವುದು ಎಲ್ಲರಲ್ಲಿ ಅಚ್ಚರಿ ಮೂಡಿಸಿದೆ.

ನಂ.1 ನಾಪತ್ತೆ!



ಇನ್ನು ಮೂರು ತಿಂಗಳು ಕಳೆದರೆ ಕನ್ನಡ ಚಿತ್ರರಂಗದ ನಂ.1 ನಟಿ ಎಂದೆನಿಸಿರುವ ರಮ್ಯಾಳ ಒಂದೇ ಒಂದು ಚಿತ್ರ ಕೂಡಾ ಬಿಡುಗಡೆಯಾಗದೆ ಒಂದು ವರ್ಷವೇ ಸಂದುಹೋಗುತ್ತದೆ. ಆದರೂ ಯಾವಾಗಲೂ ರಮ್ಯಾ ಸುದ್ದಿಯಲ್ಲಿರುತ್ತಾಳೆ. ಮೊನ್ನೆ ಮೊನ್ನೆ ಮುಖ್ಯಮಂತ್ರಿಯನ್ನು ಖಾಸಗಿ ಚಾನೆಲ್‌ವೊಂದಕ್ಕೆ ಸಂದರ್ಶನ ಮಾಡಿ ಆಕೆ ಚಿತ್ರರಂಗದ ಉಳಿದ ನಾಯಕಿಯರು ಹೊಟ್ಟೆಯುರಿದುಕೊಳ್ಳುವಂತೆ ಮಾಡಿದ್ದಾಳೆ.

ಕಳೆದ ಒಂಭತ್ತು ತಿಂಗಳಲ್ಲಿ ತನಗೆ ಬಂದ ಚಿತ್ರಗಳ ಕಥೆ ಸರಿಯಿಲ್ಲವೆಂದು ಆಕೆಯೇ ನಿರಾಕರಿಸಿದ ಚಿತ್ರಗಳು ಬಹಳಷ್ಟಿವೆ. ಈ ಮಧ್ಯೆ ರಮ್ಯಾ ನಟಿಸಲಿದ್ದ ಕೆಲವು ಚಿತ್ರಗಳು ಮುಹೂರ್ತದ ನಂತರ ನಿಂತೇ ಹೋದವು. 'ಉಲ್ಲಾಸ' ಚಿತ್ರ ಇದಕ್ಕೊಂದು ಉದಾಹರಣೆ. ಅಷ್ಟೇ ಅಲ್ಲದೆ, ಪ್ರೇಮ್ ಜೊತೆ ಈಕೆ ನಟಿಸಿರುವ 'ಜೊತೆಗಾರ' ಕೊನೆ ಕ್ಷಣದಲ್ಲಿ ತೆರೆ ಕಾಣದೆ ನಿಂತದ್ದೂ ಆಕೆಯ ಬ್ಯಾಡ್‌ಲಕ್. ಆ ಚಿತ್ರದ ಪತ್ರಿಕಾಗೋಷ್ಠಿಯಲ್ಲೂ ಆಕೆ ಮತ್ತು ಪತ್ರಕರ್ತರ ನಡುವೆ ಮಾತಿನ ಜಟಾಪಟಿ ನಡೆದದ್ದನ್ನು ಇಲ್ಲಿ ಸ್ಮರಿಸಬಹುದು. ಇನ್ನು ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಭೀಮೂಸ್ ಬ್ಯಾಂಗ್, ಬ್ಯಾಂಗ್ ಕಿಡ್ಸ್' ಚಿತ್ರ ಕೂಡಾ ಬಿಡುಗಡೆಗೆ ಸಿದ್ಧವಾಗಿ ವರ್ಷ ಉರುಳುತ್ತಾ ಬಂದರೂ ಇನ್ನೂ ತೆರೆಗೆ ಬರಲು ಸಮಯ ಕೂಡಿಬಂದಿಲ್ಲ.

ಅದೇನೆ ಇರಲಿ, ಬಹುಶಃ ಮುಂದಿನ ಮೂರು ತಿಂಗಳ ಅವಧಿಯಲ್ಲಿ ಆಕೆಯ ಮೂರು ಚಿತ್ರಗಳು ಬಿಡುಗಡೆಗೊಳ್ಳುವ ಸಾಧ್ಯತೆ ಇದೆ. ನಿರ್ಮಾಪಕ ಅಶ್ವಿನಿ ರಾಂಪ್ರಸಾದ್ ಅವರ ಆರ್ಥಿಕ ಸಮಸ್ಯೆ ಪರಿಹಾರಗೊಂಡರೆ 'ಜೊತೆಗಾರ' ರಿಲೀಸಾಗುತ್ತದೆ. ಅದಾದ ಮೇಲೆ ಸುದೀಪ್ ಜೊತೆ ನಟಿಸಿರುವ 'ಜಸ್ಟ್ ಮಾತ್‌ಮಾತಲ್ಲಿ...' ಬರಲಿದೆ. ಆನಂತರ 'ಹುಚ್ಚ-ಕಿಚ್ಚ' ತೆರೆಕಾಣಲು ರೆಡಿಯಾಗಿದೆ. ರಮ್ಯಾ ನಿಜಕ್ಕೂ ಚೂಸಿಯಾಗಿ ಚಿತ್ರಗಳನ್ನು ಆಯ್ಕೆ ಮಾಡುವುದರಿಂದ ಇಷ್ಟು ಕಡಿಮೆ ಸಂಖ್ಯೆಯ ಚಿತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆಯೇ? ಅಥವಾ ಹೊಸಬರ ಆಗಮನದ ನಂತರ ಗಾಂಧಿನಗರದ ನಿರ್ಮಾಪಕರಿಗೆ ಈಕೆಯ ಕ್ರೇಜ್ ಕಡಿಮೆಯಾಗಿದೆಯೇ? ಗೊತ್ತಿಲ್ಲ. ಆದರೆ ಇದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದ ರಮ್ಯಾ ಮಹಾರಾಣಿಯಂತೆ ಕಾಣಿಸುತ್ತಿದ್ದಾಳೆ ಎಂಬುದಂತೂ ದಿಟ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore